ಐಕ್ಯರಂಗ

ಸಂಪುಟ 21 ಸಂಚಿಕೆ 45

ನವಂಬರ್ 2-8, 1998 ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ



ಬಿಜೆಪಿಯ ವಣಿಜ-ಪ್ರಿಯ ಆರ್ಥಿಕ ನೀತಿಯ ದೊಂಬರಾಟ

ಸಿರಾದಲ್ಲಿ ರೈತರ ಪ್ರಾಣದ ಚೆಲ್ಲಾಟ

ಜಿ.ಎನ್.ನಾಗರಾಜ್

ಸಿರಾದಲ್ಲಿ ಐದು ಜನ ರೈತರು ಗೋಲಿಬಾರಿನಿಂದ ಮರಣ ಹೊಂದಿದ ಸುದ್ದಿ ರಾಜ್ಯದ ಜನಮಾನಸದ ಮೇಲೆ ಬರಸಿಡಿಲಿನಂತೆರಗಿದೆ. ಕಡಲೇಕಾಯಿ (ಶೇಂಗಾ) ಬೆಲೆಯ ತೀವ್ರ ಕುಸಿತದ ಕಾರಣದಿಂದ ಬೇಸತ್ತ ರೈತರು ಬೆಂಗಳೂರು- ಪೂನಾ ರಾಷ್ಟ್ರೀಯ ಹೆದ್ದಾರಿ ತಡೆ ಮಾಡುತ್ತಿದ್ದಾಗ ಅವರ ಮೇಲೆ ಲಾಠೀ ಚಾರ್ಜ್ ಹಾಗೂ ಗೋಲಿಬಾರ್ ನಡೆದು ಈ ಹತ್ಯೆಗಳಾಗಿವೆ. ಒಬ್ಬ ಪೋಲೀಸ್ ಅಧಿಕಾರಿಯೂ ಈ ಸಂದರ್ಭದಲ್ಲಿ ಮೃತಪಟ್ಟಿದ್ದಾರೆ. ಈ ಅವಕಾಶವನ್ನು ಬಳಸಿಕೊಂಡು ಸಮಾಜ ಘಾತುಕ ಶಕ್ತಿಗಳು ಹಿಂಸಾಚಾರಕ್ಕಿಳಿದಿವೆ.

ಸಿರಾ ರೈತರ ಈ ಹತ್ಯೆ ಇಡೀ ರಾಜ್ಯದ ರೈತರ ಮೇಲೆ ಆಗುತ್ತಿರುವ ಧಾಳಿಗಳ ಮುಂದುವರಿಕೆಯಾಗಿದೆ. ರಾಜ್ಯದ ಮಾತ್ರ ಏಕೆ ಇಡೀ ದೇಶದಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆಗಳ, ಜೀವ ಬಿಡುವ-ಜೀವ ಬಿಡಲಾಗದ ಸಂಕಟಗಳ ಮತ್ತೊಂದು ಮತ್ತಷ್ಟು ಭೀಕರ ರೂಪವಾಗಿದೆ. ಸಿರಾದ ರೈತರ ಈ ಹೋರಾಟಕ್ಕೆ ರಾಷ್ಟ್ರೀಯ-ಅಂತರ್ರಾಷ್ಟ್ರೀಯ ಹಿನ್ನೆಲೆಯಿದೆ. ಅದೇ ರೀತಿ ಸ್ಥಳೀಯ ಕಾರಣಗಳೂ ಇವೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಣಿಜಪ್ರಿಯ ನೀತಿಯ ಜೊತೆಗೆ ಜನತಾದಳ ಸರ್ಕಾರದ ಪೋಲೀಸ್ ನೀತಿಯೂ ಈ ಹತ್ಯೆಗೆ ಕಾರಣವಾಗಿದೆ.

ಕೇಂದ್ರದಲ್ಲಿ '91 ರಿಂದ ಜಾರಿಗೆ ಬಂದ ಆರ್ಥಿಕ ನೀತಿಯ ಭಾಗವಾಗಿ ಖಾದ್ಯ ತೈಲಗಳ ಆಮದಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹ ಸಿಕ್ಕಿತು. ಗ್ಯಾಟ್-ಡಂಕಲ್ ಪ್ರಸ್ತಾವಗಳನ್ನು ಅಂದಿನ ಕೇಂದ್ರ ಸರ್ಕಾರ ಒಪ್ಪಿ ಸಹಿ ಮಾಡಿದ ದಿನವೇ ವಿಶ್ವದ ಇತರ ಭಾಗಗಳಿಂದ ಒತ್ತಾಯಪೂರ್ವಕವಾಗಿ ಕೃಷಿ ಉತ್ಪಾದನೆಗಳ ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯತೆಗೆ ಭಾರತ ಕಟ್ಟುಬಿತ್ತು. ಅಂದಿನಿಂದ ಖಾದ್ಯತೈಲಗಳ ಆಮದನ್ನು ಹೆಚ್ಚಿಸುತ್ತಾ ಬಂದ ಕೇಂದ್ರ ಸರ್ಕಾರದ ಈ ನೀತಿಯ ಫಲವಾಗಿ 93-94 ರ ವರೆಗೂ ಭಾರತಕ್ಕೆ ಕೊರತೆ ಇರುವಷ್ಟು ಮಾತ್ರ ಎಂದರೆ 1 ಲಕ್ಷದಿಂದ 2 ಲಕ್ಷ ಟನ್ ಖಾದ್ಯ ತೈಲ ಆಮದಾಗುತ್ತಿದ್ದರೆ ನಂತರದ ವರ್ಷಗಳಲ್ಲಿ ಇದು ಹತ್ತಾರು ಲಕ್ಷ ಟನ್‌ಗಳಿಗೇರಿದೆ.

ಬಿಜೆಪಿ ಅಧಿಕಾರ - ವಣಿಜ ಸಮುದಾಯಕ್ಕೆ ಬಂದ ರೆಕ್ಕೆ

ಈ ಮಧ್ಯೆ ಬಿಜೆಪಿ ಅಧಿಕಾರಕ್ಕೆ ಬಂದದ್ದು ಹಲವು ದಶಕಗಳಿಂದ ನಿರಂತರವಾಗಿ ಬಿಜೆಪಿಗೆ ಅದರ ಹಿಂದಿನ ರೂಪ ಜನಸಂಘಕ್ಕೆ ಬೆಂಬಲ ನೀಡುತ್ತಾ ಬಂದಿದ್ದ ವಣಿಜ ಸಮುದಾಯಕ್ಕೆ ರೆಕ್ಕೆ ಬಂದಂತಾಯಿತು, ಕೃತಕ ಅಭಾವಗಳನ್ನು ಸೃಷ್ಟಿಸಿ ಬೆಲೆ ಏರಿಸುವ ಅವರ ಕಾಳಸಂತೆ ಕೋರತನಕ್ಕೆ ಹೊಸ ಅವಕಾಶಗಳನ್ನು ತೆರೆದಿಟ್ಟಂತಾಯಿತು. ಅದರಲ್ಲಿಯೂ ಬಿಜೆಪಿ ರಾಜ್ಯ ಸರ್ಕಾರಗಳೂ ಇದ್ದ ರಾಜ್ಯಗಳಲ್ಲಿ ಅವರ ಸಂತೋಷಕ್ಕೆ ಪಾರವೇ ಇಲ್ಲ, ಕುಕೃತ್ಯಗಳಿಗೆ ಮಿತಿಯೇ ಇಲ್ಲವೆಂದಾಯಿತು. ರಾಜ್ಯ ಮಟ್ಟದಲ್ಲಿಯೂ ಅವರದೇ ಸರ್ಕಾರ. ದೇಶ ಮಟ್ಟದಲ್ಲಿಯೂ ಅವರದೇ ಸರ್ಕಾರ. ಎಲ್ಲಾ ಕಾನೂನುಗಳೂ, ಕಾನೂನು-ಆಡಳಿತ ಯಂತ್ರ ಅವರ ಮೇಲೆ ಹರಿಹಾಯಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿ. ಇದರ ಫಲವಾಗಿ ಖಾದ್ಯ ತೈಲಗಳ ಕಲಬೆರಕೆಯಿಂದ ದೆಹಲಿ, ಉತ್ತರ ಪ್ರದೇಶದಲ್ಲಿ ಹಲವಾರು ಸಾವುಗಳು ಇತ್ಯಾದಿ ಘಟನೆಗಳು. ಅವುಗಳ ಜೊತೆಗೆ ಈರುಳ್ಳಿ(ಉಳ್ಳಾಗಡ್ಡೆ), ಆಲೂಗೆಡ್ಡೆ (ಬಟಾಟೆ), ಅಡಿಗೆ ಎಣ್ಣೆಗಳ ಬೆಲೆಗಳ ದಿಡೀರ್ ಏರಿಕೆ - ಅದೂ ಹಬ್ಬಗಳ ಸಾಲು ಆರಂಭವಾದ ತಿಂಗಳುಗಳಲ್ಲಿಯೇ. ಇದರಿಂದ ದೊಡ್ಡ ದೊಡ್ಡ ಸಗಟು ವ್ಯಾಪಾರಗಾರರು ಪಡೆದ ಲಾಭದ ಲೆಕ್ಕ ಇಟ್ಟವರಾರು?

ಬೆಂಕಿಯೊಡನೆ ಸರಸಕ್ಕಿಳಿದ ಬಿಜೆಪಿ ಸರ್ಕಾರ

ಆಡಳಿತ ಯಂತ್ರದ ಈ ಸಹಯೋಗದಿಂದ ಪಡೆಯುತ್ತಿರುವ ಲಾಭಗಳ ಜೊತೆಗೆ ಬಿಜೆಪಿ ನೇತೃತ್ವದ ಸರ್ಕಾರ ತನ್ನ ಚೊಚ್ಚಲ ಬಜೆಟ್ಟಿನಲ್ಲಿಯೇ ಖಾದ್ಯ ತೈಲ, ತೈಲ ಬೀಜಗಳು ಹಾಗೂ ಹಿಂಡಿಯಲ್ಲಿ ಫ್ಯೂಚರ್ಸ್ ಟ್ರೇಡಿಂಗ್ (Futures Trading - ಭವಿಷ್ಯದ ವಾಣಿಜ್ಯ) ಎಂಬ ವಿಶೇಷ ವ್ಯವಸ್ಥೆಯೊಂದಕ್ಕೆ ಅವಕಾಶ ನೀಡಿತು. ಇಲ್ಲಿಯವರೆಗೂ ಜನ ಬಳಕೆಯ ವಸ್ತುಗಳ ವಿಷಯದಲ್ಲಿ ನಿರಾಕರಿಸಿದ್ದ ಈ ಅವಕಾಶ, ದೇಶದ ಅತಿದೊಡ್ಡ ಖಾದ್ಯ ತೈಲ ವ್ಯಾಪಾರದಾರರಾದ ಬಾಂಬೆ, ಅಹಮದಾಬಾದ್‌ಗಳ ಖಾದ್ಯ ತೈಲ ವಾಣಿಜ್ಯ ಸಂಸ್ಥೆಗಳು 5 ವರ್ಷದಿಂದ ಒತ್ತಾಯಿಸಿದ್ದರೂ ದೊರಕದ ಅವಕಾಶ ಅವರಿಗೆ ಈ ಬಜೆಟ್ಟಿನಲ್ಲಿ ಸಿಕ್ಕಿತು. ಜನ ಜೀವನದ ಅನೇಕ ವಿಷಯಗಳಲ್ಲಿ ಆರ್ಥಿಕ ನೀತಿಯ ಮೂಲಕ ಚೆಲ್ಲಾಟವಾಡಿದರೂ ಅತ್ಯಗತ್ಯ ವಸ್ತುಗಳು, ಬಹುಜನೋಪಯೋಗಿ ವಸ್ತುಗಳ ಜೊತೆಯಲ್ಲಿ ಚೆಲ್ಲಾಟಕ್ಕಿಳಿಯುವುದು ಬೆಂಕಿಯೊಡನೆ ಸರಸ ಮಾಡಿದಂತೆ ಎಂದು ತಿಳಿದಿದ್ದ ಆ ಸರ್ಕಾರಗಳು ಈ ವಿಷಯದಲ್ಲಿ ತೆಪ್ಪಗಿದ್ದವು. ಆದರೆ ಬಿಜೆಪಿಗೇನು ಭಯ? ಬೆಂಕಿಯೊಡನೆ ಸರಸವಾಡುತ್ತಲೇ ಸಾವಿರಾರು ಜನರ ಜೀವಗಳ ಆಹುತಿ ತೆಗೆದುಕೊಳ್ಳುತ್ತಲೇ ಬೆಳೆದವರಲ್ಲವೇ ಅವರು! ಆದುದರಿಂದ 'ಧೈರ್ಯ'ದಿಂದ ಭವಿಷ್ಯ ವ್ಯಾಪಾರಕ್ಕೆ ಮುನ್ನುಗ್ಗಿದರು.

ಭವಿಷ್ಯದ ವ್ಯಾಪಾರವೆಂದರೆ ಜನತೆಯ, ರೈತರ ಭವಿಷ್ಯದ ವ್ಯಾಪಾರ ಮಾಡಿದಂತೆಯೇ ಎಂದು ಶಿರಾ ರೈತರ ಹತ್ಯೆಯಿಂದ ರುಜುವಾತಾಗಿದೆ. ಮುಂದೆ ಒಂದು ಕಾಲದಲ್ಲಿ ಖಾದ್ಯ ತೈಲದ, ತೈಲ ಬೀಜಗಳ ಬೆಲೆ ಎಷ್ಟೇರಬಹುದು ಎಂದು ಇಂದೇ ಊಹಿಸಿ ಅದರ ಬಗ್ಗೆ ಇಂದೇ ವ್ಯಾಪಾರಕ್ಕಿಳಿದು ಹಣ ಹೂಡುವುದು; ನಂತರ ಮಾರುಕಟ್ಟೆಗಳನ್ನೇ ಬುಡಮೇಲು ಮಾಡಿ ಅಪಾರ ಲಾಭ ಗಳಿಸುವುದು. ಇದೇ ಭವಿಷ್ಯದ ವ್ಯಾಪಾರ. ಈ ವ್ಯಾಪಾರದಲ್ಲಿ ಅಪರಿಮಿತ ಜೂಜಾಟಕ್ಕೆ ಸಟ್ಟಾ ವ್ಯವಹಾರಕ್ಕೆ ಅವಕಾಶ. ಜನರ ದಿನನಿತ್ಯದ ಅತ್ಯವಶ್ಯ ವಸ್ತುವಾದ ಖಾದ್ಯ ತೈಲಕ್ಕೂ ಈ ಸಟ್ಟಾ ವ್ಯವಹಾರ ಕಾಲಿಟ್ಟಿದೆ.

ಅಂತರ್ರಾಷ್ಟ್ರೀಯ ಆಯಾಮ

ಅದೇ ಸಂದರ್ಭದಲ್ಲಿ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಖಾದ್ಯ ತೈಲಗಳ ಬೆಲೆ ಕುಸಿದಿದೆ. ನಮ್ಮ ದೇಶದಿಂದ ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದ ಪೂರ್ವ ಏಶ್ಯಾ ದೇಶಗಳಲ್ಲಿ ಅಲ್ಲಿಯ ರೂಪಾಯಿಯ ಬೆಲೆಗಳಲ್ಲಿ ತೀವ್ರ ಕುಸಿತವಾಗಿರುವುದರಿಂದ ವಿಶ್ವ ಖಾದ್ಯ ತೈಲ ಬೆಲೆಯೇ ಕುಸಿದಿದೆ. ಅದರ ಜೊತೆಗೆ ಭಾರತದಲ್ಲಿನ ಸಗಟು ವ್ಯಾಪಾರಗಾರರು ಅಡಿಗೆ ಎಣ್ಣೆ ಬೆಲೆ ಏರಿಸಿ ಮಾಡಿಕೊಳ್ಳುತ್ತಿರುವ ದುರ್ಲಾಭದ ಫಲವಾಗಿ ಜನಪ್ರಿಯತೆ ಕಳೆದುಕೊಳ್ಳುತ್ತಿರುವ ಬಿಜೆಪಿ ನಾಲ್ಕು ರಾಜ್ಯಗಳಲ್ಲಿ ಚುನಾವಣೆ ಎದುರಿಸುತ್ತಿದೆ. ಈ ರಾಜ್ಯಗಳಲ್ಲಿ ಹೇಗಾದರೂ ಮಾಡಿ ಅಧಿಕಾರ ಉಳಿಸಿ ಕೊಳ್ಳುವ ಆತಂಕದಿಂದ ಜನರಲ್ಲಿ ಉಂಟಾಗಿರುವ ವಿರೋಧವನ್ನು ನಿವಾರಿಸಿ ಕೊಳ್ಳಲು ಅನೇಕ ಆತುರಾತುರದ ಕ್ರಮಗಳನ್ನು ಘೋಷಿಸಿದೆ. ಅದರಲ್ಲಿ ಕೆಲವು ಖಾದ್ಯ ತೈಲ ಹಾಗೂ ಬೀಜಗಳನ್ನು ಓ.ಜಿ.ಎಲ್ (OGL--ಓಪನ್ ಜನರಲ್ ಲೈಸೆನ್ಸಿಂಗ್) ಮೂಲಕ ಎಂದರೆ ಎಷ್ಟು ಬೇಕಾದರೂ ಯಾರೂ ಬೇಕಾದರೂ ಆಮದು ಮಾಡಿಕೊಳ್ಳುವ ನೀತಿಯನ್ನು, ಕೆಲ ವಸ್ತುಗಳ ರಫ್ತು ನಿಷೇಧ ನೀತಿಯನ್ನು ಘೋಷಿಸಿದ್ದರಿಂದ ಭಾರತದ ಅತಿದೊಡ್ಡ ವ್ಯಾಪಾರಗಾರರು ಮುಂದಿನ ದಿನಗಳಲ್ಲಿ ಖಾದ್ಯ ತೈಲದ ಬೆಲೆ ಎಷ್ಟು ಇಳಿಯಬಹುದು ಎಂದು ಲೆಕ್ಕ ಹಾಕುತ್ತಿದ್ದಾರೆ. ಈಗ ಶೆಂಗಾ (ಕಡಲೆಕಾಯಿ) ಕೊಂಡರೆ ಅದು ಯಾವಾಗ ತೈಲವಾಗಿ ಮಾರುಕಟ್ಟೆಗೆ ಬರುವುದು, ಅಂದು ಎಣ್ಣೆಯ ಬೆಲೆ ಎಷ್ಟಿರಬಹುದು, ಆ ಎಣ್ಣೆಯ ಬೆಲೆಗೆ ತಕ್ಕನಾಗಿ ಈಗ ಎಷ್ಟು ಬೆಲೆಗೆ ಶೆಂಗಾ ಕೊಳ್ಳಬೇಕು ಎಂಬ ಲೆಕ್ಕಾಚಾರಗಳ ಫಲವಾಗಿ ಕಡಲೆಕಾಯಿ ಬೆಲೆ ದಿಢೀರನೆ ಕುಸಿತವಾಗಿದೆ.

ಅಂತರ್ರಾಷ್ಟ್ರೀಯ, ರಾಷ್ಟ್ರೀಯ ವ್ಯವಹಾರದಲ್ಲಿ ಶಿರಾ ಎಂಬ ಪುಟ್ಟ ಚುಕ್ಕೆ

ಇಂತಹ ಅಂತರ್ರಾಷ್ಟ್ರೀಯ, ರಾಷ್ಟ್ರೀಯ ವ್ಯವಹಾರಗಳ, ಕಾಳಸಂತೆ ಖದೀಮರುಗಳ ಜಾಲದಲ್ಲಿ ಶಿರಾ ಎಂಬ ಪುಟ್ಟ ಕಡೆಲೆಕಾಯಿ ಮಾರುಕಟ್ಟೆ ಸಿಲುಕಿಕೊಂಡಿತು. ಇತ್ತೀಚಿಗೆ ಎಡೆಬಿಡದೆ ಬಿದ್ದ ಮಳೆಯ ಫಲವಾಗಿ ಕಡಲೆಕಾಯಿ ಕೀಳಲಾಗಿರಲಿಲ್ಲ. ಮಳೆ ತೆರವಾದೊಡನೆ ಮಳೆಯಿಂದ ಎಲ್ಲಿ ಕಡಲೆಕಾಯಿ ಮೊಳಕೆಯೊಡೆಯುವುದೋ ಎಂದು ಆತಂಕಗೊಂಡಿದ್ದ ರೈತರು ಕಡೆಲೆಕಾಯಿ ಕಿತ್ತು ಮಾರುಕಟ್ಟೆಗೆ ಬಂದರು. ಹಲವಾರು ವಾರಗಳ ಕಾಲದಲ್ಲಿ ಬರಬೇಕಾಗಿದ್ದ ಕಡಲೆ ಕಾಯಿ ಒಮ್ಮೆಗೇ ಬಂದಾಗ ಪುಟ್ಟ ಮಾರುಕಟ್ಟೆಯಲ್ಲಿದ್ದ ವ್ಯಾಪಾರಗಾರರು ಇದೇ ಸಮಯವೆಂದು ಬೆಲೆಯನ್ನು ದಿಢೀರನೆ ಇಳಿಸಿದರು (ಸಾಮಾನ್ಯವಾಗಿ ಯಾವುದೇ ಮಾರುಕಟ್ಟೆಯ ವ್ಯಾಪಾರಿ ಕೃಷಿ ಉತ್ಪನ್ನಗಳನ್ನು ಕೊಳ್ಳಬೇಕಾದರೆ ಅವನಿಂದ ಈ ಮಾಲನ್ನು ಕೊಳ್ಳುವ ಸಗಟು ವ್ಯಾಪಾರಿಯೊಂದಿಗೆ, ಅಂತಿಮವಾಗಿ ಬಾಂಬೆ, ಅಹಮದಾಬಾದು ಗಳ ಅತಿ ದೊಡ್ಡ ಸಗಟು ವ್ಯಾಪಾರಿ ಗಳೊಂದಿಗೆ ಸಂಪರ್ಕಿಸಿ ಬೆಲೆ ನಿಷ್ಕರ್ಷೆ ಮಾಡುವ ವ್ಯವಸ್ಥೆ ಇದೆಯೆಂಬುದನ್ನು ಇಲ್ಲಿ ನೆನಪಿಸಿಕೊಳ್ಳೋಣ). ಈ ಕಾರಣಕ್ಕಾಗಿ ನೆರೆಯ ದೊಡ್ಡ ಮಾರುಕಟ್ಟೆಗಳಾದ ಹಿರಿಯೂರು, ಚಳ್ಳಕೆರೆಗಳಿಗಿಂತಲೂ ಶಿರಾದಲ್ಲಿ ಬೆಲೆ ಕಡಿಮೆಯಾಯಿತು. ಆಗ ರೈತರು ಪ್ರತಿಭಟನೆಗಿಳಿದರು. ಸೋಮವಾರ, ಮಂಗಳವಾರ ರೈತರು ಪ್ರತಿಭಟನೆಗೆ ಇಳಿದಾಗ ಜಿಲ್ಲಾಧಿಕಾರಿ ರೈತರೊಡನೆ ಮಾತನಾಡಿ ಸರ್ಕಾರಿ ಸಂಸ್ಥೆಗಳ ಮೂಲಕ ಶೇಂಗಾ ಕೊಳ್ಳುವ ವ್ಯವಸ್ಥೆ ಮಾಡಿದ್ದಾರೆ ಎಂಬುದು ಪತ್ರಿಕೆಗಳ ವರದಿ. ಜೊತೆಗೆ ನೆರೆಯ ದೊಡ್ಡ ಮಾರುಕಟ್ಟೆಗಳಿಗೆ ಶೇಂಗಾ ಸಾಗಿಸುವ ಆಶ್ವಾಸನೆಗಳೂ ವರದಿಯಾಗಿವೆ.

ಆದರೆ ರೈತರ ಅತೃಪ್ತಿ ತೀವ್ರ ಮಟ್ಟಕ್ಕೆ ಹೋಗಿರುವ ಸಮಯದಲ್ಲಿಯೇ ರಾಜಕೀಯ ಕುತಂತ್ರ ನಡೆದಿವೆ. ದೆಹಲಿಯಲ್ಲಿ ಬಿಜೆಪಿ ಸರ್ಕಾರದ ಪಾಲುದಾರನಾಗಿ ವಾಣಿಜ್ಯ ಮಂತ್ರಿ ಖಾತೆಯನ್ನು ಪಡೆದು ದೇಶದ ಹಾಗೂ ಕರ್ನಾಟಕದ ಜನರ ಬಗ್ಗೆ ಯಾವುದೇ ಹೊಣೆಗಾರಿಕೆ ಇಲ್ಲದೆ ಬಿಜೆಪಿಯ ವಣಿಜ ಪ್ರಿಯ ಓಜಿಎಲ್ ನೀತಿಗಳನ್ನು ಘೋಷಿಸುತ್ತಿರುವ ರಾಮಕೃಷ್ಣ ಹೆಗಡೆಯವರ ಪಕ್ಷದ ಸ್ಥಳೀಯ ನಾಯಕರೇ ಇಲ್ಲಿ ರೈತರಿಗೆ ನೇತೃತ್ವ ನೀಡಿ ಜನರನ್ನು ಉದ್ರೇಕ ಗೊಳಿಸಿದ್ದಾರೆ ಎಂಬುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಕಾಂಗ್ರೆಸ್‌ನ ಸ್ಥಳೀಯ ನಾಯಕರೂ ಇದರಲ್ಲಿ ಸೇರಿದ್ದಾರೆ. ಕೇಂದ್ರದಲ್ಲಿ ಈ ನೀತಿಗಳನ್ನು ತರಲು ಕಾರಣವಾದ, ಈಗ ಅದನ್ನು ಮತ್ತಷ್ಟು ತೀವ್ರತೆ

ಪುಟ 8 ಕ್ಕೆ

"ಆಂತರಿಕ ಕಲಹ ಬಿಟ್ಟು ಜನರ ಬವಣೆಗಳತ್ತ ಗಮನಕೊಡಿ"

ಜನತಾದಳ ಮುಖಂಡರಿಗೆ ಸಿಪಿಐ(ಎಂ) ಮನವಿ

ಕಳೆದ ಕೆಲವು ದಿನಗಳಿಂದ ರಾಜ್ಯದ ಜನತಾದಳದಲ್ಲಿನ ಆಂತರಿಕ ಕಲಹಗಳು ಬಹಿರಂಗಗೊಂಡು ರಾಜಕೀಯದಲ್ಲಿ ಗಂಭೀರ ಸ್ಥಿತಿ ಉಂಟು ಮಾಡಿರುವ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯ ನಾರಾಯಣ ರಾವ್ ರಾಜ್ಯದ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಹಾಗೂ ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡರಿಗೆ ಅಕ್ಟೋಬರ್ 23 ರಂದು ಪತ್ರ ಬರೆದಿದ್ದರು. ಆ ಪತ್ರದ ಒಕ್ಕಣಿಕೆಯನ್ನು ಇಲ್ಲಿ ಕೊಡಲಾಗಿದೆ.


"ಕರ್ನಾಟಕ ರಾಜಕೀಯ ರಂಗದಲ್ಲಿ ಅದರಲ್ಲೂ ಮುಖ್ಯವಾಗಿ ಜನತಾದಳದ ಪಕ್ಷದೊಳಗಿನ ಇತ್ತೀಚೆಗಿನ ಆಂತರಿಕ ಕಲಹಗಳು, ಬಹಿರಂಗಗೊಂಡಿರುವ ವಿದ್ಯಮಾನಗಳ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಆತಂಕಗೊಂಡಿದೆ.

ರಾಜ್ಯದ ಜನತೆಯು ಅತೀವೃಷ್ಟಿ, ಬೆಲೆಏರಿಕೆ ಮುಂತಾದ ಗಂಭೀರ ಸಮಸ್ಯೆಗಳಿಂದ ತತ್ತರಿಸುತ್ತಿರುವಾಗ ಜನತಾದಳ ಹಾಗೂ ಕರ್ನಾಟಕ ಸರ್ಕಾರ ಇಡಿಯಾಗಿ ಒಮ್ಮತದಿಂದ ಈ ಪ್ರಶ್ನೆಗಳ ಪರಿಹಾರಕ್ಕೆ ಗಮನ ನೀಡಬೇಕಾದುದು ಅತ್ಯಂತ ತುರ್ತು ವಿಷಯವಾಗಿದೆ.

ತಮ್ಮ ಪಕ್ಷದಲ್ಲಿನ ಬೆಳವಣಿಗೆಗಳು ಆಂತರಿಕ ವಿದ್ಯಮಾನಗಳು ನಿಜ. ಆದರೆ ಕಳೆದ ಅನೇಕ ದಿನಗಳಿಂದ ಭಿನ್ನಾಭಿಪ್ರಾಯಗಳು ಬಹಿರಂಗಗೊಂಡು ಜನತೆಯ ಮನಸ್ಸನ್ನು ಪ್ರಭಾವಿಸುತ್ತಿವೆ ಅದರಲ್ಲೂ ಬಹಳ ಮುಖ್ಯವಾಗಿ ದೇಶದ ಹಾಗೂ ರಾಜ್ಯದ ಇಂದಿನ ರಾಜಕೀಯ ಸನ್ನಿವೇಶದಲ್ಲಿ ಇಲ್ಲಿನ ಬೆಳವಣಿಗೆಗಳ ದುರ್ಲಾಭ ಪಡೆಯಲು ಬಿಜೆಪಿಯಂತಹ ಕೋಮುವಾದಿ, ಛಿದ್ರಕಾರಿ ರಾಜಕೀಯ ಶಕ್ತಿಗಳು ಹವಣಿಸುತ್ತಿವೆ. ಹೀಗಾಗಿ ಈ ಬೆಳವಣಿಗೆಗಳನ್ನು ಎಲ್ಲರೂ ಗಂಭೀರವಾಗಿ ಪರಿಗಣಿಸಬೇಕಾಗಿದೆ, ಜನತೆಯ ಸಂಕಷ್ಟಗಳ ಬಗ್ಗೆ ಚಿಂತಿತರಾಗಿರುವ ಮತ್ತು ಧರ್ಮನಿರಪೇಕ್ಷ ಶಕ್ತಿಗಳ ಒಗ್ಗಟ್ಟಿನ ಬಗ್ಗೆ ಸದಾ ಆಸಕ್ತಿ ಉಳ್ಳವರಾಗಿ ಕೋಮುವಾದಿ ಶಕ್ತಿಗಳ ದುರ್ಬಳಕೆಗೆ ಅವಕಾಶ ಕಲ್ಪಿಸುವುದು ಬೇಡವೆಂಬುದು ನಮ್ಮ ಆಶಯ.


ಆದುದರಿಂದ ತಾವುಗಳು ಆಂತರಿಕ ಭಿನ್ನಾಭಿಪ್ರಾಯಗಳನ್ನು ಸೂಕ್ತವಾಗಿ ಬಗೆಹರಿಸಿಕೊಂಡು ರಾಜ್ಯದಲ್ಲಿ ಮಳೆಯಲ್ಲಿ ಹಾನಿಗೊಳಗಾದ ಜನರಿಗೆ ಮತ್ತು ಜನಸಾಮಾನ್ಯರ ಬವಣೆಗಳಿಗೆ ತುರ್ತು ಪರಿಹಾರದತ್ತ ಕಾರ್ಯಕ್ರಮ ರೂಪಿಸುವುದು ಹಾಗೂ ಕೋಮುವಾದೀ ಶಕ್ತಿಗಳ ಸವಾಲನ್ನು ಸಮರ್ಥವಾಗಿ ಎದುರಿಸಲು ಮುಂದಾಗಬೇಕೆಂದು ಆಶಿಸುತ್ತೇವೆ".

ಪುಟ 4



ಇನ್ನೊಂದು ಮೈಲಿಗಲ್ಲು

ಪುಟ 5



ನವೆಂಬರ್ 16 ಬೆಂಗಳೂರು ಚಲೋ
ಕರ್ನಾಟಕದ ಮೂರೆ ಮೂಲೆಯಲ್ಲೂ ಹೋರಾಟದ ಸಂದೇಶ

ಇತಿಹಾಸದ ಪುಟಗಳಿಂದ

"ವಿಯೆಟ್ನಾಂ-ಆನೆಯನ್ನು ಮಣಿಸಿದ ಮಿಡತೆಗಳು"

ಇದು ಟೆರಿಕ್ಸ್ಟಾನ್ ಎಂಬ ಅಮೆರಿಕನ್ ಬರೆದ ಇಂಗ್ಲೀಷ್ ಪುಸ್ತಕದ ಕನ್ನಡ ಅನುವಾದ. ವಿಯೆಟ್ನಾಮ್ ಜನ ಸಾಮ್ರಾಜ್ಯಶಾಹಿಗಳನ್ನು ಮಣಿಸಿ ಸ್ವಾತಂತ್ರ್ಯ ಪಡೆದ ರೋಚಕ ಕಥೆ. ಇದರ ಒಂದು ಅಧ್ಯಾಯವನ್ನು ಇಲ್ಲಿ ಕೊಡಲಾಗಿದೆ. ಇದು ಅಮೆರಿಕ ತನ್ನ ಎಲ್ಲಾ ಧೃತ್ಯ ಬಲದೊಂದಿಗೆ 60 ರ ದಶಕದಲ್ಲಿ ಎರಗಿದಾಗ ಅಲ್ಲಿನ ಜನಜೀವನ ಹೇಗಿದ್ದಿರಬಹುದು? ಎನ್ನುವ ಚಿತ್ರ ಕೊಡುವ ಅಧ್ಯಾಯವನ್ನು ಇಲ್ಲಿ ಕೊಡಲಾಗಿದೆ. ಕನ್ನಡಾನುವಾದ ಕೃಪೆ: ಬೆಳ್ಳಿ ಚುಕ್ಕಿ ಪ್ರಕಾಶನ

ಜನಹೋರಾಟದ ಬದುಕಿನ ಒಂದು ದಿನ

ಉತ್ತರವಿಯೆಟ್ನಾಮಿನ ಅಂದರೆ ಗಣತಂತ್ರ ಪ್ರಜಾಪ್ರಭುತ್ವ ವಿಯೆಟ್ನಾಮಿನ ಬದುಕು ಹೇಗಿದ್ದಿರಬಹುದು? ಅಲ್ಲಿನ ಜನರು ಮಾಡಿದ ವರದಿಯಿಂದಲೇ ಇದನ್ನು ತಿಳಿದುಕೊಳ್ಳಬಹುದು. ಬರಹಗಾರನೂ, ಛಾಯಾಚಿತ್ರಕಾರನೂ ಆಗಿದ್ದ ಜೂಲಿಯಸ್ ಲೆಸ್ಟರ್ ಎಂಬವನು 1962 ರಲ್ಲಿ ಗಣತಂತ್ರ, ಪ್ರಜಾಪ್ರಭುತ್ವ ವಿಯೆಟ್ನಾಮನ್ನು ಸಂದರ್ಶಿಸಿದ್ದ. ಆತ ಅಮೇರಿಕಾಕ್ಕೆ ಮರಳಿದ ಬಳಿಕ ಹೀಗೆ ಬರೆದಿದ್ದ.

"1967ರ ಈಸ್ಟರ್ ಹಬ್ಬದ ಭಾನುವಾರ. ಅಂದು ನಾನು ಮೊದಲ ಬಾರಿಗೆ ಬಾಂಬಿನ ಸದ್ದನ್ನು ಕೇಳಿದೆ. ಬೇಸಗೆಯ ಬಿರು ಬಿಸಿಲ ದಿನ. ಬಿದಿರಿನಿಂದ ಕಟ್ಟಿದ ಅತಿಥಿ ಗೃಹವೊಂದರಲ್ಲಿ ನಾನು ಉಳಿದುಕೊಂಡಿದ್ದೆ. ಅಲ್ಲಿಂದ ಕೆಲವೇ ಗಜ ದೂರದಲ್ಲಿ ಬತ್ತದ ಹೊಲಗಳಲ್ಲಿ ದುಡಿಯುತ್ತಿದ್ದ ರೈತರನ್ನು ನೋಡುತ್ತಾ ಅಂದಿನ ಮುಂಜಾನೆಯನ್ನು ಕಳೆದಿದ್ದೆ. ಮಧ್ಯಾಹ್ನದ ಹೊತ್ತಿಗೆ ಅವರೆಲ್ಲ ತಮ್ಮ ಹೊಲಗಳಿಂದ ಮರಳಿ ಹೋದ ಅರ್ಧಗಂಟೆಯಲ್ಲೇ ಅದು ಪ್ರಾರಂಭಗೊಂಡಿತ್ತು.

ವೂಂ..! ವೂಂ...!

ಅದು ಒಂದು ಗುಡುಗಿನ ಸದ್ದಿನಂತಿತ್ತು. ನಾನು ಉತ್ತರ ವಿಯೆಟ್ನಾಮಿನಲ್ಲಿದ್ದೆ. ಇಲ್ಲಿ ಕೇಳಿ ಬರುತ್ತಿದ್ದ ಶಬ್ದಗಳು ಗುಡುಗಿನದಾಗಿರುವುದು ಸಾಧ್ಯವಿರಲಿಲ್ಲ. ವೂಂ..! ವೂಂ...!

ಕೆಲವು ಬಾರಿ ಈ ಶಬ್ದ ತೀರಾ ಸಮೀಪದಲ್ಲಿದ್ದು ನಾನು ನಿಂತ ನೆಲವನ್ನೇ ನಡುಗಿಸುವಂತಿತ್ತು. ಮತ್ತೆ ಕೆಲವೊಮ್ಮೆ ಅತಿ ದೂರದಲ್ಲಿ ಕೇಳಿಸುತ್ತಿತ್ತು. ಶಬ್ದ ಮಾತ್ರ ಅವಿರತವಾಗಿ ಕೇಳಿಸುತ್ತಲೆ ಇತ್ತು.

ವೂಂ...! ವೂಂ....!

ಜನರ್‍ಯಾರು ಇದನ್ನು ಗಮನಿಸಿದಂತೆ ಕಾಣಲಿಲ್ಲ. ಹೆಂಗಸು ಮತ್ತು ಸಣ್ಣ ಹುಡಿಗಿಯೊಬ್ಬಳು ಹೂವನ್ನು ಹೆಕ್ಕುವ ಕೆಲಸದಲ್ಲಿ ಎಷ್ಟು ಮಗ್ನರಾಗಿದ್ದರೆಂದರೆ ಅಮೆರಿಕದ ಮೂರು ಜೆಟ್ ವಿಮಾನಗಳು ಕೆಲವೇ ಅಡಿಗಳ ಅಂತರದಲ್ಲಿ ಮರಗಳ ಮೇಲೆ ಕಿರುಚುತ್ತ ಹಾದು ಹೋದರೂ ಅವರು ತಮ್ಮ ಕೆಲಸವನ್ನು ನಿಲ್ಲಿಸಲ್ಲ. ಕತ್ತೆತ್ತಿ ನೋಡಲೂ ಇಲ್ಲ.

ಇದು ವಿಯೆಟ್ನಾಮಿಗರ ವರ್ತನೆಗೆ ಅನುಗುಣವಾಗಿಯೇ ಇದ್ದಿತ್ತು. ಹನಾಯ್‌ನಲ್ಲಿ ಜನರು ಸಾಲು ಸಾಲಾಗಿ ನಿಂತು ಸಂಜೆಯ ವೇಳೆಗೆ ಹೂವಿನಂಗಡಿಗಳ ಮುಂದೆ ಹೂ ಕೀಳುತ್ತಿರುವುದನ್ನು ಯಾವಾಗಲೂ ಕಾಣಬಹುದಾಗಿತ್ತು. ಪಾರ್ಕುಗಳಲ್ಲಿ ಯುವ ಜೋಡಿಗಳು ಕೈಹಿಡಿದು ನಡೆದಾಡುತ್ತಿದ್ದರು. ರಸ್ತೆಗಳ ಇಕ್ಕೆಲಗಳಲ್ಲಿ ಮಕ್ಕಳು ಆಟವಾಡುತ್ತಿದ್ದರು. ಎಲ್ಲಿ ನೋಡಿದರೂ ಸುಂದರ ಮಹಿಳೆಯರು ಕಾಣುತ್ತಿದ್ದರು. ನಾನು ಅವರನ್ನು ಉದ್ದೇಶಿಸಿ ಹೀಗೆ ಕಿರುಚಬೇಕೆಂದು ಹಲವು ಬಾರಿ ಅಂದುಕೊಂಡಿದ್ದೆ - "ಯುದ್ಧ ನಡೆಯುತ್ತಿರುವುದರ ಕುರಿತು ನಿಮಗ್ಯಾರಿಗೂ ಗೊತ್ತಿಲ್ಲವೆ? ದಯಮಾಡಿ ಎಚ್ಚರವಾಗಿರಿ". ಸಂಜೆಯ ಹೊತ್ತಿನಲ್ಲಿ ಮದ್ಯದಂಗಡಿಗಳಲ್ಲಿ ಜನ ಕಿಕ್ಕಿರಿಯುತ್ತಿದ್ದರು. ರಂಗಮಂದಿರಗಳು, ಸಿನಿಮಾ ಥಿಯೇಟರುಗಳು ಯಾವಾಗಲೂ ಜನರಿಂದ ತುಂಬಿಕೊಂಡಿರುತ್ತಿದ್ದವು.

ರಾತ್ರಿಯ ಬದುಕು:

ಮಧ್ಯರಾತ್ರಿಯ ಬಳಿಕ ಬೀದಿಗಳು ಜೀವ ತಳೆಯುತ್ತಿದ್ದವು. ಯುದ್ಧೋಪಕರಣಗಳನ್ನು ಸರಬರಾಜು ಮಾಡುತ್ತಿದ್ದ ಟ್ರಕ್ಕುಗಳು ರಸ್ತೆಯ ತುಂಬಾ ಓಡಾಡುತ್ತಿದ್ದವು. ನಾನು ಅಲ್ಲಿದ್ದ ಒಂದು ತಿಂಗಳ ಅವಧಿಯಲ್ಲಿ ಎಂದೂ ರಾತ್ರಿ ಚೆನ್ನಾಗಿ ನಿದ್ದೆ ಮಾಡಿರಲಿಲ್ಲ. ಬೆಳಿಗ್ಗೆ ಎಚ್ಚತ್ತಾಗಲೆಲ್ಲ ರಾತ್ರಿಯ ಹೊತ್ತು ದೇಶದ ಅರ್ಧ ಭಾಗದಷ್ಟು ಜನರು ಸುತ್ತಾಡುತ್ತಿದ್ದುದರ ಕಲ್ಪನೆ ನನಗೆ ಬರುತ್ತಿತ್ತು. ಇದರಲ್ಲಿ ಸತ್ಯಾಂಶ ಇಲ್ಲದಿಲ್ಲ. ಕಾರ್ಖಾನೆಗಳು ಒಂದೆಡೆಯಿಂದ ಇನ್ನೊಂದೆಡೆಗೆ ಸ್ಥಳಾಂತರಗೊಳ್ಳುತ್ತಿದ್ದುವು. ಸಂಚಾರಿ ಆಸ್ಪತ್ರೆಗಳು ಸಾಕಷ್ಟಿದ್ದುವು. ಎಲ್ಲಾ ವೈದ್ಯಕೀಯ ಉಪಕರಣಗಳು, ಔಷಧಿಗಳು ರೋಗಿಗಳ ಸಹಿತ ಕೆಲವೇ ಗಂಟೆಗಳ ಅವಧಿಯಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದು ಸಾಧ್ಯವಾಗಿತ್ತು.

ಆದರೆ ಅಲ್ಲಿ ಒಂದು ಯುದ್ಧವು ನಡೆಯುತ್ತಿತ್ತು. ವಿಯೆಟ್ನಾಮಿಗರು ಯುದ್ಧವನ್ನು ದೈನಂದಿನ ವ್ಯವಹಾರದ ರೀತಿಯಲ್ಲಿಯೇ ಸಹಜವಾಗಿ ಅಂಗೀಕರಿಸಿದಂತಿದ್ದರು. ಯುದ್ಧವನ್ನು ಅವರು ಬದುಕಿನ ಅವಿಭಾಜ್ಯ ಅಂಗವಾಗಿ ಪರಿಗಣಿಸಿದ್ದರು. ತಮ್ಮ ದೇಶದ ಬೆಳವಣಿಗೆಗೆ ಯುದ್ಧವೆಂಬುದು ಒಂದು ಪರಿಕರ ಎಂದೇ ಅವರು ತಿಳಿದಿದ್ದರು. ಕೃಷಿ ಮತ್ತು ಕೈಗಾರಿಕೆಗಳಲ್ಲಿ ಉತ್ಪನ್ನ ಹೆಚ್ಚಾಗುತ್ತಿತ್ತು. ಅಲ್ಲಿ ಹೇಳಿಕೊಳ್ಳುವಂತಹ ಬೃಹತ್ ಪ್ರಮಾಣದ ಕೈಗಾರಿಕೆಗಳೇನೂ ಇದ್ದಿರಲಿಲ್ಲ. ಅದು ಇನ್ನೂ ವ್ಯವಸಾಯವನ್ನು ಅವಲಂಬಿಸಿದ ದೇಶವಾಗಿತ್ತು. ಯಂತ್ರಗಳಿಗಿಂತಲೂ ಜೈವಿಕ ಶಕ್ತಿಯನ್ನೇ ಹೆಚ್ಚಾಗಿ ಬಳಸುತ್ತಿದ್ದರು. ಹಲವು ಸಂದರ್ಭಗಳಲ್ಲಿ ರೈತರು ಬೇಸಾಯದ ಕಬ್ಬಿಣದ ಉಪಕರಣಗಳನ್ನು ಹೆಮ್ಮೆಯಿಂದ ಪ್ರದರ್ಶಿಸುತ್ತಿದ್ದರು. ಮರದಿಂದ ಮಾಡಿದ ಉಪಕರಣಗಳೂ ಅಲ್ಲಿ ಇದ್ದುವು.


ಅಲ್ಪ ಸಹಾಯ

ವಿಯೆಟ್ನಾಮಿನ ಪ್ರಜೆಗಳು ದೇಶವನ್ನು ಪ್ರೇಮಿಸುವ ಸ್ವತಂತ್ರರು. ಹೆಮ್ಮೆ ಮತ್ತು ಸ್ವಾಭಿಮಾನ ಉಳ್ಳವರು, ಚೀನಾ ಮತ್ತು ರಷ್ಯಾದಿಂದ ಬಹಳ ಕಡಿಮೆ ಪ್ರಮಾಣದಲ್ಲಿ ಸಹಾಯ ಅವರಿಗೆ ದೊರೆಯುತ್ತಿತ್ತಾದರೂ ಹೆಚ್ಚಿನದನ್ನು ಅವರು ಬಯಸುತ್ತಿರಲಿಲ್ಲ. ಫ್ರೆಂಚರನ್ನು ಸ್ವಸಾಮರ್ಥ್ಯದಿಂದ ಅವರು ಸೋಲಿಸಿದರು. ಅದೇ ರೀತಿಯಲ್ಲಿ ಅವರು ಅಮೆರಿಕನ್ನರನ್ನು ಸೋಲಿಸುತ್ತಿದ್ದಾರೆ. ಅವರಲ್ಲಿದ್ದ ಒಂದು ಹೆಮ್ಮೆಯ ವಿಷಯವೇನೆಂದರೆ ಕುಬ್ಲೈಖಾನನು ಚೀನಾವನ್ನು ಆಕ್ರಮಿಸಿದರೂ ವಿಯೆಟ್ನಾಮನ್ನು ಧಾಳಿಮಾಡಿದಾಗ ಸೋಲನ್ನು ಒಪ್ಪಿಕೊಳ್ಳಲೇ ಬೇಕಾಯಿತೆಂಬುದು. "ಆಕ್ರಮಣಕಾರರನ್ನು ಸೋಲಿಸಿದ ಧೀರ್ಘ ಇತಿಹಾಸ ನಮ್ಮಲ್ಲಿದೆ" ಎಂದು ನನ್ನಲ್ಲಿ ಅವರು ಆಗಾಗ ಹೇಳುತ್ತಿದ್ದರು.

ಯಂತ್ರಗಳಾಗಲಿ, ತಂತ್ರಗಳಾಗಲಿ ಜನರನ್ನು ಸೋಲಿಸಲಾರವು, ಸರಿಯಾದ ರಾಜಕೀಯ ಅರಿವು ಇದ್ದರೆ ಮಾತ್ರ ಅದು ಸಾಧ್ಯ ಎಂಬುದನ್ನು ನಾವು ವಿಯೆಟ್ನಾಮಿಗರನ್ನು ನೋಡಿ ಕಲಿಯಬೇಕಾಗಿದೆ. ನಾನು ಭೇಟಿಯಾದ ಪ್ರತಿಯೊಬ್ಬ ವಿಯೆಟ್ನಾಮಿಗನೂ ತಾನು ಹೋರಾಡುತ್ತಿರುವುದು ಯಾಕೆ ಮತ್ತು ಯಾರೊಡನೆ ಎನ್ನುವುದನ್ನು ಸರಿಯಾಗಿಯೇ ತಿಳಿದುಕೊಂಡಿದ್ದನು. ಹೆಚ್ಚಿನ ಜನರು ಮಾರ್ಕ್ಸ್‌ನ ಪರಿಭಾಷೆಯಲ್ಲಿಯೇ ಮಾತನಾಡುತ್ತಿದ್ದರು. ತಾನ್‌ಹೋವ ಪ್ರಾಂತವೊಂದರಲ್ಲಿ ವೃದ್ಧನೊಬ್ಬ ನನಗೆ ಹೇಳಿದ ಮಾತಿದು-ಫ್ರೆಂಚರ ಅಡಿಯಾಳಾಗಿದ್ದಾಗ ನಮ್ಮಲ್ಲಿ ಏನೂ ಇರಲಿಲ್ಲ, ಈಗ ಎಲ್ಲವೂ ಇದೆ. ಅಮೆರಿಕದವರು ಅದನ್ನು ಪಡೆಯಬೇಕಾದರೆ ನಮ್ಮನ್ನೆಲ್ಲ ಕೊಂದೇ ಪಡೆಯಬೇಕು.

(ಮುಂದುವರಿಯುವುದು)

ಎಂಟಂಶಗಳು ಯಾರಿಗೆ?



ಪ್ರಧಾನಮಂತ್ರಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಆರ್ಥಿಕವನ್ನು ಪುನಶ್ಚೇತನಗೊಳಿಸಲು ಎಂಟಂಶದ ಯೋಜನೆಯೊಂದನ್ನು ಘೋಷಿಸಿದ್ದಾರೆ. ಈ ಎಂಟು ಅಂಶಗಳ ತಿರುಳು ಕೆಳಗಿನಂತಿವೆ.

- ಕಂಪನಿಗಳು ತಮ್ಮದೇ ಶೇರುಗಳನ್ನು ಕೊಳ್ಳಲು ಅವಕಾಶ. ಅಂತಹ ಕಂಪನಿಗಳ ಹೂಡಿಕೆಗಳ ಮೇಲಿನ ನಿರ್ಭಂಧನಗಳ ಹಿಂತೆಗೆತ.
- ಕಂಪನಿಗಳ ಏಕೀಕರಣ ಮಿತಿಯು ಹೆಚ್ಚಿಸುವಿಕೆ
- ಸಾರ್ವಜನಿಕ ವಲಯದ ಘಟಕಗಳ ಪುನರ್ರಚನೆ ಮತ್ತು ಅವುಗಳ ಶೇರು ಮಾರಾಟಕ್ಕೆ ಪಾರದರ್ಶಕ ವಿಧಾನ
- ವಿಮಾ ವಲಯದಲ್ಲಿ ವಿದೇಶಿ ಹೂಡಿಕೆಯ ಪ್ರಸ್ತಾಪಗಳ ಪರಿಶೀಲನೆ
- ಹೊಸ ಕಂಪನಿ ಕಾಯಿದೆ ಮತ್ತು ಫೆಮಾ (ಫಾರಿನ್‌ಎಕ್ಸ್‌ಚೇಂಜ್ ಮ್ಯಾನೇಜ್ ಮೆಂಟ್ ಆಕ್ಟ್)ಗಳ ತ್ವರಿತ ಅನುಮೋದನೆ
- ಯುಟಿಐಗೆ ಪೂರ್ಣ ಬೆಂಬಲ
- ಮೂರು ತಿಂಗಳುಗಳೊಳಗೆ ಹೊಸ ಟೆಲಿಕಾಂ ನೀತಿಯ ಘೋಷಣೆ
- ಡಿಓಟಿ ಮತ್ತು ಟ್ರೆಯ್‌ಗಳ ನಡುವಿನ ಮನಸ್ತಾಪವನ್ನು 15 ದಿನಗಳೊಳಗೆ ನಿಲುಗಡೆಗೆ ತರುವುದು
- ಅಂತರ್‍ರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಐದು ನಗರಗಳನ್ನು ಗುರುತಿಸಿ ಅಲ್ಲಿ ಶೇ 100 ರಷ್ಟು ವಿದೇಶೀ ಹೂಡಿಕೆಯ ಪಾಲುದಾರಿಕೆಗೆ ಅನುಮತಿ ಇತ್ಯಾದಿ.

ಹೀಗೆ ಈ ಎಂಟಂಶಗಳ ತಿರುಳನ್ನು ನೋಡಿದ ಯಾರಿಗಾದರೂ ಗೊತ್ತಾಗುತ್ತದೆ ಇದು ಉಳ್ಳವರ ಅನುಕೂಲಕ್ಕಾಗಿ ಬರಲಿರುವ ಕ್ರಮಗಳು ಎಂಬುದು

ಬೆಲೆಯೇರಿಕೆ ತಡೆಯಲು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲ ಪಡಿಸಲು ಉದ್ಯೋಗಗಳ ಸೃಷ್ಟಿಗಳಂತಹ ಜನಸಾಮಾನ್ಯರಿಗೆ ಪರಿಹಾರ ನೀಡುವ ಕ್ರಮಗಳಾವುವೂ ಇದರಲ್ಲಿ ಸೇರಿಲ್ಲ.

'ಸ್ವದೇಶೀ' ಮಾತನಾಡುವ ಬಿಜೆಪಿ ನೇತೃತ್ವದ ಸರ್ಕಾರ ಎಂತಹ ಸ್ವದೇಶೀ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂಬುದು ಇದರಿಂದ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತಿದೆ.

ವಿಮಾರಂಗದ ಖಾಸಗೀಕರಣ ಮತ್ತು ಈ ರಂಗವನ್ನು ವಿದೇಶಿಯರಿಗೆ ತೆರೆವ ಕ್ರಮಗಳನ್ನು ವಿರೋಧ ಪಕ್ಷದಲ್ಲಿದ್ದ ಬಿಜೆಪಿ ಅಂದು ವಿರೋಧಿಸಿತ್ತು. ಇಂದು ಖಾಸಗೀಕರಣವನ್ನು ಆಗಲೇ ತಂದಿರುವ ಸರ್ಕಾರ ಈಗ ವಿದೇಶೀ ನೇರ ಹೂಡಿಕೆಗೂ ಅವಕಾಶ ನೀಡುವತ್ತ ಮುಂದುವರೆದಿದೆ. ಹಾಗೆಯೇ ಸಾರ್ವಜನಿಕ ವಲಯದ ಶೇರುಗಳ ಮಾರಾಟ ಪಾರದರ್ಶಕತ್ವದ ಬಗ್ಗೆ ಮತ್ತು ಶೇರು ಮಾರಾಟದ ಮೂಲಕ ಸರ್ಕಾರಿ ಕಂದಾಯ ಹೆಚ್ಚಿಸಿಕೊಳ್ಳುವ ಮಾತನ್ನು ಅದು ಆಡುತ್ತಿದೆಯೇ ಹೊರತು ಈ ವಲಯವನ್ನು ಇನ್ನೂ ಸಮರ್ಥಗೊಳಿಸುವ ಬಲಪಡಿಸುವ ಮಾತನ್ನು ಅಪ್ಪಿತಪ್ಪಿಯೂ ಆಡುವುದಿಲ್ಲ.

ಇಂತಹ ಕ್ರಮಗಳಿಂದ ದುಡಿವ ಜನರ ಮೇಲೆ ಆಗುವ ಪರಿಣಾಮಗಳನ್ನು ಕಡಿಮೆ ಮಾಡುವ ಮಾತು ಸಹ ಇಲ್ಲ. ಕಂಪನಿ ಗಳಿಗೆ ಬಂಡವಾಳಿಗರಿಗೆ ಶ್ರೀಮಂತರಿಗೆ ಅನುಕೂಲ ತಂದು ಕೊಡುವ ಕ್ರಮಗಳಿಂದಲೇ ದೇಶದ ಆರ್ಥಿಕ ಪುನರುಜ್ಜೀವನದ ಮಾತನಾಡುವ ಬಿಜೆಪಿಯ ಬೌದ್ಧಿಕ ದಿವಾಳಿಕೋರತನ ಎದ್ದು ಕಾಣುತ್ತಿದೆ. ಜನಸಾಮಾನ್ಯರನ್ನು ಇಷ್ಟೊಂದು ನಿರ್ಲಕ್ಷಿಸುವ ಬಿಜೆಪಿಯ ಭಂಡತನವನ್ನು ಜನ ಕ್ಷಮಿಸಲು ಸಾಧ್ಯವೆ?

'ಶೇರು ಮರುಕೊಳ್ಳುವಿಕೆ ಕೈವಾಡಗಳಿಗೆಡೆಮಾಡಿಕೊಡುತ್ತದೆ"

ಈ ಮಾತನ್ನು ಶೇರುಗಳ ಮರುಕೊಳ್ಳುವಿಕೆ ಮತ್ತು ಡೆರಿವೇಟಿವ್‌ಗಳ ಬಗೆಗಿನ ಸಮಿತಿಯ ಅಧ್ಯಕ್ಷ ಎಲ್.ಸಿ.ಗುಪ್ತ ಹೇಳಿದ್ದಾರೆ. ಒಂದು ಕಂಪನಿ ತನ್ನ ಶೇರನ್ನೆಲ್ಲಿ ಮಾರುಕಟ್ಟೆಯಲ್ಲಿ ಕೊಳ್ಳುವ ಅವಕಾಶವಿದ್ದರೆ ಅದು ತನ್ನ ಶೇರಿನ ಬೆಲೆಯನ್ನು ತನಗೆ ಬೇಕಾದಂತೆ ಏರಿಸುವ/ ಇಳಿಸುವ ತಂತ್ರಗಳನ್ನು ಮಾಡುತ್ತದೆ.

ಇದರಿಂದ ಇಡೀ ಶೇರು ಮಾರುಕಟ್ಟೆ ಯಲ್ಲಿ ಮೋಸ ಹೆಚ್ಚಾಗಿ ಸಾಮಾನ್ಯ ಹೂಡಿಕೆದಾರನಿಗೆ ಅನ್ಯಾಯವಾಗುತ್ತದೆ.

ಇಂತಹ ಸುಧಾರಣೆಗೆ ಇನ್ನೂ ಕಾಲ ಬಂದಿಲ್ಲ, ಕಂಪನಿ ಆಡಳಿತ ಸುಧಾರಣೆ ಈಗ ಶೀಘ್ರವಾಗಿ ಆಗಬೇಕಾದದ್ದು ಎಂದೂ ಶ್ರೀ ಗುಪ್ತಾ ಹೇಳಿದ್ದಾರೆ.

ಆದರೆ ಕಂಪನಿಗಳಿಗೆ (ಬಂಡವಾಳಿಗರಿಗೆ) ಅನುಕೂಲ ಮಾಡಿಕೊಡುವ ಜನ ಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆಯುವ ಪಣ ತೊಟ್ಟಿರುವ ಬಿಜೆಪಿ ಸರ್ಕಾರಕ್ಕೆ ಇವೆಲ್ಲ ರುಚಿಸುವುದಿಲ್ಲ. ಆದ್ದರಿಂದಲೇ ಅದು ಆಗಲೇ ಶೇರು ಮರು ಕೊಳ್ಳುವಿಕೆಗೆ ಅವಕಾಶ ಮಾಡಿ ಕೊಟ್ಟಿದೆ.

ಬಿಜೆಪಿಯ ಕಾಳಜಿಗಳು ಏನೆಂದು ಇದರಿಂದ ಸ್ಪಷ್ಟವಾಗುತ್ತದಲ್ಲವೆ?

ಅಂತಕಾರಿಗೆ ಅಮೇರಿಕ ಪೇಟೆಂಟ್

ಇದೆಂತಹ ಅಂತಕಾರಿ ಎಂದಿರಾ? ಇದೊಂದು ಹೊಸ ಬಗೆಯ ಜೀನ್. ಇದು ಬೀಜದೊಳಗೆ ಬಂದಾಗ ಆ ಬೀಜದಿಂದ ಬೆಳೆದ ಕಾಳುಗಳೆಲ್ಲ ಬರಡಾಗಿರುತ್ತವೆ ಅಂದರೆ ಬೆಳೆಯಿಂದ ಬಂದ ಕಾಳುಗಳನ್ನು ಬೀಜವಾಗಿ ಉಪಯೋಗಿಸುವಂತಿಲ್ಲ.

ಬಯೋ ಎಂಜಿನೀಯರಿಂಗ್‌ನ ಮೂಲಕ ಈ ಜೀನಿಯನ್ನು ಬೀಜದೊಳಗೆ ಸೇರಿಸಿದರೆ ಅದು ಆ ಬೆಳೆಯ ಬೀಜಗಳಿಗೆ ಅಂತಕನಾಗಿ ಕೆಲಸ ಮಾಡುತ್ತದೆ. ಈ ಬೀಜದ ಬೆಳೆಯಿಂದ ಬಂದ ಕಾಳುಗಳು ಮೊಳಕೆಯೊಡೆಯುವುದೇ ಇಲ್ಲ.

ಈಗ ಈ ಜೀನಿಗೆ ಪೇಟೆಂಟ್ ದೊರೆತರೆ ಬಹುರಾಷ್ಟ್ರೀಯ ಕಂಪನಿಗಳು ಬೀಜದ ವಹಿವಾಟಿನಲ್ಲಿ ತಮ್ಮ ಏಕಸ್ವಾಮ್ಯ ಹೊಂದುತ್ತವೆ. ಉತ್ತಮ ತಳಿಯ ಬೀಜಗಳಲ್ಲಿ ಜೀವಿಯನ್ನು ಸೇರಿಸಿದಾಗ ಒಂದೇ ಬೆಳೆಗೆ ಈ ಬೀಜಗಳು ಉಪಯುಕ್ತ. ಮುಂದಿನ ಬೆಳೆಗೆ ಮತ್ತೆ ಬೇರೆ ಬೀಜವನ್ನೇ ಕೊಂಡುಕೊಳ್ಳಬೇಕು. ಇಂತಹದ್ದು ಸಾಧ್ಯವಾದಾಗ ಮೂರನೇ ಜಗತ್ತಿನ ದೇಶಗಳಲ್ಲಿ ಬರಗಾಲವನ್ನೇ ಬೀಜದ ಕಂಪನಿಗಳು ಸೃಷ್ಟಿಸಬಹುದು. ಬೀಜವೇ ಲಭ್ಯವಿಲ್ಲದಿದ್ದರೆ ಬೆಳೆ ಬೆಳೆವ ಪ್ರಶ್ನೆಯೇ ಇಲ್ಲ ಅಲ್ಲವೆ?

ಮೂರನೇ ಜಗತ್ತಿನ ದೇಶಗಳಲ್ಲೆಲ್ಲ ಈ ಅಂತಕಾರಿ ಜೀನಿಯ ವಿರುದ್ಧ ಪ್ರತಿಭಟನೆಯ ಕೂಗು ಕೇಳಿಬಂದಿದೆ. ಆದರೂ ಅಮೇರಿಕದ ಕೃಷಿ ಇಲಾಖೆ ಪೇಟೆಂಟ್ ಪಡೆವ ತನ್ನ ಯೋಜನೆಯನ್ನು ಜಾರಿಗೆ ತರಹೊರಟಿದೆ. ಇದು "ಕೃಷಿಯ ನ್ಯೂಟ್ರಾನ್ ಬಾಂಬ್" ಎಂದು ಲ್ಯಾಟಿನ್ ಅಮೇರಿಕದ ಕೃಷಿ ತಂತ್ರಜ್ಞರೊಬ್ಬರು ವರ್ಣಿಸಿದ್ದಾರೆ.

ಮೂರನೇ ಜಗತ್ತಿನ ದೇಶಗಳೆಲ್ಲ ಇದರ ವಿರುದ್ಧ ಪ್ರತಿಭಟಿಸಬೇಕಾದ ಅಗತ್ಯ ವಿರುವಾಗ ವಾಜಪೇಯಿ ಸರ್ಕಾರ ಏನು ಮಾಡುತ್ತಿದೆ? ಈರುಳ್ಳಿ ಆಮದು?

ಪ್ರಧಾನ ಮಂತ್ರಿಗಳ ಸಲಹಾ ಮಂಡಳಿಯಲ್ಲಿ ಇವರಿಗೇಕೆ ಅವಕಾಶ

ಬಹುಶಃ ಈ ವಾದದಿಂದಾಗಿ ಸ್ಥಾನಾವಕಾಶ ದೊರೆಯದೇ ಹೋಗಿರುವ ಎರಡು ವಲಯಗಳು ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ಸಣ್ಣ ಕೈಗಾರಿಕೆಗಳು.

ಬಿಜೆಪಿ ಸರ್ಕಾರದ ಅಜೆಂಡಾ ಏನೆಂದು ಗೊತ್ತಿರುವವರಿಗೆ ಇದರಿಂದ ವಿಶೇಷ ಆಶ್ಚರ್ಯವೇನೂ ಆಗಲಾರದು. ಸಾರ್ವಜನಿಕ ವಲಯದ ಉದ್ದಿಮೆಗಳು ಶೇರು ಮಾರಾಟ ಮತ್ತು ಸಣ್ಣ ಕೈಗಾರಿಕೆಗಳ ಹೂಡಿಕೆ ಮಿತಿ ಏರಿಸಿ ಮಧ್ಯಮ ಮತ್ತು ದೊಡ್ಡ ಉದ್ದಿಮೆಗಳನ್ನೇ ಸಣ್ಣ ಕೈಗಾರಿಕೆ ಗಳೆಂದು ವರ್ಗೀಕರಿಸಿರುವ ಸರ್ಕಾರದ ಪ್ರಧಾನಮಂತ್ರಿಗಳ ಸಲಹಾ ಮಂಡಳಿಯಲ್ಲಿ ಈ ಎರಡೂ ವಲಯಗಳಿಗೆ ಪ್ರಾತಿನಿಧ್ಯ ಏಕೆ ನೀಡ ಬೇಕು? ಇವೆರಡೂ ವಲಯಗಳಿಗೂ ಪ್ರಾತಿನಿಧ್ಯ ದೊರೆತಿಲ್ಲ.

ಈಗ ಈ ಎರಡೂ ವಲಯದ ಪ್ರತಿನಿಧಿ ಗಳು ತಮಗೆ ಸ್ಥಾನ ದೊರೆತಿರದೇ ಇರುವು ದಕ್ಕೆ ತಮ್ಮ ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ. ದೇಶದ ಆರ್ಥಿಕದಲ್ಲಿ ಅತ್ಯಂತ ಪ್ರಮುಖ ಪಾತ್ರ ಹೊಂದಿರುವ ಈ ಎರಡು ವಲಯಗಳಿಗೆ ಪ್ರಾತಿನಿಧ್ಯ ನೀಡುವುದು ಅತ್ಯವಶ್ಯ ವಾಗಿತ್ತು. ಈ ಎರಡೂ ವಲಯಗಳು ಉದಾರೀಕರಣದಿಂದಾಗಿ ಹುಟ್ಟಿದ ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಹೀಗಿರುವಾಗ ಇವುಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಅವಶ್ಯಕತೆ ಇತ್ತು. ಆದರೆ ಅದು ದೇಶದ ಹಿತದ ಬಗ್ಗೆ ಕಾಳಜಿಯಿದ್ದರೆ. ಬಿಜೆಪಿ ಅಂತಹ ಕಾಳಜಿ ಯಿಲ್ಲ ಎಂಬುದು ಖಾತರಿಯಲ್ಲವೆ?

ಸಿಗರೇಟು ಕ್ಷೇತ್ರಕ್ಕೆ ವಿದೇಶಿ ಹೂಡಿಕೆಯ ಸ್ವಾಗತ

ಇದು ಬಿಜೆಪಿ ಸರ್ಕಾರದ ಇನ್ನೊಂದು ಮನೆ ಹಾಳ ಕ್ರಮ. ಸಿಗರೇಟು ಉತ್ಪದನೆಯಲ್ಲಿ ಶೇ 100ರಷ್ಟು ವಿದೇಶೀ ಹೂಡಿಕೆಗೆ ಅವಕಾಶವಿರಲಿಲ್ಲ. ಈಗ ಅಂತಹ ಅವಕಾಶ ಮಾಡಿಕೊಡಲಾಗಿದೆ. ದೇಶೀ ಸಿಗರೇಟ್ ಉದ್ಯಮಕ್ಕೆ ಇದರಿಂದ ದೊಡ್ಡ ಹೊಡೆತ ಬೀಳಲಿದೆ. ವಿದೇಶೀ ಹೂಡಿಕೆದಾರರು ಈ ಕ್ಷೇತ್ರವನ್ನು ಕೊಳ್ಳೆ ಹೊಡೆಯುತ್ತಾರೆ.

ಎಲ್ಲಾ ಟ್ರೇಡ್ ಯೂನಿಯನ್ನುಗಳು ಸರ್ಕಾರದ ಈ ಕ್ರಮಕ್ಕೆ ಪ್ರತಿಭಟನೆ ಸಲ್ಲಿಸಿವೆ. ಸಿ.ಐ.ಟಿ.ಯು ಎಐಟಿಯುಸಿ, ಬಿ.ಎಂ.ಎಸ್, ಮತ್ತು ಹೆಚ್‌ಎಂಎಸ್ ಪ್ರತಿಭಟನೆ ತೋರಿಸಿರುವ ಟ್ರೇಡ್ ಯೂನಿಯನ್ನುಗಳು.

ಬಹು 'ರಾಷ್ಟ್ರೀಯ ಕಂಪನಿಗಳು ಹೀಗೆ ಸಿಗರೇಟ್ ವಲಯವನ್ನು ವಿದೇಶೀ ಹೂಡಿಕೆದಾರರಿಗೆ ತೆರೆಯುವುದರಿಂದ ದೇಶದ ತಂಬಾಕು ಬೆಳೆಗಾರರಿಗೆ ಲಾಭವಾಗುತ್ತದೆ ಎಂಬ ವಾದವನ್ನು ಮುಂದಿಟ್ಟಿವೆ.

ಮಾರುಕಟ್ಟೆಗಳಿಗೇ ಆಡಳಿತ ಸೂತ್ರ!

ಇದನ್ನು ಹೇಳಿದವರು ಕೇಂದ್ರದ ಹಣಕಾಸು ಸಚಿವ ಯಶವಂತಸಿನ್ಹಾ. ಸರ್ಕಾರ ಹಿಂದಿನ ಆಸನದಲ್ಲಿರಬೇಕು ಮಾರುಕಟ್ಟೆಗಳಿಗೆ ಆಡಳಿತ ಸೂತ್ರ ದೊರೆಯ ಬೇಕು ಎಂಬುದು ಅವರ ವಿಚಾರವಂತೆ.

ಇದನ್ನು ಅವರು ಬಂಡವಾಳಿಗರ ಸಭೆಯಲ್ಲಿ ಹೇಳಿದ್ದಾರೆ. ಎಲ್ಲೇ ಹೇಳಿರಲಿ, ಇದು ಯಶವಂತ ಸಿನ್ಹಾ ಅವರ ಇಚ್ಛೆ ಎಂಬುದು ಸ್ಪಷ್ಟ. ಮಾರುಕಟ್ಟೆ ಆರ್ಥಿಕದಡಿ ಏನೇನಾಗುತ್ತಿದೆ ಎಂಬುದು ಸ್ಪಷ್ಟ. ಮಾರುಕಟ್ಟೆ ಆರ್ಥಿಕದೆಡೆಗೆ ಹೋಗತೊಡಗಿದೊಡನೆ ಬಡವ ಬಡವನಾಗುತ್ತ ಹೋಗಿದ್ದು ಬೆರಳೆಣಿಕೆಯಷ್ಟು ಶ್ರೀಮಂತರು ಹೆಚ್ಚೆಚ್ಚು ಶ್ರೀಮಂತರಾಗುತ್ತಾ ಹೋಗಿದ್ದು ಬಡತನ ನಿರುದ್ಯೋಗ ಹೆಚ್ಚಿದ್ದು ಬೆಲೆಗಳು ಗಗನ ಕ್ಕೇರಿದ್ದು ಇವೆಲ್ಲ ನಮಗೆ ದಿನನಿತ್ಯ ಕಾಣುತ್ತಿರುವ ವಿಷಯ.

ಹೀಗಿರುವಾಗ ಮಾರುಕಟ್ಟೆಗಳಿಗೇ ಪೂರ್ಣ ಆಡಳಿತ ಸೂತ್ರ ಎಂದಾದರೆ ಪರಿಣಾಮ ಏನಾಗುತ್ತದೆ ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು.

ಬಿಜೆಪಿಯ ಸರ್ಕಾರ ಅದನ್ನು ಸಾಧಿಸ ಹೊರಟಿದೆ ಎಂಬುದು ಈಗ ಬಹಿರಂಗ ವಾಗಿರುವ ಒಳಗುಟ್ಟು ಅಲ್ಲವೆ?

ಕರ್ನಾಟಕದಲ್ಲಿ ಕಳೆದವಾರ

ಅಕ್ಟೋಬರ್ 23

- ಪೊಲೀಸ್ ಮಹಾನಿರ್ದೇಶಕ ಶ್ರೀನಿವಾಸಲು ನೇಮಕ ರದ್ದುಗೊಳಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶ
- ದಳ ಬಿಕ್ಕಟ್ಟು : ಬೆದರಿಕೆಗೆ ಜಗ್ಗುವುದಿಲ್ಲ, ಪಿತೂರಿ ನಿರತ ಸಚಿವರ ಮೇಲೆ ಕ್ರಮ ಎಂದು ಮುಖ್ಯಮಂತ್ರಿ ಪಟೇಲ್.
- ರಾಜ್ಯದ 54 ತಾಲೂಕುಗಳಲ್ಲಿ ಅತ್ಯಲ್ಪ ಮಳೆ.

ಅಕ್ಟೋಬರ್ 24

- 28 ರ ಒಳಗೆ ಶಾಸಕಾಂಗ ಪಕ್ಷದ ಸಭೆಗೆ ಒತ್ತಾಯಿಸಿ 50 ದಳ ಭಿನ್ನಮತೀಯ ಶಾಸಕರ ಮನವಿ. ಸಭೆ ಸಾಧ್ಯವಿಲ್ಲವೆಂದು ಪಟೇಲ್
- ಡಿ.ಐ.ಜಿ. ನೇಮಕಾತಿ ಹೈಕೋರ್ಟ್ ಆದೇಶದ ವಿರುದ್ಧ ರಿಟ್ ಸಲ್ಲಿಸುವುದಾಗಿ ಕಾನೂನು ಸಚಿವರು.
- ಕಿತ್ತೂರು ಚನ್ನಮ್ಮ ವಿಜಯೋತ್ಸವ ಆರಂಭ

ಅಕ್ಟೋಬರ್ 25

- ಗೌರಿಬಿದನೂರಿನಲ್ಲಿ ಕಲುಷಿತ ನೀರು ಸೇವಿಸಿ 4 ಜನರ ಸಾವು 29 ಮಂದಿ ಆಸ್ಪತ್ರೆಗೆ ದಾಖಲು.
- ಜನತಾದಳ ವರಿಷ್ಠರ ಆದೇಶಕ್ಕೆ ಪಟೇಲ್ ತಿರಸ್ಕಾರ, ಅಧಿವೇಶನ ಮುಂದೂಡಿಕೆಗೆ ಹಾಗೂ ಶಾಸಕಾಂಗ ಪಕ್ಷದ ಸಭೆಗೂ ನಕಾರ.
- ಪುತ್ತೂರು ಬೈಪಾಸ್ ರಸ್ತೆ ಉದ್ಘಾಟನೆ ಹಿಂಸಾಚಾರ. ಕಲ್ಲು ತೂರಾಟ, ಸಚಿವ ಮೊಹಿದ್ದೀನ ಕಾರು ಜಖಂ, ಲಾಠಿ ಪ್ರಹಾರ.

ಅಕ್ಟೋಬರ್ 26

- ಎಚ್ಚೆಸ್ಕೆ, ಪಿ.ಬಿ.ಶ್ರೀನಿವಾಸ್ ಸೇರಿ 72 ಗಣ್ಯರಿಗೆ ರಾಜ್ಯೋತ್ಸವ ಪ್ರಶಸ್ತಿ.
- ಅತಿವೃಷ್ಟಿ ಪರಿಹಾರಕ್ಕೆ 800 ಕೋಟಿ ರೂ. ರಾಜ್ಯದ ಮನವಿ.
- ಕೋಲಾರ ಆಟೋ ಚಾಲಕರ ಮುಷ್ಕರ - ಲಾಠಿ ಪ್ರಹಾರ.

ಅಕ್ಟೋಬರ್ 27

- ಅಧಿವೇಶನ ವಿವಾದ - ಪಟೇಲ್ ವಿವರಣೆಗೆ ವರಿಷ್ಠರ ಒಪ್ಪಿಗೆ
- ಗುಲ್ಬರ್ಗಾ ಪ್ರಾರ್ಥನಾ ಮಂದಿರದಲ್ಲಿ ಹೇಸಿಗೆ- ಕಲ್ಲು ತೂರಾಟ, ವ್ಯಾಪಾರ ಸ್ಥಗಿತ.

ಅಕ್ಟೋಬರ್ 28.

- ಶಿರಾದಲ್ಲಿ ಕರ್ಫ್ಯೂ, ಗೋಲೀಬಾರ್ 8 ಬಲಿ. ರೈತರ ಪ್ರತಿಭಟನೆ
- ಶಿರಾ ಘಟನೆ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿ ರಾಜಿನಾಮೆ, ನ್ಯಾಯಾಂಗ ತನಿಖೆಗೆ ಮುಖ್ಯಮಂತ್ರಿ ಆದೇಶ.
- ಶ್ರೀನಿವಾಸುಲು ನೇಮಕ ಅನೂರ್ಜಿತದ ತೀರ್ಪಿಗೆ ಸುಪ್ರಿಕೋರ್ಟ್‌ನಿಂದ ಮೂರು ವಾರಕ್ಕೆ ತಡೆಯಾಜ್ಞೆ.
- ಕುವೆಂಪು ವಿ.ವಿ. ಸೆನೆಟ್ ಚುನಾವಣೆ ನಂತರ ಘರ್ಷಣೆ 5 ವಿದ್ಯಾರ್ಥಿಗಳಿಗೆ ಗಾಯ.

ಅಕ್ಟೋಬರ್ 29

- ಮಹತ್ವದ ವಿಧಾನ ಸಭೆಯ ಅಧಿವೇಶನ ಆರಂಭ. ಶಿರಾ ಘಟನೆ ವಿರುದ್ಧ ಸಿಪಿಐ(ಎಂ) ಸೇರಿದಂತೆ ಪ್ರತಿಪಕ್ಷಗಳಿಂದ ಧರಣಿ. ಸದನ ಸಮಿತಿಗೆ ಸರ್ಕಾರದ ನಕಾರ. ಮೃತರ ಕುಟುಂಬಗಳಿಗೆ ತಲಾ 1 ಲಕ್ಷ ರೂ ಪರಿಹಾರ.
- ಶಿರಾ-ಸ್ಮಶಾನ ಮೌನ. ಪೊಲೀಸರ ಸರ್ಪಕಾವಲು.
- ಸರ್ಕಾರದ ವಿರುದ್ಧ ಕಾಂಗ್ರೆಸ್, ಬಿಜೆಪಿಯಿಂದ ಅವಿಶ್ವಾಸ ನಿರ್ಣಯ ಮಂಡನೆ.

ರಾಜ್ಯಾದ್ಯಂತ ಸಾಮೂಹಿಕ ಸಂಘಟನೆಗಳ ಪ್ರಚಾರಾಂದೋಲನ

ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಹರಿಯಬಿಟ್ಟಿರುವ ಆರ್ಥಿಕ ನೀತಿಗಳು ಹಾಗೂ ಕೋಮುವಾದ ಈ ಜೋಡಿ ಅಪಾಯದ ಬಗ್ಗೆ ಸಾಮಾನ್ಯರಿಗೆ ಶ್ರಮಿಕ ವರ್ಗಕ್ಕೆ ಮನವರಿಕೆ ಮಾಡುವ ನಿಟ್ಟಿನಲ್ಲಿ ರಾಷ್ಟ್ರಮಟ್ಟದಲ್ಲಿ ಅಸ್ತಿತ್ವಕ್ಕೆ ಬಂದಿರುವ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಅಂಗವಾಗಿ ರಾಜ್ಯದಲ್ಲಿಯೂ ಜಿಲ್ಲಾ ಹಾಗೂ ತಾಲೂಕು ಮಟ್ಟಗಳಲ್ಲಿ ರಚನೆಗೊಂಡಿರುವ ವೇದಿಕೆಗಳ ವರದಿ ಹಾಗೂ ಈಗಾಗಲೇ ಪ್ರತಿಭಟನೆ ನಡೆಸಿರುವ ವರದಿ

ಶಿವಮೊಗ್ಗ : ಅಕ್ಟೋಬರ್ 11 ರಂದು ಕರ್ನಾಟಕ ಸಂಘದಲ್ಲಿ ರಾ.ಸಾ.ಸಂಘಟನೆಗಳ ಜಿಲ್ಲಾ ಸಮಾವೇಶ ನಡೆಯಿತು.

ಜೆ.ಎಂ.ಎಸ್.ನ ರಾಜ್ಯಧ್ಯಕ್ಷೆ ಕೆ.ಎಸ್. ವಿಮಲ ಸಮಾವೇಶ ಉದ್ಘಾಟಿಸಿ ಕೇಂದ್ರ ಸರ್ಕಾರದ ದಿವಾಳಿಕೋರ ಆರ್ಥಿಕ ನೀತಿಯಿಂದ ನಿರುದ್ಯೋಗ ಹೆಚ್ಚಳ, ಕಾರ್ಖಾನೆ ಮುಚ್ಚುವಿಕೆ ಹಾಗೂ ಮಹಿಳೆಯರು ಅದಃ ಪತನದತ್ತ ಸಾಗಿದ್ದಾರೆಂದರು. ಸಮಾವೇಶದಲ್ಲಿ ಸಿಐಟಿಯು ಮುಖಂಡರಾದ ಎಲ್.ರಂಗೇಗೌಡ ಉಪನ್ಯಾಸಕರಾದ ಡಾ|| ರಾಜೇಂದ್ರ ಚೆನ್ನಿ ರಾಜ್ಯರೈತ ಸಂಘದ ಜಿಲ್ಲಾಧ್ಯಕ್ಷ ರಾಜೇಂದ್ರ ಮಾತನಾಡಿ ಹೊಸ ಆರ್ಥಿಕ ನೀತಿ ರೈತರನ್ನು ಸಂಕಷ್ಟಕ್ಕೆ ನೂಕಿದೆ ಎಂದರು.

ರಾಜ್ಯ ಬ್ಯಾಂಕ್ ನೌಕರರ ಸಂಘದ ರೇವಣ್ಣ, ವಿಮಾ ನೌಕರರ ಸಂಘದ ನಾಗೇಶ್, ಮೆಡಿಕಲ್ ರೆಪ್ರೆಸೆಂಟೀವ್ಸ್ ನೌಕರರ ಸಂಘದ ಡಾ|| ರವಿ ಪ್ರಾಕಾಶ ಮಾತನಾಡಿ ಹೊಸ ಆರ್ಥಿಕ ನೀತಿ ಹಾಗೂ ಕೋಮುವಾದದ ಅಪಾಯದ ಬಗ್ಗೆ ವಿವರಿಸಿದರು. ಹಲವಾರು ಪ್ರತಿನಿಧಿಗಳು ಮಾತನಾಡಿದರು. ಸಮಾವೇಶದ ಅಧ್ಯಕ್ಷತೆಯನ್ನು ಡಿ.ಸಿ.ಮಾಯಣ್ಣ ವಹಿಸಿದ್ದರೆ, ಎಸ್.ಬಿ. ಶಿವಶಂಕರ್ ಸ್ವಾಗತಿಸಿ ಲಕ್ಷ್ಮಿನಾರಾಯಣರಾವ್ ವಂದಿಸಿದರು.

ಸಮಾವೇಶವು ಹಲವು ನಿರ್ಣಯಗಳನ್ನು ಕೈಗೊಂಡಿತು.

ದೇವದುರ್ಗ: ಅಕ್ಟೋಬರ್ 26 ರಂದು ನಡೆದ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ತಾಲೂಕು ಸಮಾವೇಶವು 17 ಜನರ ಸಂಚಾಲಕ ಸಮಿತಿ ರಚಿಸಿತು

ಸಭೆಯಲ್ಲಿ ಚಂದ್ರಶೇಖರ ಬಾಳೆ ಹಾಗೂ ಮಲ್ಲಯ್ಯ ಜಾಲಹಳ್ಳಿ ಭಾಗವಹಿಸಿದ್ದರು. 17 ಸಂಘಟನೆಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಬಿಜಾಪುರ: ಸೆಪ್ಟೆಂಬರ್ 27 ರಂದು ಕಂದಗಲ್ ಶ್ರೀ ಹನುಮಂತರಾಯ ರಂಗ ಮಂದಿರದಲ್ಲಿ ಸಾಮೂಹಿಕ ಸಂಘಟನೆಗಳ ಜಿಲ್ಲಾ ಮಟ್ಟದ ಸಮಾವೇಶವು ಯಶಸ್ವಿಯಾಗಿ ಜರುಗಿತು. ಜಿಲ್ಲಾ ಸಮಾವೇಶದಲ್ಲಿ ಸಿಐಟಿಯು ಎಐಟಿಯುಸಿ, ಡಿವೈಎಫ್ಐ ಎಐವೈಎಫ್ ಎಸ್.ಎಫ್.ಐ. ಎ.ಐ.ಎಸ್.ಎಫ್. ಬ್ಯಾಂಕು ಜೀವವಿಮಾ, ಟೆಲಿಕಾಮ್, ಅಂಚೆ, ಔಷದ ಪ್ರತಿನಿಧಿಗಳು, ಶಿಕ್ಷಕರು , ಕೊ.ಅ.ಬ್ಯಾಕ್ ನೌಕರರು, ಜನವಾದಿ ಮಹಿಳಾ ಸಂಘಟನೆ, ರೈತರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು, ಅಸಂಘಟಿತ ಕಾರ್ಮಿಕ ವರ್ಗದವರು ಸುಮಾರು 30 ವಿವಿಧ ಸಂಘಟನೆಗಳನ್ನು ಪ್ರತಿನಿಧಿಸುವ 500 ಕ್ಕೂ ಹೆಚ್ಚು ಪ್ರತಿನಿದಿಗಳು ಭಾಗವಹಿಸಿದ್ದರು.

ಎನ್.ಕೆ. ಉಪಾಧ್ಯಾಯ ಸಿಐಟಿಯು, ಬಿ.ಬಿ.ಸಾಲಕ್ಕಿ ,ಟೆಲಿಕಾಮ್ ನೌಕರರ ಸಂಘದ ಸುರೇಖಾ ರಜಪೂತ, ವೀರಣ್ಣ ಹಳ್ಳಿ, ಚಂಚಲಕರ, ಹಿರಿಯ ಕಾರ್ಮಿಕ ಮುಖಂಡರು ಅಧ್ಯಕ್ಷೀಯ ಮಂಡಳಿಯಲ್ಲಿದ್ದರು. ಜಿಲ್ಲಾ ಸಮಾವೇಶದ ಮುಖ್ಯ ಅತಿಥಿಗಳಾಗಿ ಆರ್.ಎನ್. ಗೋಡಬೋಳೆ ಭಾಗವಹಿಸಿದರು.

ಭೀಮಶಿ ಕಲಾದಗಿ ಪ್ರಾಂತ ರೈತ ಸಂಘದ, ಎಲ್.ಕೆ. ಚಂಚಲಕರ ಸಿಐಟಿಯು, ಕುಲಕರ್ಣಿ, ಜೀವವಿಮಾ ನೌಕರರ ಸಂಘ, ಆರ್.ಆರ್.ಪಾಟೀಲ ಕೊ.ಅ.ಬ್ಯಾಂಕು, ಸುರೇಖಾ ರಜಪೂತ ಜನವಾದಿ ಮಹಿಳಾ ಸಂಘಟನೆ, ಡಿ.ಎಚ್. ಮುಲ್ಲಾ ಎ.ಐ.ಟಿ.ಯು.ಸಿ, ಅಶೋಕ ಉಪಾಧ್ಯಾಯ ಬ್ಯಾಂಕು ನೌಕರರ ಸಂಘ, ಬಿ.ಎನ್. ಕೊಪ್ಪದ ಕೆ.ಇ.ಬಿ. ನೌಕರರ ಸಂಘ ಬೆಳಗಾವಿ ವಲಯ, ವೀರಣ್ಣ ಹಳ್ಳಿ, ಔಷಧಿ ಪ್ರತಿನಿಧಿ ಸಂಘ ಕಾರ್ಯದರ್ಶಿ ಜಿ.ಬಿ.ಸಾಲಕ್ಕಿ, ಟೆಲಿಕಾಮ್ ನೌಕರರ ಸಂಘ, ಕಂಚಗಾರ ಅಂಚೆ ನೌಕರರ ಸಂಘ, ವಿ.ಎಂ. ಸೋನ್ನದ ಸಿಐಟಿಯು, ಜಯಲಕ್ಷ್ಮೀ ಯರನಾಳ ಶಿಕ್ಷಕ ಸಂಘ, ಮನ್ನುಸಾಬ ಕಲಾದಗಿ ಎಐಟಿಯುಸಿ, ವಿದ್ಯಾರ್ಥಿ ಸಂಘ ದಾವಲ ಗೋರ್ಪಡೆ, ಎಸ್.ಎಫ್.ಐ. ಬಿ.ಡಿ.ರಾಟೀಲ ಮುಂತಾದವರು ಸಮಾವೇಶದಲ್ಲಿ ಮಾತನಾಡಿದರು ಸೀಮಿಕೇರಿ ಸ್ವಾಗತಿಸಿ ಅಣ್ಣರಾಯ ಈಳೇಗಾರ್ ವಂದಿಸಿದರು.

ಉತ್ತರ ಕನ್ನಡ: ಕಾರವಾರದ ಎನ್.ಜಿ.ಓ. ಸಭಾಂಗಣದಲ್ಲಿ ಅಕ್ಟೋಬರ್ 11 ರಂದು ನಡೆದ ಜಿಲ್ಲಾ ಸಮಾವೇಶದಲ್ಲಿ ವಿದ್ಯಾರ್ಥಿ ಯುವ ಜನರ, ರೈತ, ಕಾರ್ಮಿಕ, ನೌಕರ ಮುಂತಾದ ಸಂಘನೆಗಳನ್ನು ಪ್ರತಿನಿಧಿಸಿ ನೂರಾರು ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲೆಯಲ್ಲಿ ನವೆಂಬರ್ 3 ರಿಂದ 7 ರವರೆಗೆ ಜಾಥಾ ಸಂಘಟಿಸಲು, ನವಂಬರ್ 26 ರಂದು ರಾಜ್ಯಮಟ್ಟದ ರ್‍ಯಾಲಿಗೆ ಸಾವಿರಾರು ಸಂಖ್ಯೆಗಳಲ್ಲಿ ಪಾಲ್ಗೊಳ್ಳಲು ಹಾಗೂ ಡಿಸಂಬರ್ 11 ರಂದು ನಡೆಯುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಲು ಸಮಾವೇಶ ನಿರ್ಣಯ ತೆಗೆದುಕೊಂಡಿತು.

ಸಿ.ಐ.ಟಿ.ಯು, ಜಿಲ್ಲಾ ಅಧ್ಯಕ್ಷ ಎಮ್. ಬಿ. ನಾಯ್ಕ, ವಿಮಾ ನೌಕರರ ಸಂಘದ ಸಿ.ಆರ್.ಶ್ಯಾನಭಾಗ ಹಾಗೂ ಬ್ಯಾಂಕ್ ನೌಕರರ ಸಂಘದ ವಿನೋಧ ಮೆತ್ರಿಯವರನ್ನೊಳಗೊಂಡ ಅಧ್ಯಕ್ಷೀಯ ಮಂಡಲಿ ಸಮಾವೇಶದ ಕಾರ್ಯ ಕಲಾಪ ನಡೆಸಿ ಕೊಟ್ಟಿತು.

ಸಮಾವೇಶವನ್ನು ಉದ್ಘಾಟಿಸಿ ಸಿ.ಐ.ಟಿ.ಯು ರಾಜ್ಯ ಉಪಾಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಮಾತನಾಡುತ್ತಾ ನಮ್ಮ ದೇಶದ ಇತಿಹಾಸದಲ್ಲಿ ಅತ್ಯಂತ ಅಭದ್ರ ಸರ್ಕಾರ ಇವತ್ತು ಬಿ.ಜೆ.ಪಿ ನೇತೃತ್ವದಲ್ಲಿದೆ. ಸರ್ಕಾರ ಉಳಿಸಿಕೊಳ್ಳುವುದರಲ್ಲಿ ಆರು ತಿಂಗಳು ಕಳೆದಿದ್ದಾರೆ. ಕನಿಷ್ಟ ಬೆಲೆಏರಿಕೆಯನ್ನು ಈ ಸರ್ಕಾರದಿಂದ ತಡೆಯಲಾಗಿಲ್ಲ. ಉದಾರೀಕರಣದ ಭಾಗವಾಗಿ ಶೇಕಡ 50 ರಷ್ಟು ಉಳ್ಳಾಗಡ್ಡೆ ರಫ್ತಿಗೆ ಅವಕಾಶ ಮಾಡಿಕೊಟ್ಟು ಜನಸಾಮಾನ್ಯರು ಉಪಯೋಗಿಸದಂತೆ ತಡೆಯಲಾಗಿದೆ. ಸಾಸಿವೆ ಎಣ್ಣೆ ಕಲಬೆರಕೆ ನೋಡಿದರೆ ಇದು ಕಲಬೆರಕೆ ಸರ್ಕಾರ ಎನ್ನುವುದು ಸ್ಪಷ್ಟವಾಗುತ್ತದೆ. ಹೊಸ ಉದ್ಯೋಗ ಸೃಷ್ಟಿ ಇಲ್ಲಾ ಕೋಟಿ ಉದ್ಯೋಗದ ಭರವಸೆ ಹುಸಿಯಾಗಿದೆ. ಕೋಮುವಾದಿ ಫ್ಯಾಸಿಸ್ಟ್ ಮಾದರಿಯಲ್ಲಿ ಆಡಳಿತ ನಡೆಸುತ್ತಾ ಪ್ರಜಾಪ್ರಭುತ್ವದ ಹಕ್ಕುಗಳನ್ನು ಹತ್ತಿಕ್ಕಲಾಗುತ್ತಿದೆ ಎಂದು ನಿತ್ಯಾನಂದ ಸ್ವಾಮಿಯವರು ಹೇಳಿದರು. ದೇಶ ಉಳಿಸಿಕೊಳ್ಳಲು ದೊಡ್ಡ ಪ್ರಮಾಣದ ಪ್ರಜಾಸತ್ತಾತ್ಮಕ ಹೋರಾಟದ ಅವಶ್ಯಕತೆ ಇದೆ ಎಂದರು.

ಅತಿಥಿಗಳಾಗಿ ಭಾಗವಹಿಸಿದ ಧಾರವಾಡ ವಲಯದ ವಿಮಾ ನೌಕರರ ಸಂಘದ ಅಧ್ಯಕ್ಷರಾದ ಆರ್.ಎಚ್. ಆಯಿಯವರು ಕಾಳಸಂತೆಕೋರರನ್ನು ಹೊರತೆಗೆಯುವ ಕೆಲಸ ಮಾಡದೇ ಬಿ.ಜೆ.ಪಿ. ಸರ್ಕಾರ ಅವರ ರಕ್ಷಣೆಗೆ ಮುಂದಾಗಿದೆ ಎಂದರು.

ಡಿ.ವೈ.ಎಫ್.ಐ ರಾಜ್ಯ ಅಧ್ಯಕ್ಷರಾದ ಶಾಂತಾರಾಮ ನಾಯಕ ಸಮಾವೇಶದ ಕರಡು ಘೋಷಣೆಯನ್ನು ಮಂಡಿಸಿದರು. ಬೆಂಬಲಿಸಿ ವಿವಿಧ ಸಂಘಟನೆಗಳನ್ನು ಪ್ರತಿನಿಧಿಸಿ ಶಂಬೂ ಶೆಟ್ಟಿ, ತಿಲಕ ಗೌಡ, ವಿಠಲ ಭಂಡಾರಿ, ಜಿ.ವಿ.ಪೈ ಬೈರ ಮನೆ, ಯುವರಾಜ ಕಂಬಾಳಿ ಮಠ, ಬಂಗಾರೇಶ್ವರ ಗೌಡ, ಮತ್ತು ಟಿ. ಎಸ್. ನಾಯ್ಕ ಮಾತನಾಡಿದರು. ಇದೇ ಸಂದರ್ಭದಲ್ಲಿ ಟಿ. ಎಸ್ ನಾಯ್ಕ, ಸಿ.ಆರ್ ಶ್ಯಾನಭಾಗ, ಶ್ರೀವಾತ್ಸವ, ಯುವರಾಜ ಕಂಬಾಳೀ ಮಠ ಮತ್ತು ಆರ್. ಆರ್. ಕಾಮತರವರ ಸಂಚಾಲಕತ್ವದಲ್ಲಿ ನೂತನ ಜಿಲ್ಲಾ ಸಮಿತಿ ರಚಿಸಲಾಯಿತು. ಪ್ರಾರಂಭದಲ್ಲಿ ಪಿ.ಆರ್ ನಾಯ್ಕ ಸ್ವಾಗತಿಸಿದ್ದರು. ಯುಮುನಾ ಗಾಂವಕಾರ ವಂದಿಸಿದರು.

ಗುಲ್ಬರ್ಗಾ: ಅಕ್ಟೋಬರ್ 11 ರಂದು ನಡೆದ ಜಿಲ್ಲಾ ಸಮಾವೇಶವನ್ನು ಪ್ರಾಂತ ರೈತ ಸಂಘದ ಮಾರುತಿ ಮಾನ್ಪಡೆ ಉದ್ಘಾಟಿಸಿದರು. ಹೊಸ ಆರ್ಥಿಕ ನೀತಿ ಬಂದಾಗಿನಿಂದ ದೇಶದಲ್ಲಿ 2000 ಸಾವಿರ ಜನ ರೈತರು ಆತ್ಮಹತ್ಯೆ ಮಾಡಿ ಕೊಂಡಿದ್ದಾರೆಂದ ಅವರು ಇತ್ತ ಗಮನ ಹರಿಸದೆ ಬಿಜೆಪಿ ಸರ್ಕಾರ ಶಿಕ್ಷಣದಲ್ಲಿ ಕೋಮುವಾದಿ, ಮತೀಯವಾದಿ ಅಂಶಗಳನ್ನು ಸೇರಿಸಿ ವಿದ್ಯಾರ್ಥಿಗಳನ್ನು ವಿಚ್ಛಿದ್ರಕಾರಿಗಳಾಗಿಸುವತ್ತ ಸಾಗುತ್ತಿದೆ ಎಂದರು. ಯುಟಿಯುಸಿಯ ಸಿಂಹಾದ್ರಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಸಮಾವೇಶದಲ್ಲಿ ವಿವಿಧ ಸಂಘಟನೆಗಳ ಶಾಂತ ಕುಮಾರ್, ಗಂಗಮ್ಮ ಬಿರಾದಾರ, ಎಸ್.ಪಿ. ಗೋಧಿ, ಚನ್ನಪ್ಪ ಆನೆಗುಂದಿ ಹಾಗೂ ವಿ.ಜೆ.ದೇಸಾಯಿ ವಿಷಯ ಮಂಡಿಸಿದರೆ ವಿವಿಧ ಸಂಘಟನೆಗಳ 15 ಪ್ರತಿನಿಧಿಗಳು ಮಾತನಾಡಿದರು.

ವೇದಿಕೆಯಲ್ಲಿ ಆರ್.ಎ. ಪಠಾಣ, ಭೀಮಸೇನ ಕಲಂದಾನಿ, ಪಿ. ಶ್ರೀನಿವಾಸ್, ಸಿಂಹಾದ್ರಿ, ರಮೇಶ್ ಬಾಬು ಮತ್ತು ನಾಗಮ್ಮಾಳರ ಉಪಸ್ಥಿತರಿದ್ದರು. ಶಂಕರ ಕಟ್ಟಿ ಸಾಂಗವಿ ಸಮಾರೋಪ ಭಾಷಣ ಮಾಡಿದರು.

ಅಂಗನವಾಡಿ ನೌಕರರ ಉಪವಾಸ ಮುಷ್ಕರ

ಬೀದರ್: ಜಿಲ್ಲೆಯ ಅಂಗನವಾಡಿ ನೌಕರರು ಅಕ್ಟೋಬರ್ 12 ಮತ್ತು 13 ರಂದು ಎರಡು ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಿದರು. ನಿರಶನ ಸ್ಥಳಕ್ಕೆ ಭೇಟಿಯಿತ್ತು ಮನವಿ ಸ್ವೀಕರಿಸಿ ಸ್ಥಳೀಯ ಬೇಡಿಕೆಗಳನ್ನು ಈಡೇರಿಸುವುದಾಗಿ ನಿರ್ದೇಶಕರು ಭರವಸೆ ನೀಡಿದರು.

ಪ್ರಾರಂಭದಲ್ಲಿ ಬೀದರ್‌ನ ಪ್ರಮುಖ ಬೀದಿಗಳಲ್ಲಿ ನೂರಾರು ಕಾರ್ಯಕರ್ತರು ಪಾಲ್ಗೊಂಡು ಮೆರವಣಿಗೆ ನಡೆಸಿದರು. ಸಂಘದ ಜಿಲ್ಲಾ ಅಧ್ಯಕ್ಷರಾದ ಸಂತೋಷಮ್ಮ ಪ್ರಧಾನ ಕಾರ್ಯದರ್ಶಿ ವಿದ್ಯಾವತಿ ಕಾಡೊದಿಕರ, ಬಕಲಾದೇವಿ ಕುಲಕರ್ಣಿ, ಆಶಾಬಡ್ಡಾಳೆ, ಸರೋಜಿನಿ ಗಾಯಕವಾಡ, ಶ್ರೀದೇವಿ ಹುಡೆ ಪ್ರಭು ಸಂತೋಷಕರ ಮುಂತಾದವರು ನೇತೃತ್ವವಹಿಸಿದ್ದರು. ಡಿ.ವೈ.ಎಫ್.ಐ.,ಜೆ.ಎಂ.ಎಸ್.ನ ಸ್ಥಳೀಯ ಮುಖಂಡರು ಸಹ ಪಾಲ್ಗೊಂಡಿದ್ದರು.

ರಾಮದುರ್ಗ:

ಅಂಗನವಾಡಿ ಕೇಂದ್ರಗಳನ್ನು ಖಾಸಗೀಕರಣಗೊಳಿಸುವ ಪ್ರಯತ್ನಗಳನ್ನು ವಿರೋಧಿಸಿ ಅಕ್ಟೋಬರ್ 3 ರಂದು ಅಂಗನವಾಡಿ ನೌಕರರು ರಾಮದುರ್ಗದಲ್ಲಿ ಮೆರವಣಿಗೆ ಹಾಗೂ ಧರಣಾ ಕಾರ್ಯಕ್ರಮ ನಡೆಸಿದರು. ಖಾಯಂ ನೌಕರರೆಂದು ಪರಿಗಣಿಸಲು ಒತ್ತಾಯಿಸಿ ಖಾಸಗೀಕರಣ ವಿರೋಧಿಸಿ, ನಿವೃತ್ತಿ ವೇತನ, ರಜೆ ಬೋನಸ್ ಇತ್ಯಾದಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ಈ ಕಾರ್ಯಕ್ರಮ ನಡೆಯಿತು. ಸುಮಾರು 300 ಮಹಿಳಾ ಅಂಗನವಾಡಿ ನೌಕರರು ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿ ತಾಲೂಕಾ ಪಂಚಾಯತದ ಎದುರು ಸಂಜೆಯವರೆಗೆ ಧರಣಿ ನಡೆಸಿದರು. ನೌಕರರನ್ನುದ್ದೇಶಿಸಿ ಸಂಘದ ಗೌರವ ಅಧ್ಯಕ್ಷ ವಿ.ಪಿ. ಕುಲಕರ್ಣಿ ಹಾಗೂ ಗೈಬು ಜೈನೆಕಾನ ವಿವರವಾಗಿ ಮಾತನಾಡಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು.

ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಿ.ಡಿ.ಪಿ.ಓ. ಅವರುಗಳು ಮನವಿ ಸ್ವೀಕರಿಸಿ ಸ್ಥಳೀಯ ಮಟ್ಟದ ಉರುವಲು ಕಟ್ಟಿಗೆ ಸಮಸ್ಯೆ, ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ವೇತನ, ಸಾಮಗ್ರಿಗಳ ಸರಿಯಾದ ತೂಕ ತುರ್ತಾಗಿ ಬಗೆಹರಿಸುವ ಭರವಸೆ ನೀಡಿದರು.

ಅಂಗನವಾಡಿ ನೌಕರರಿಗೆ ಪ್ರತ್ಯೇಕ ಹಸಿರು ಪಡಿತರ ಕಾರ್ಡು ಹಾಗೂ ಕೇಂದ್ರಗಳಿಗೆ ಚಿಮಣಿ-ಎಣ್ಣೆ ಪೂರೈಸಲು ತಹಶೀಲದಾರರಿಗೆ ಪ್ರತ್ಯೇಕ ಮನವಿ ಸಲ್ಲಿಸಿದ್ದು ಕೂಡಲೇ ಗಮನ ಹರಿಸುವುದಾಗಿ ತಿಳಿಸಿದ್ದಾರೆ.

ಮೆರವಣಿಗೆ ಹಾಗೂ ಧರಣಾ ಕಾರ್ಯಕ್ರಮದ ನೇತೃತ್ವವನ್ನು ಸಿಐಟಿಯು ಮುಖಂಡ ನಾಗಪ್ಪ ಸಂಗೊಳ್ಳಿ, ಸಂಘದ ಅಧ್ಯಕ್ಷ ಶ್ರೀಮತಿ ಅಕ್ಕಮ್ಮ ದೊಡ್ಡಮನಿ, ಕಾರ್ಯದರ್ಶಿ ಶ್ರೀಮತಿ ಕೆ.ಕೆ. ಸಂಬಾಳ ಮುಂತಾದವರು ವಹಿಸಿದ್ದರು.



ಅತಿವೃಷಿಯಿಂದ ಭತ್ತದ ಬೆಳೆ ನಾಶ: ಪರಿಹಾರಕ್ಕೆ ರೈತ ಸಂಘದ ಮನವಿ

ಅತಿಮಳೆಯಿಂದಾಗಿ ಈ ಬಾರಿ ಉಡುಪಿ ತಾಲೂಕಿನಲ್ಲಿ 2500 ಎಕರೆಯಲ್ಲಿ ಭತ್ತದ ಬೆಳೆ ನಷ್ಟವಾಗಿದೆ. ಇದರಿಂದಾಗಿ ಸುಮಾರು 35 ಲಕ್ಷ ರೂಗಿಂತಲೂ ಹೆಚ್ಚು ನಷ್ಟಹೊಂದಿ ರೈತರು ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ ಎಂದಿರುವ ಪ್ರಾಂತ ರೈತ ಸಂಘದ ತಾಲೂಕು ಸಮಿತಿ ಕೂಡಲೇ ಪರಿಹಾರ ಘೋಷಿಸಬೇಕೆಂದು ಮನವಿ ಸಲ್ಲಿಸಿದೆ.

ಮಳೆಯಿಂದಾಗಿ ಭತ್ತದ ಬೆಳೆ ಕಟಾವು ಸಾಧ್ಯವಾಗದೆ ಬೆಳೆ ಅಡ್ಡ ಬಿದ್ದು ನೆಲ ಕಚ್ಚಿದೆ. ಹುಲ್ಲು ಕೊಳೆತು ಹಾಳಾಗಿದೆ, ಕೊಯ್ಯಲು ಬಂದ ಭತ್ತ ಕಣಜಕ್ಕೆ ಬಾರದೆ ರೈತರ ಬದುಕು ದುಸ್ತರಗೊಂಡಿದೆ.

ಘೋರ ಆಘಾತಕ್ಕೊಳಗಾಗಿರುವ ರೈತರ ನೆರವಿಗಾಗಿ ಸರ್ಕಾರ ಮುಂದೆ ಬಂದು ಬೆಳೆ ಸಾಲ ಪಾವತಿಯನ್ನು ಮುಂದೂಡಬೇಕು. ಬಡ್ಡಿಯನ್ನು ಮನ್ನಾಗೊಳಿಸಬೇಕು. ಮುಂದಿನ ಬಿತ್ತನೆಗೆ ಬಡ್ಡಿ ರಹಿತ ಸಾಲ ಹಾಗೂ ಉಚಿತ ಬಿತ್ತನೆ ಬೀಜ ನೀಡುವಂತೆ. ಸರ್ಕಾರವನ್ನು ರೈತ ಸಂಘದ ನಿಯೋಗ ಮನವಿ ಪತ್ರದಲ್ಲಿ ಒತ್ತಾಯಿಸಿದೆ. ತಹಶೀಲ್ದಾರರಿಗೆ ಮನವಿ ಸಲ್ಲಿಸಿದ ನಿಯೋಗದಲ್ಲಿ ವಾಸುಗಟ್ಟಿ, ಬಿ.ನಾರಾಯಣ, ಶಾಂತಲ ಲಕ್ಷ್ಮಣ ಪೂಜಾರಿ, ಡೊಂಬಯ್ಯ ಪೂಜಾರಿ ಹಾಗೂ ರಾಮಣ್ಣ ಪೂಜಾರಿ ಮೊದಲಾದವರಿದ್ದಾರೆ.



ಮಹಾಧಿವೇಶನ

ದೇಶದಲ್ಲಿ ಕಮ್ಯುನಿಸ್ಟ್ ಆಂದೋಲನಕ್ಕೆ ದಿಕ್ಕು ನೀಡುವಲ್ಲಿ ಹಾಗೂ ದೇಶದ ಪ್ರಜಾಪ್ರಭುತ್ವ ಆಂದೋಲನವನ್ನು ಮುನ್ನಡೆಸುವಲ್ಲಿ ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನ ಏನು ಕೊಡುಗೆ ನೀಡಿದೆ? ಈ ಮಹಾಧಿವೇಶನದಲ್ಲಿ ಪುನರಾಯ್ಕೆಗೊಂಡ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ವಿವರಿಸುತ್ತಾರೆ.

ಇನ್ನೊಂದು ಮೈಲಿಗಲ್ಲು

- ಹರ್ಕಿಶನ್ ಸಿಂಗ್ ಸುರ್ಜಿತ್

ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸನ್ನಿವೇಶಗಳೆರಡೂ ಬಹಳಷ್ಟು ಕ್ಲಿಷ್ಟವಾಗಿರುವ ಒಂದು ಸಂದರ್ಭದಲ್ಲಿ ನಡೆಯಿತು. ಕಮ್ಯುನಿಸ್ಟರಾಗಿ ನಾವು ಭಾರತದ ಮೇಲೆ ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಪ್ರಭಾವವನ್ನು ನಿರ್ಲಕ್ಷಿಸುವಂತಿಲ್ಲ. ಸೋವಿಯತ್ ಒಕ್ಕೂಟದ ಅವಸಾನದ ನಂತರ ಐ.ಎಂ.ಎಫ್. - ವಿಶ್ವ ಬ್ಯಾಂಕ್ ತಂತ್ರಗಳಿಗೆ ಮುಕ್ತ ಅವಕಾಶ ದೊರೆತು ನಮ್ಮ ಆರ್ಥಿಕ ಸ್ವಾತಂತ್ರ್ಯದ ಮೇಲೆ ದುಷ್ಪರಿಣಾಮ ಬೀರಿತು. ರಾಜಕೀಯ ರಂಗದಲ್ಲೂ ಏಕಧ್ರುವ ಜಗತ್ತು ಸೃಷ್ಟಿಯಾಗಿ ಅಮೆರಿಕನ್ ಸಾಮ್ರಾಜ್ಯಶಾಹಿ ಇಡೀ ಜಗತ್ತಿನ ಮೇಲೆ ಜಾಗತೀಕರಣ ಹಾಗೂ ನವ-ಉದಾರೀಕರಣದ ತನ್ನದೇ ಕಣ್ಣೋಟವನ್ನು ಹೇರಲಾರಂಭಿಸಿತು.

ಆದರೆ ಈ ಬೆಳವಣಿಗೆಗಳ ವಿನಾಶಕಾರಿ ಪರಿಣಾಮಗಳೂ ಕಾಣಬರಲಾರಂಭಿಸಿದವು. ಮೊದಲು ಮೆಕ್ಸಿಕೋದಲ್ಲಿ ಹಣಕಾಸು ಬಿಕ್ಕಟ್ಟು ಪ್ರಕಟವಾಯಿತು. ನಂತರ 'ಏಶಿಯಾದ ಹುಲಿ' ಗಳೆನಿಸಿ ಕೊಂಡ ದೇಶಗಳನ್ನು, ಆಮೇಲೆ ರಶ್ಯಾ, ಈಗ ಬ್ರೆಝಿಲ್, ಅರ್ಜಂಟಿನಾಗಳನ್ನು ತಟ್ಟುತ್ತಿದೆ. ಅದೇ ವೇಳೆ ಈ ನೀತಿಗಳ ವಿರುದ್ಧ ಪ್ರತಿರೋಧವೂ ಬೆಳೆಯಲಾರಂಭಿಸಿದೆ - ಮೂರನೇ ಜಗತ್ತಿನಲ್ಲಿ ಮಾತ್ರವಲ್ಲ, ಮುಂದುವರಿದ ದೇಶಗಳಲ್ಲೂ. ಇದು ರಾಜಕೀಯ ರಂಗದಲ್ಲೂ ಪ್ರತಿಫಲನ ಗೊಳ್ಳುತ್ತಿದೆ. ಯುರೋಪಿನ ಹಲವು ದೇಶಗಳಲ್ಲಿ ಸೋಶಲ್ ಡೆಮಾಕ್ರೆಟಿಕ್ ಪಕ್ಷಗಳು ಚುನಾವಣೆ ಗೆದ್ದಿವೆ - ಇವು ಚುನಾವಣೆ ಗೆದ್ದಿರುವುದು ನಿರುದ್ಯೋಗ ಸಮಸ್ಯೆಯನ್ನು ಎದುರಿಸುವ, ವೇತನ ಕಡಿತಗಳನ್ನು ಹೋಗಲಾಡಿಸುವ ಭರವಸೆಗಳ ಆಧಾರದಲ್ಲಿ. ಹಿಂದಿನ ಸಮಾಜವಾದಿ ದೇಶಗಳಲ್ಲಿ, ಮುಖ್ಯವಾಗಿ ರಶ್ಯಾದಲ್ಲಿ ಕೂಡಾ ಪ್ರತಿರೋಧ ಬೆಳೆಯುತ್ತಿದೆ.

ಸಮಾಜವಾದಿ ದೇಶಗಳಲ್ಲಿ ಮಾತ್ರ ಪರಿಸ್ಥಿತಿ ಭಿನ್ನವಾಗಿದೆ. ಕ್ಯೂಬಾ ಅಮೆರಿಕದ ಕ್ರೂರ ನಿರ್ಬಂಧವನ್ನು ಎದುರಿಸಿ ನಿಂತು ತನ್ನ ಪುಕ್ಕಟೆ ಶಿಕ್ಷಣ, ಆರೋಗ್ಯ, ವಸತಿ ಇತ್ಯಾದಿಗಳ ಸಾಮಾಜಿಕ ರಚನೆಯನ್ನು ಉಳಿಸಿಕೊಂಡಿದೆ. ಚೀಣಾ ತ್ವರಿತ ಬೆಳವಣಿಗೆ ಸಾಧಿಸಿದೆ. ವಿಯೆಟ್ನಾಂ ಕೂಡಾ ಮುನ್ನಡೆಯುತ್ತಿದೆ. ಹದಿನಾರನೇ ಮಹಾಧಿವೇಶನ ಅಂತರ್ರಾಷ್ಟ್ರೀಯ ಸನ್ನಿವೇಶದ ಕುರಿತು ನಡೆಸಿದ ಚರ್ಚೆ ಬಂಡವಾಳಶಾಹಿ ಬಳಿ ಸಮಾಜದ ಸಮಸ್ಯೆಗಳಿಗೆ ಉತ್ತರಗಳೇ ಇಲ್ಲ, ಕೇವಲ ಒಂದು ಹೊಸ ಸಾಮಾಜಿಕ ವ್ಯವಸ್ಥೆಯಿಂದಷ್ಟೇ ಈ ಸಮಸ್ಯೆಗಳನ್ನು ಎದುರಿಸಲು ಸಾಧ್ಯ ಎಂಬ ನಂಬಿಕೆಯನ್ನು ಬಲಪಡಿಸಿದೆ.

ಮುನ್ನಡೆಯ ದಿಕ್ಕು

16ನೇ ಮಹಾಧಿವೇಶನದ ರಾಜಕೀಯ ನಿರ್ಣಯ ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಸನ್ನಿವೇಶದ ವಿವರವಾದ ಚರ್ಚೆ ನಡೆಸಿದೆ. ದೇಶದಲ್ಲಿ ಕಮ್ಯುನಿಸ್ಟ್ ಆಂದೋಲನಕ್ಕೆ ಒಂದು ದಿಕ್ಕು ನೀಡುವುದು ಹಾಗೂ ಪ್ರಜಾಪ್ರಭುತ್ವ ಆಂದೋಲನ ಮುನ್ನಡೆಸುವುದು ಇದರ ಉದ್ದೇಶ. ಮೂರುವರೆ ವರ್ಷಗಳ ನಂತರ ನಡೆದ ಈ ಮಹಾಧಿವೇಶನದ ವೇಳೆಗೆ ದೇಶದಲ್ಲಿನ ಪರಿಸ್ಥಿತಿ ಬಹಳಷ್ಟು ಕ್ಲಿಷ್ಟಗೊಂಡಿದೆ. 15ನೇ ಮಹಾಧಿವೇಶನ ಗಮನಿಸಿದ್ದಂತೆ ಐಎಂಎಫ್-ವಿಶ್ವಬ್ಯಾಂಕ್ ನೀತಿಗಳಿಗೆ ಅಂಟಿಕೊಂಡ ಕೋಮುವಾದಿ ಶಕ್ತಿಗಳಿಗೆ ತಲೆಬಾಗಿದ, ಕಾಶ್ಮೀರ ಸಮಸ್ಯೆಯನ್ನು ಎದುರಿಸಲಾಗದ ಹಾಗೂ ಭ್ರಷ್ಟಾಚಾರದ ಕಾರಣ 1996 ರ ಚುನಾವಣೆಗಳಲ್ಲಿ ಕಾಂಗ್ರೆಸ್ ಭಾರೀ ಪರಾಭವ ಅನುಭವಿಸಿತು. ಆದರೆ ಇದರ ಹಿಂದೆ ಇದ್ದ ಜನಗಳ ಅಸಂತೃಪ್ತಿಯ ಪ್ರಯೋಜನ ಅತಿ ಬಲಪಂಥೀಯ ಪಕ್ಷವಾದ ಬಿಜೆಪಿಗೆ ದೊರೆಯಿತು. ಚುನಾವಣೆಗಳ ನಂತರ ಅಧಿಕಾರ ಗಿಟ್ಟಿಸುವ ಅದರ ಪ್ರಯತ್ನ ಸಿಪಿಐ(ಎಂ) ಮತ್ತು ಎಡ ಶಕ್ತಿಗಳಿಂದಾಗಿ ವಿಫಲಗೊಂಡು, ನಮ್ಮ ಮುತುವರ್ಜಿಯಿಂದ ಸಂಯುಕ್ತ ರಂಗ ರೂಪುಗೊಂಡಿತು. ಸಂಯುಕ್ತ ರಂಗ ಸರಕಾರ ಹಲವು ಸಕಾರಾತ್ಮಕ ಕ್ರಮಗಳನ್ನು ಕೈಗೊಂಡರೂ ಜನ ಸಾಮಾನ್ಯರಿಗೆ ಪರಿಹಾರ ಒದಗಿಸುವ ಕ್ರಮಗಳಿಗೆ ಆದ್ಯತೆ ಕೊಡುವಲ್ಲಿ ವಿಫಲಗೊಂಡಿತು. ಅವೇ ಉದಾರೀಕರಣ ನೀತಿಗಳನ್ನು ಮುಂದುವರೆಸಿತು. ಹನ್ನೊಂಧನೇ ಲೋಕಸಭೆಯ ಲೆಕ್ಕಾಚಾರದಲ್ಲಿ ಈ ಸರಕಾರ ಕಾಂಗ್ರೆಸ್‌ನ ಹೊರಗಿನ ಬೆಂಬಲವನ್ನು ಅವಲಂಬಿಸಬೇಕಾಗಿತ್ತು. ಮತ್ತೆ ಅಧಿಕಾರಕ್ಕೆ ಬರುವ ಕಾಂಗ್ರೆಸ್ ಮುಖಂಡರ ತವಕದಿಂದಾಗಿ 1998 ರಲ್ಲಿ ಮತ್ತೆ ಚುನಾವಣೆಗಳು ನಡೆದವು.

ಈ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಪರಿಸ್ಥಿತಿಯೇನೂ ಸುಧಾರಿಸಿಲ್ಲ. ಬಿಜೆಪಿ ತನ್ನ ಬಲ ಹೆಚ್ಚಿಸಿಕೊಂಡು ಈ ಬಾರಿಯೂ ಅತಿ ದೊಡ್ಡ ಪಕ್ಷವಾಗಿ ಮೂಡಿ ಬಂತು. 17 ಪಕ್ಷಗಳನ್ನು - ಇವುಗಳಲ್ಲಿ ಹೆಚ್ಚಿನವು ಪ್ರಾದೇಶಿಕ ಪಕ್ಷಗಳು-ಸೇರಿಸಿ, ಸಂಯುಕ್ತ ರಂಗವನ್ನು ಬಿಟ್ಟ ತೆಲುಗುದೇಶಂನ ನೆರವಿನಿಂದ ಅದು ಸರಕಾರ ರಚಿಸಿತು.

ಬಿಜೆಪಿ ನೇತೃತ್ವದ ಸರಕಾರ ಅಧಿಕಾರ ಗಳಿಸಿರುವುದು ದೇಶದ ಐಕ್ಯತೆಗೆ, ದುಡಿಯುವ ಜನಗಳ ಐಕ್ಯತೆಗೆ ಒಂದು ಗಂಭೀರ ಅಪಾಯ. ಹದಿನಾರನೇ ಅಧಿವೇಶನದ ರಾಜಕೀಯ ನಿರ್ಣಯ ಗಮನಿಸಿದಂತೆ ಇದು ಒಂದು ಬಂಡವಾಳಶಾಹಿ ಪಕ್ಷದ ಸ್ಥಾನದಲ್ಲಿ ಇನ್ನೊಂದು ಬಂಡವಾಳಶಾಹಿ ಪಕ್ಷ ಬರುವ ಸಾಮಾನ್ಯ ಬದಲಾವಣೆಯಲ್ಲ, ಏಕೆಂದರೆ ಬಿಜೆಪಿ ಫ್ಯಾಸಿಸ್ಟ್ ಮಾದರಿಯ ಸಿದ್ಧಾಂತ ಹೊಂದಿದ ಹಿಂದೂರಾಷ್ಟ್ರದ ದುಷ್ಟ ಸಿದ್ಧಾಂತದ ಆರ್.ಎಸ್.ಎಸ್. ನ ರಾಜಕೀಯ ಅಂಗ.

ಈಗಿನ ಪ್ರಧಾನ ಕೆಲಸ

ಕಳೆದ ಆರು ತಿಂಗಳಲ್ಲಿ ವಾಜಪೇಯಿ ಸರಕಾರ ಕೈಗೊಂಡ ಕ್ರಮಗಳು ಬಿಜೆಪಿಗೆ ತನ್ನ ಮನಬಂದಂತೆ ವರ್ತಿಸಲು ಅವಕಾಶ ಕೊಟ್ಟರೆ ದೇಶಕ್ಕೆ ಹಾಗೂ ಪ್ರಜಾಪ್ರಭುತ್ವ ಆಂದೋಲನಕ್ಕೆ ಎಂತಹ ಅನಾಹುತಗಳನ್ನು ತರುತ್ತದೆ ಎಂಬುದರ ಸ್ಪಷ್ಟ ಸಂಕೇತಗಳನ್ನು ನೀಡಿವೆ.

ಆದರೂ ಬಿಜೆಪಿಯೊಂದಿಗೆ ಕೈ ಮಿಲಾಯಿಸಿದ ಪ್ರಾದೇಶಿಕ ಪಕ್ಷಗಳು ಹಿಂದುತ್ವ ಸಿದ್ಧಾಂತ ತಮ್ಮ ಸ್ವಂತಿಕೆಗೇ ತದ್ವಿರುದ್ಧವಾದದ್ದು ಎಂದು ಇನ್ನೂ ಅರಿತಂತಿಲ್ಲ. ಈ ಸ್ವಂತಿಕೆ ಒಂದು ಬಲವಾದ ಒಕ್ಕೂಟ ವ್ಯವಸ್ಥೆಯಲ್ಲಿ ಮಾತ್ರ ಉಳಿಯಲು ಸಾಧ್ಯ. ಭಾರತದ ಐಕ್ಯತೆ ಮತ್ತು ಪ್ರಜಾಪ್ರಭುತ್ವದ ಆಧಾರಕ್ಕೆ ಬಂದಿರುವ ಗಂಭೀರ ಅಪಾಯದಿಂದಾಗಿ 16ನೇ ಮಹಾಧಿವೇಶನ ಅಂಗೀಕರಿಸಿದ ರಾಜಕೀಯ ನಿರ್ಣಯ ಈ ಶಕ್ತಿಗಳ ವಿರುದ್ಧ ಹೋರಾಡುವುದೇ ಮುಂಬರುವ ದಿನಗಳಲ್ಲಿನ ಪ್ರಧಾನ ಕೆಲಸ ಎಂದಿದೆ.

ಎರಡನೆಯದಾಗಿ, ವಾಜಪೇಯಿ ಸರಕಾರ ಅವೇ ಆರ್ಥಿಕ ನೀತಿಗಳನ್ನು ಹಿಂದಿನ ಕಾಂಗ್ರೆಸ್ (ಐ) ಮತ್ತು ಸಂಯುಕ್ತ ರಂಗ ಸರಕಾರಗಳಿಗಿಂತಲೂ ರಭಸದಿಂದ ಮುಂದುವರೆಸುತ್ತಿದೆ. 'ಸ್ವದೇಶಿ' ಎಂಬುದು ಕೇವಲ ಜನಗಳನ್ನು ಮರುಳು ಮಾಡಲು ಘೋಷಣೆ ಎಂದು ಸಿದ್ಧವಾಗಿದೆ. ಈ ನೀತಿಗಳು ದಕ್ಷಿಣ ಪೂರ್ವ ಏಶ್ಯಾದ ದೇಶಗಳಲ್ಲಿ ಕಂಡುಬಂದಂತೆ ನಮ್ಮ ದೇಶದ ಮೇಲೂ ಗಂಭೀರ ದುಷ್ಪರಿಣಾಮ ಬೀರುವಂತದ್ದು. ಆದ್ದರಿಂದ ಈ ಧೋರಣೆಗಳ ವಿರುದ್ಧ ದೊಡ್ಡ ಪ್ರಮಾಣದ ಹೋರಾಟಗಳನ್ನು ಕೈಗೆತ್ತಿಕೊಳ್ಳಬೇಕು. ದೇಶದ ಆರ್ಥಿಕ ಸ್ವಾತಂತ್ರ್ಯವನ್ನು ರಕ್ಷಿಸುವುದು ಪಕ್ಷದ ಮುಂದಿರುವ ಪ್ರಧಾನ ಕೆಲಸಗಳಲ್ಲಿ ಒಂದು.

ಕೋಮುವಾದದ ವಿರುದ್ಧ ಹೋರಾಟ ಹೇಗೆ?

ಮುಂದಿನ ಪ್ರಶ್ನೆಯೆಂದರೆ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟಗಳನ್ನು ಹೇಗೆ ನಡೆಸುವುದು ಎಂದು. ಭಾರತೀಯ ಜನಗಳು ದೇಶ ಪ್ರೇಮಿಗಳು. ಅವರನ್ನು ಈ ಹೋರಾಟದಲ್ಲಿ ಅಣಿನೆರೆಸಬೇಕು. 1998 ರ ಚುನಾವಣೆಗಳಲ್ಲಿ ಮತದಾನ ಮಾಡಿರುವಲ್ಲಿ 63% ಬಿಜೆಪಿ ಕೂಟದ ವಿರುದ್ಧ ಮತ ನೀಡಿದ್ದಾರೆ. ಅವರನ್ನು ಜಾಗೃತಗೊಳಿಸಬೇಕು. ಈ ಕೋಮು ಪಿಡುಗನ್ನು ಎದುರಿಸಲು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಮಾತ್ರವಲ್ಲ, ಆರ್ಥಿಕ ನೀತಿಗಳಲ್ಲಿ ಎಡ ಪಕ್ಷಗಳ ನಿಲುವುಗಳನ್ನು ವಿರೋಧಿಸುವ ಇತರ ಜಾತ್ಯಾತೀತ ಪಕ್ಷಗಳನ್ನು ಒಟ್ಟುಗೂಡಿಸಬೇಕು. ಕಾಂಗ್ರೆಸ್ಸಿನ ಹಿಂದಿರುವ ಜನ ಸಮೂಹಗಳು ಸಾಮಾನ್ಯವಾಗಿ ಜಾತ್ಯಾತೀತ ಸ್ವಭಾವದವರು. ಆದ್ದರಿಂದಲೇ 16ನೇ ಮಹಾಧಿವೇಶನ ಎಡ, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಪರ್ಯಾಯವನ್ನು ಕಟ್ಟುವ ಕರೆ ನೀಡಿತು. ಆದರೆ ಇದು ಐಎಂಎಫ್-ವಿಶ್ವಬ್ಯಾಂಕ್ ಹೇರಿದ ಉದಾರೀಕರಣ ನೀತಿಗಳ ವಿರುದ್ಧ ಹೋರಾಟಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿ ತರಬಾರದು. ಏಕೆಂದರೆ ಜನಸಾಮಾನ್ಯರ ಮೇಲೆ ಈ ನೀತಿಗಳು ಭಾರಿ ದುಷ್ಪರಿಣಾಮ ಬೀರುವಂತವು. ಈ ನೀತಿಗಳ ವಿರುದ್ಧ ಅವರ ಹೋರಾಟಗಳಿಗೆ ನೇತೃತ್ವ ನೀಡಿ, ಮಾರ್ಗದರ್ಶನ ನೀಡದಿದ್ದರೆ ಕೋಮುವಾದದ ವಿರುದ್ಧ ಹೋರಾಟವೂ ಸುಲಭವಲ್ಲ.

ಪಕ್ಷದ ಮಹಾಧಿವೇಶನದ ಮೂರನೇ ಮಹತ್ವಪೂರ್ಣ ತೀರ್ಮಾನವೆಂದರೆ ಕೋಮುವಾದಿ ಶಕ್ತಿಗಳು ಮತ್ತು ಆರ್ಥಿಕ ನೀತಿಗಳ ವಿರುದ್ಧ ಹೋರಾಟವನ್ನು, ಪ್ರಚಾರವನ್ನು ನಡೆಸುತ್ತಲೇ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಸೈದ್ಧಾಂತಿಕ ಹಾಗೂ ಇತರ ವ್ಯಾಪಕ ಬೇಡಿಕೆಗಳ ಮೇಲೂ ಆಂದೋಲನಗಳನ್ನು ಸಂಘಟಿಸಬೇಕು. ಈ ವಿಶಾಲ ತಳಹದಿಯ ಆಂದೋಲನಗಳ ಮೂಲಕ ದೇಶದಲ್ಲಿ ವರ್ಗ ಬಲಾಬಲವನ್ನು ಶ್ರಮಜೀವಿಗಳ ಪರವಾಗಿ ಬದಲಿಸಬೇಕು. ಇದಕ್ಕೆ ಎಡಶಕ್ತಿಗಳ ಐಕ್ಯತೆಯನ್ನು ಇನ್ನಷ್ಟು ಗಟ್ಟಿಗೊಳಿಸುವುದು ಮಹತ್ವಪೂರ್ಣ. ಈ ಪ್ರಕ್ರಿಯೆಯ ಮೂಲಕವೇ ನಾವು ನಿಜವಾದ ಪರ್ಯಾಯವನ್ನು ಅಂದರೆ ಎಡ-ಪ್ರಜಾಸತ್ತಾತ್ಮಕ ಪರ್ಯಾಯವನ್ನು ಮುಂದಿಡಲು ಸಾಧ್ಯ. ಮಹಾಧಿವೇಶನದ ರಾಜಕೀಯ ನಿರ್ಣಯದಲ್ಲೇ ಇದಕ್ಕೆ ಅಗತ್ಯವಾದ ವೇದಿಕೆಯನ್ನು ಮುಂದಿಡಲಾಗಿದೆ.


ತಕ್ಷಣದ ಸನ್ನಿವೇಶದಲ್ಲಿ


ತಕ್ಷಣದ ಸನ್ನಿವೇಶಕ್ಕೆ ಸಂಬಂಧಪಟ್ಟಂತೆ ರಾಜಕೀಯ ನಿರ್ಣಯದಲ್ಲಿ ಬಿಜೆಪಿ ಸರಕಾರದ ಸ್ಥಾನದಲ್ಲಿ ಬೇರೆ ಸರಕಾರ ಬರುವಂತೆ ಮಾಡುವ ಪ್ರಸ್ತಾವ ಬಹಳ ಮಹತ್ವದ್ದು. ಅತ್ಯಲ್ಪ ಬಹುಮತವಿರುವ, ತನ್ನ ಮಿತ್ರರಿಂದ ಸದಾ ಸಮಸ್ಯೆಗಳನ್ನು ಎದುರಿಸುತ್ತಿರುವ ವಾಜಪೇಯಿ ಸರಕಾರದ ಭವಿಷ್ಯ ಚಿಂತಾಜನಕವಾಗಿದೆ. ಹಲವು ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳಲೂ ಕೂಡಾ ಈ ಸರಕಾರಕ್ಕಾಗುತ್ತಿಲ್ಲ. ಸಚಿವ ಸಂಪುಟದ ವಿಸ್ತರಣೆ ಕೂಡಾ ಅದಕ್ಕೆ ಅಸಾಧ್ಯವಾಗಿದೆ. ತನ್ನದೇ ಅಂತರ್ವಿರೋಧಗಳಿಂದ ಈ ಸರಕಾರ ಕುಸಿದು ಬಿದ್ದರೆ ಆಶ್ಚರ್ಯವೇನಿಲ್ಲ. ಹಾಗಾದಾಗ ಏನು ಮಾಡಬೇಕೆಂಬ ಪ್ರಶ್ನೆ ನಮ್ಮ ಮುಂದಿದೆ. ಜನಗಳಿಗೆ ಇನ್ನೊಂದು ಚುನಾವಣೆ ಬೇಕಿಲ್ಲ, ಆದ್ದರಿಂದ ಬಿಜೆಪಿ ಸರಕಾರಕ್ಕೆ ಯಾವುದಾದರೊಂದು ಪರ್ಯಾಯ ಬರಬೇಕು. 1998 ರ ಚುನಾವಣೆಗಳಲ್ಲಿ ಸಂಯುಕ್ತ ರಂಗ ದುರ್ಬಲಗೊಂಡದ್ದರಿಂದ ಒಂದು ಪರ್ಯಾಯ ಸರಕಾರ ಕಾಂಗ್ರೆಸ್ಸಿನ ಮುತುವರ್ಜಿಯಿಂದ ಮಾತ್ರ ಸಾಧ್ಯ. ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಸರಕಾರಕ್ಕೆ ವಿಷಯ-ಆಧಾರಿತ ಬೆಂಬಲ ನೀಡಲು ಹದಿನಾರನೇ ಮಹಾಧಿವೇಶನ ನಿರ್ಧರಿಸಿತು. ಜಾತ್ಯಾತೀತತೆಯ ವಿಷಯದಲ್ಲಿ ನಾವು ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಒಂದೇ ತಕಡಿಯಲ್ಲಿ ತೂಗುವುದಿಲ್ಲ ಎಂದು ಈ ಹಿಂದೆಯೇ ಹೇಳಿದ್ದೇವೆ. ಕಾಂಗ್ರೆಸ್ ಕೋಮುವಾದದೊಂದಿಗೆ ರಾಜಿ ಮಾಡಿಕೊಂಡರೂ ಅದೊಂದು ಕೋಮುವಾದಿ ಪಕ್ಷವಲ್ಲ, ಅದಕ್ಕೆ ಒಂದು ದೊಡ್ಡ ಜಾತ್ಯಾತೀತ ನೆಲೆಯಿದೆ. ಕಾಂಗ್ರೆಸ್ ಸರಕಾರಕ್ಕೆ ವಿಷಯ-ಆಧಾರಿತ ಬೆಂಬಲ ಕೊಡುವುದು ನಮಗೆ ಇಷ್ಟವಾಗುವಂತದ್ದಲ್ಲ, ಆದರೆ ಬಿಜೆಪಿ ಸರಕಾರ ಬಿದ್ದರೆ ಅದು ಪ್ರಸ್ತುತ ಸನ್ನಿವೇಶದ ಅಗತ್ಯ.

ಈ ಬಗ್ಗೆ ಮಹಾಧಿವೇಶನದಲ್ಲಿ ಬಹಳ ಚರ್ಚೆ ನಡೆಯಿತು. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ನಾಲ್ಕುವರೆ ದಶಕಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ಸಮಾಜವಾದ ತರುವ, ಬಡತನ ತೊಲಗಿಸುವ ಭರವಸೆಗಳನ್ನು ನೀಡಿದರೂ ವಾಸ್ತವವಾಗಿ ಗುತ್ತೇದಾರಿ ಬಂಡವಾಳದ ಹಾಗೂ ಭೂಮಾಲಕ ವರ್ಗಗಳ ಹಿತವನ್ನೇ ರಕ್ಷಿಸಿತು. 1991 ರ ನಂತರ ಅದು ಐಎಂಎಫ್ - ವಿಶ್ವ ಬ್ಯಾಂಕ್‌ಗಳ ಬಾಗಿಲಲ್ಲಿ ನಿಂತು ಅಮೆರಿಕನ್ ಸಾಮ್ರಾಜ್ಯಶಾಹಿಯೆದುರು ಶರಣಾಯಿತು. ಭಾರತ ಬೆಳವಣಿಗೆ ಮತ್ತು ಸಮೃದ್ಧಿಗೆ ಅಪಾರ ಅವಕಾಶ ಇರುವ ಒಂದು ವಿಶಾಲ ದೇಶ. ಈ ಸಾಮರ್ಥ್ಯವನ್ನು ಬಳಸಿಕೊಳ್ಳುವ ಬದಲು ಕಾಂಗ್ರೆಸ್ ನೀತಿಗಳು ಪಾಶ್ಚಿಮಾತ್ಯ ಬಂಡವಾಳಕ್ಕೆ ಅಡಿಯಾಳಾದವು. ಆಂತರಿಕ ಮಾರುಕಟ್ಟೆ ನಿರ್ಮಿಸಿ, ನಿರುದ್ಯೋಗ ನಿವಾರಿಸಲು ನೆರವಾಗಬಹುದಾಗಿದ್ದ, ಜತೆಗೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಬಹುದಾಗಿದ್ದ ಭೂ ಸುಧಾರಣೆಗಳನ್ನು ಕಾಂಗ್ರೆಸ್ ಜಾರಿಗೆ ತರಲೇ ಇಲ್ಲ. ಆದ್ದರಿಂದ ಈ ಕಾಂಗ್ರೆಸ್ ಪಕ್ಷ ತಮ್ಮ ಅಗತ್ಯಗಳನ್ನು ಈಡೇರಿಸಬಲ್ಲದು ಎಂಬ ವಿಶ್ವಾಸ ಜನಗಳಲ್ಲಿ ಇಲ್ಲ. ಈ ಕಾರಣದಿಂದಲೇ ಮಹಾಧಿವೇಶನ ಅಂಗೀಕರಿಸಿದ ರಾಜಕೀಯ ನಿರ್ಣಯ ಕಾಂಗ್ರೆಸ್ಸಿನೊಂದಿಗೆ ಮೈತ್ರಿಯ ಅಥವಾ ಒಂದು ರಂಗ ರಚಿಸಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಹೇಳಿದೆ.

ಎರಡನೆಯದಾಗಿ, ಎಡಪಕ್ಷಗಳು ಬಲಿಷ್ಠವಾಗಿರುವ ರಾಜ್ಯಗಳಲ್ಲಿ ನೇರವಾಗಿ ಕಾಂಗ್ರೆಸ್ಸಿನೊಂದಿಗೆ ಘರ್ಷಣೆಯಿದೆ. ಕಾಂಗ್ರೆಸ್ ಎಷ್ಟೇ ಪ್ರಯತ್ನಿಸಿದರೂ ಎಡ ಶಕ್ತಿಗಳನ್ನು ಇಲ್ಲಿ ದುರ್ಬಲಗೊಳಿಸಲು ಅದಕ್ಕೆ ಆಗಿಲ್ಲ. ಅಲ್ಲದೆ ಎಡ ಶಕ್ತಿಗಳು ಬಲಿಷ್ಠವಾಗಿರುವಲ್ಲಿ ಬಲಪಂಥೀಯ ಅಪಾಯ ಇನ್ನೂ ಗಂಭೀರವಾಗಿ ಕಾಣುತ್ತಿಲ್ಲ. ಆದ್ದರಿಂದ ಕಾಂಗ್ರೆಸಿಗೆ ವಿಷಯ-ಆಧಾರಿತ ಬೆಂಬಲ ಕುರಿತು ಕೆಲವು ಸಂದೇಹಗಳು ಬಂದವು. ಆದರೆ ಈ ಪ್ರಶ್ನೆಯನ್ನು ಇಡೀ ದೇಶ ಎದುರಿಸುತ್ತಿರುವ ವಾಸ್ತವತೆಯ ಹಿನ್ನೆಲೆಯಲ್ಲಿ ನೋಡಬೇಕೆಂಬ ಅರಿವೂ ಇತ್ತು. ಈ ವಾಸ್ತವತೆಯೆಂದರೆ ದೇಶಕ್ಕೆ ಕೋಮುವಾದಿ ಶಕ್ತಿಗಳು ಒಡ್ಡಿರುವ ಬೆದರಿಕೆ. ಇದು ಇಂದು ಎಡಶಕ್ತಿಗಳು ಬಲವಾಗಿರುವ ರಾಜ್ಯಗಳ ಮೇಲೂ ಮುಂದೆ ಪ್ರಭಾವ ಬೀರುತ್ತದೆ. ಆದ್ದರಿಂದ ಇದನ್ನು ಮನಗಂಡು ಆಮೂಲಾಗ್ರ ಚರ್ಚೆಯ ನಂತರ ಅಂತಿಮವಾಗಿ ಮಹಾಧಿವೇಶನ ಒಂದು ಒಮ್ಮತಕ್ಕೆ ಬಂದು ರಾಜಕೀಯ

ಪುಟ 8ಕ್ಕೆ





ದೇಶದ ಕೋಟ್ಯಾಂತರ ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿ-ಯುವಜನರನ್ನು ಪ್ರತಿನಿಧಿಸುವ ೫೦ ಕ್ಕೂ ಹೆಚ್ಚು ಸಂಘಟನೆಗಳು ರಚಿಸಿಕೊಂಡ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ನೀಡಿದ ರಾಷ್ಟ್ರ ವ್ಯಾಪಿ ಹೋರಾಟದ ಕರೆಗೆ ಕರ್ನಾಟಕದಲ್ಲಿ ವ್ಯಾಪಕ ಸ್ಪಂದನ ದೊರೆತಿದೆ. ಈ ಒಂದು ವಾರ ಒಂಭತ್ತು ಮುಖ್ಯ ಜಾಥಾಗಳು, ಅವುಗಳ ಹಲವಾರು ಉಪ ಜಾಥಾಗಳು ರಾಜ್ಯದ ಮೂಲೆ-ಮೂಲೆಗೂ ಜನಸಾಮಾನ್ಯರ ಪ್ರತಿಭಟನೆಯ, ಹೋರಾಟದ, ಬದಲಿ ಧೋರಣೆಗಳ ಸಂದೇಶವನ್ನು ಒಯ್ಯುತ್ತಿವೆ. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ರಾಜ್ಯದಲ್ಲಿ ಇತಿಹಾಸ ಸೃಷ್ಟಿಸಬಹುದಾದ ಈ ಚಳುವಳಿಯ ಒಂದು ನೋಟ ನೀಡಿದ್ದಾರೆ

ಕರ್ನಾಟಕದ ಮೂಲೆ ಮೂಲೆಯಲ್ಲೂ ಹೋರಾಟದ ಸಂದೇಶ

- ವಿ.ಜೆ.ಕೆ.ನಾಯರ್

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಆಗಸ್ಟ್ 12 ರಂದು ನವದೆಹಲಿಯಲ್ಲಿ ನಡೆಸಿದ ಸಮಾವೇಶ ಮತ್ತು ಅದರ ತೀರ್ಮಾನಗಳು ದೇಶವನ್ನಾಳುವ ಬಿಜೆಪಿ ಸರ್ಕಾರದ ಧೋರಣೆಗಳನ್ನು ವಿರೋಧಿಸುವುದರಲ್ಲಿ ಒಂದು ದಿಟ್ಟ ಹೆಜ್ಜೆಯಾಗಿದೆ. ಭಾಜಪ ಸರ್ಕಾರವು ಹಿಂದಿನ ನರಸಿಂಹರಾವ್ ಸರ್ಕಾರದ ಮತ್ತು ಸಂಯುಕ್ತರಂಗ ಸರ್ಕಾರ ಅನುಸರಿಸಿದ ಹೊಸ ಆರ್ಥಿಕ ನೀತಿಯನ್ನು ತೀವ್ರ ರೀತಿಯಲ್ಲಿ ಜಾರಿ ಮಾಡುತ್ತಿದೆ. ಅಲ್ಲದೆ ತಮ್ಮ ಪಕ್ಷದ ಬೆನ್ನೆಲುಬಾದ ವ್ಯಾಪಾರಿ ಬಂಡವಾಳಗಾರರಿಗೆ ಅನುಕೂಲವಾಗುವಂತಹ ನೀತಿಯನ್ನು ಅಷ್ಟೆ ತೀವ್ರಗತಿಯಲ್ಲಿ ಅನುಸರಿಸುತ್ತಿದೆ. ಇದರಿಂದಾಗುವ ಬೆಲೆ ಏರಿಕೆ, ನಿರುದ್ಯೋಗ, ಕೃಷಿ ಉತ್ಪನ್ನದ ಬೆಲೆಯ ಕುಸಿತ ಎಲ್ಲವೂ ದೇಶದ ಜನತೆಯನ್ನು ಯಾವುದೆ ದಾರಿಇಲ್ಲದ ಪರಿಸ್ಥಿತಿಗೆ ತಂದಿವೆ.

ಈ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಎಲ್ಲಾ ಜನವಿಭಾಗಗಳ ಸಂಘಟಿತ ಹೋರಾಟದಿಂದ ಮಾತ್ರ. ಆದರೆ ಜನತೆಯನ್ನು ವಿಭಜಿಸುವ ಕೋಮುವಾದಿ ಧೋರಣೆ ಅನುಸರಿಸುವುದರಲ್ಲೇ ಬಿಜೆಪಿ ಸರ್ಕಾರ ಬಹಳಷ್ಟು ಕಾಳಜಿ ವಹಿಸುತ್ತಿದೆ.

ಹಿಂದಿದ್ದ ಎರಡು ಸರ್ಕಾರಗಳ ಆರ್ಥಿಕ ಧೋರಣೆ ತಪ್ಪಾದರೂ ಕೋಮುವಾದೀಕರಣವನ್ನು ತೀವ್ರ ಗತಿಯಲ್ಲಿ ಮಾಡುವ ಭಾಜಪ ಸರ್ಕಾರದ ಧೋರಣೆಗಳನ್ನು ಅವರುಗಳು ಅನುಸರಿಸುತ್ತಿರಲಿಲ್ಲ. ಆದರೆ ಆ ಸರ್ಕಾರಗಳ ವರ್ಗರಚನೆ ಕೂಡ ಆಳುವ ವರ್ಗದಾಗಿದ್ದು ಅವರ ಆರ್ಥಿಕ ನೀತಿಗಳು ಭಾಜಪ ಸರ್ಕಾರಕ್ಕಿಂತ ಭಿನ್ನವಾಗಿರಲಿಲ್ಲ.

ದೇಶದ ಜನತೆಗೆ ಆಗುವ ಸಂಕಷ್ಟದಿಂದ ಅವರು ಪಾರಾಗಬೇಕಾದರೆ ಆ ಜನ ವಿಭಾಗಗಳ ಹೋರಾಟ ಬೆಳೆದು ಬರಬೇಕಾಗಿದೆ. ಹೊಸ ಆರ್ಥಿಕ ನೀತಿಯು ಎಲ್ಲಾ ಜನವಿಭಾಗಗಳನ್ನು ಭಾದಿಸುತ್ತಿದೆ.

ಸಾರ್ವಜನಿಕ ಕ್ಷೇತ್ರದ ಖಾಸಗೀಕರಣದ ಉದ್ದೇಶದಿಂದ ಈ ಕಾರ್ಖಾನೆಗಳನ್ನು ರೋಗಗ್ರಸ್ಥವಾಗಿ ಮಾಡಲಾಗುತ್ತಿದೆ. ಎಷ್ಟೋ ಕಾರ್ಖಾನೆ ಗಳಲ್ಲಿ ಕಾರ್ಮಿಕರಿಗೆ ಸರಿಯಾದ ಸಮಯಕ್ಕೆ ಸಂಬಳ ನೀಡುತ್ತಿಲ್ಲ. ಕೈಗಾರಿಕೆಯ ಮುಚ್ಚುವಿಕೆ ಕಾರ್ಮಿಕರಿಗೆ ನಿರುದ್ಯೋಗ ತರುತ್ತಿದೆ. ಖಾಸಗಿ ರಂಗದಲ್ಲೂ ಸಣ್ಣ ಕೈಗಾರಿಕೆಯ ಕುಸಿತ, ಅದರ ಉತ್ಪನ್ನಕ್ಕೆ ಬೇಡಿಕೆ ಇಲ್ಲದಿರುವುದು ಇವೆಲ್ಲ ಕಂಡು ಬರುತ್ತಿದೆ.

ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ಬೆಳೆಯುತ್ತಿದೆ. ಅವರ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಜೀವನ ನಡೆಸುವುದೇ ಕಷ್ಟವಾಗಿರುವ ಕೋಟಿಗಟ್ಟಲೇ ಇರುವಂತಹ ದುಡಿಯುವ ವರ್ಗದ ಈ ವಿಭಾಗ ಸರಿ ದಾರಿ ತೋರಿಸಲ್ಪಡದೆ ವಂಚಿತರಾಗಿದ್ದಾರೆ.

ದೇಶದ ಬೆನ್ನೆಲುಬಾದ ರೈತರ ಸಂಕಷ್ಟಕ್ಕೆ ಮಿತಿಯೇ ಇಲ್ಲದಂತಾಗಿದೆ. ಕೆಲವೊಮ್ಮೆ ಅನಾವೃಷ್ಟಿ, ಇನ್ನೊಮ್ಮೆ ಅತಿವೃಷ್ಟಿ, ಏನೇ ಆದರೂ ಬೆಳೆನಾಶ. ಸರ್ಕಾರಿ ಬ್ಯಾಂಕುಗಳು ಈ ರಂಗದಿಂದ ಪಲಾಯನಗೊಂಡು ರೈತರನ್ನು ಸಾಲದ ಬಲೆಗೆ ಹಾಗೂ ಆತ್ಮಹತ್ಯೆಗೆ ತಳ್ಳಿವೆ. ಪ್ರತಿಭಟನೆ ನಡೆಸಿದಲ್ಲಿ ಗುಂಡಿಗೆ ಬಲಿ.

ಯುವಜನಕ್ಕೆ ನಿರುದ್ಯೋಗ ಕಟ್ಟಿಟ್ಟಿದ್ದು ಎಂದಾಗಿದೆ. ವಿದ್ಯಾರಂಗ ಹಿಂದೆಂದೂ ಆಗದ ಖಾಸಗೀಕರಣಕ್ಕೆ ಒಳಗಾಗಿ ಸರ್ಕಾರ ತನ್ನ ಜವಾಬ್ದಾರಿಯಿಂದ ಕಳಚಿಕೊಳ್ಳುವ ಮೂಲಕ ಶ್ರೀಮಂತರ ಮಕ್ಕಳಿಗೆ ಮಾತ್ರ ವಿದ್ಯೆ ಎಂಬ ಪರಿಸ್ಥಿತಿ ಉಂಟಾಗಿದೆ. ಮಹಿಳೆಯರ ಮೇಲಿನ ಅತ್ಯಾಚಾರ ಬೆಳೆಯುತ್ತಿದೆ. ಭಾಜಪ ಸರ್ಕಾರದ ಧೋರಣೆ ಮಹಿಳೆಯರನ್ನು ಅಡಿಗೆ ಮನೆಯಲ್ಲಿ ಮಾತ್ರ ಇರಿಸ ಬೇಕೆಂದು ಅವರಿಗೆ ಕುಟುಂಬದ ಸ್ವತ್ತಿನಲ್ಲಿ ಸಮಾನವಕಾಶ ನೀಡದಿರುವುದು ಮುಂತಾದವೇ ಆಗಿವೆ. ಸಾಂಸ್ಕೃತಿಕ ರಂಗವು ಧರ್ಮ ನಿರಪೇಕ್ಷತೆಯಿಂದ ದೂರವಾಗುತ್ತಿದೆ. ವಿದೇಶಿ ಟಿ.ವಿ. ಚಾನಲ್‌ಗಳ ಪ್ರಭಾವವನ್ನು ತಡೆಗಟ್ಟುವ ಬದಲು ಭಾರತೀಯತೆಯ ಹೆಸರಲ್ಲಿ ಪುರಾಣ ಕಥೆಗಳನ್ನಷ್ಟೇ ತೋರಿಸುವ ನೀತಿ ಅನುಸರಿಸುತ್ತಿದೆ.

ರಾಜ್ಯದಲ್ಲಿ ಚಳುವಳಿ

ಮೇಲೆ ಹೇಳಿದ ಪ್ರತಿಯೊಂದು ರಂಗದ ಜನವಿಭಾಗಗಳ, ಕಾರ್ಮಿಕ, ರೈತ, ಕೃಷಿ ಕೂಲಿಗಾರ, ಯುವಜನ, ವಿದ್ಯಾರ್ಥಿ, ಮಹಿಳೆ ಹಾಗೂ ಸಾಂಸ್ಕೃತಿಕ ಕಾರ್ಯಕರ್ತರು ಇವರೆಲ್ಲರ - ಸಂಘಟನೆಗಳು ಯಾವುದೇ ರಾಜಕೀಯ ಭಿನಾಭಿಪ್ರಾಯವಿಲ್ಲದೆ ಎಲ್ಲರೂ ಒಂದಾಗಿ ನಡೆಸುತ್ತಿರುವ ಚಳುವಳಿ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಮೂಲಕ ಬೆಳೆಯುತ್ತಿದೆ.

ಅಖಿಲ ಭಾರತ ಸಮ್ಮೇಳನದ ಕರೆಯ ಮೇರೆಗೆ ರಾಜ್ಯದ ಸಮಾವೇಶವು ಸೆಪ್ಟೆಂಬರ್ 1 ರಂದು ಬೆಂಗಳೂರಿನ ಪುರಭವನದಲ್ಲಿ ನಡೆಯಿತು. ಯೋಜನಾ ಬದ್ಧವಾದ ಒಂದು ಕಾರ್ಯಕ್ರಮವನ್ನು ಈ ಸಮಾವೇಶ ಅಳವಡಿಸಿದೆ. ಪ್ರತಿಯೊಂದು ರಂಗದ ಬಗ್ಗೆ ವಿಶೇಷ ಅಧ್ಯಯನ ಮಾಡಿದ ತಂಡ ಒಂದೊಂದು ಆ ರಂಗದ ಮೇಲೆ ಹೊಸ ಆರ್ಥಿಕ ನೀತಿಯ ಪರಿಣಾಮಗಳ ಕುರಿತು ಒಂದೊಂದು ವರದಿ ಸಲ್ಲಿಸಿದವು. ಈ ವರದಿಗಳು ಹಾಗೂ ಸಮಾವೇಶದ ಪ್ರಸ್ತಾವನೆ ಹಾಗೂ ಚರ್ಚೆ ಇವುಗಳ ಆಧಾರದಲ್ಲಿ ಜಿಲ್ಲಾ ಸಮಾವೇಶಗಳನ್ನು ಅಕ್ಟೋಬರ್ ತಿಂಗಳಲ್ಲಿ ನಡೆಸಬೇಕೆಂದೂ, ಅಕ್ಟೋಬರ್ ಕೊನೆವಾರ ಹಾಗೂ ನವೆಂಬರ್ ಮೊದಲ ವಾರದಲ್ಲಿ 9 ಪ್ರಾದೇಶಿಕ ಜಾಥಾ ನಡೆಸಬೇಕೆಂದು ಸಮಾವೇಶ ಕರೆ ಕೊಟ್ಟಿತು.

ಜಿಲ್ಲಾ ಮತ್ತು ಸ್ಥಳಿಯ ಸಮಾವೇಶಗಳು, ಜಾಥಾಗಳು ಮುಗಿದ ಮೇಲೆ ನವಂಬರ್ 16 ರಂದು ಬೆಂಗಳೂರು ಚಲೋ ಮತ್ತು ಬೃಹತ್ ಸಭೆ ನಡೆಸಬೇಕೆಂದು ಸಮಾವೇಶ ಕರೆ ನೀಡಿತು. ಡಿಸೆಂಬರ್ 11 ರಂದು ನಡೆಯಲಿರುವ ಅಖಿಲ ಭಾರತ ಮುಷ್ಕರ, ರಸ್ತಾ ರೋಖೋ ಮತ್ತು ರೈಲ್ ರೋಖೋ ಯಶಸ್ವಿಗೊಳಿಸಲು ಸಮಾವೇಶ ಕರೆ ನೀಡಿತು.

ಜಿಲ್ಲಾ ಸಮಾವೇಶಗಳು

ಸೆಪ್ಟೆಂಬರ್ 27 ರಿಂದ ಸತತವಾಗಿ ಜಿಲ್ಲಾ ಸಮಾವೇಶಗಳು ನಡೆದಿರುತ್ತವೆ. ಆ ದಿನದಂದು ಬಳ್ಳಾರಿ ಜಿಲ್ಲಾ ಸಮಾವೇಶವಲ್ಲದೆ, ಬಿಜಾಪುರ ಜಿಲ್ಲಾ ಸಮಾವೇಶವನ್ನು ನಡೆಸಲಾಯಿತು. ಅಕ್ಟೋಬರ್ 11 ರಂದು ತುಮಕೂರು, ಗುಲ್ಬರ್ಗ, ಕೋಲಾರದ ಚಿಂತಾಮಣಿ, ಉತ್ತರ ಕನ್ನಡ ಜಿಲ್ಲಾ ಸಮಾವೇಶಗಳು ನಡೆದಿವೆ. ಅಕ್ಟೋಬರ್ 8 ರಂದು ಮೈಸೂರು, ಬೆಳಗಾಂ, ಬಾಗಲಕೋಟೆ, ಉಡುಪಿ ಮತ್ತು ಶಿವಮೊಗ್ಗದಲ್ಲಿ ನಡೆದವು. ಅಕ್ಟೋಬರ್ 18 ರಂದು ರಾಯಚೂರು ಮತ್ತು ಮೈಸೂರು 22 ರಂದು ಕೆ.ಜಿ.ಎಫ್, 24 ರಂದು ದಾವಣಗೆರೆ ಜಿಲ್ಲಾ ಸಮಾವೇಶ, 25 ರಂದು ಧಾರವಾಡ, ಗದಗ, ಹಾವೇರಿ ಜಿಲ್ಲಾ ಸಮಾವೇಶ ಅಲ್ಲದೆ ಚಿಕ್ಕ ಮಗಳೂರು ಜಿಲ್ಲಾ ಸಮಾವೇಶ ನಡೆದವು. ಅಕ್ಟೋಬರ್ 27 ರಂದು ದ.ಕನ್ನಡದಲ್ಲಿ ನಡೆಯಿತು.

ಈ ಎಲ್ಲಾ ಸಮಾವೇಶಗಳಲ್ಲಿಯೂ ಸಾಮೂಹಿಕ ಸಂಘಟನೆಗಳ ರಾಜ್ಯ ಪ್ರತಿನಿಧಿಗಳು, ವಿವಿಧ ನಾಯಕರುಗಳು ಭಾಗವಹಿಸಿದ್ದಾರೆ. ಹೊಸ ಆರ್ಥಿಕ ನೀತಿಯ ದುಷ್ಪರಿಣಾಮಗಳು ತಮ್ಮ ತಮ್ಮ ಜಿಲ್ಲೆಯಲ್ಲಿ ಒಂದೊಂದು ರಂಗದ ಮೇಲೆ ಯಾವ ರೀತಿ ಆಗಿದೆ ಎಂದು ವರದಿ ಮಂಡಿಸಿದ್ದು ಈ ಸಮಾವೇಶಗಳ ಸಾಧನೆಯಾಗಿದೆ.

ಈ ವರದಿಗಳ ಆಧಾರದಲ್ಲಿ ಮುಂದೆ ನಡೆಯಲ್ಲಿರುವ ಜಾಥಾಗಳ ಸಂದರ್ಭದಲ್ಲಿ ಪ್ರಚಾರ ಆಗಲಿದೆ.

ಜಾಥಾಗಳು

ಬೆಂಗಳೂರು, ಕೋಲಾರ, ತುಮಕೂರು ವಿಭಾಗದ ಜಾಥಾ ಮೂರು ಉಪ ಜಾಥಗಳು ನವೆಂಬರ್ 2 ರಂದು ಬೆಳಿಗ್ಗೆ 11 ಘಂಟೆಗೆ ಬೆಂಗಳೂರು ಬಸ್ ಸ್ಟಾಂಡ್ ಬಳಿಯ ಹೋಟೆಲ್ ಅಮರ್ ಬಳಿಯಿಂದ ಹೊರಡುತ್ತವೆ. ಸಾಂಸ್ಕೃತಿಕ ತಂಡಗಳನ್ನೊಳಗೊಂಡ ಈ ಜಾಥಾಗಳು ಒಟ್ಟು 19 ದಿನಗಳು ಮೂರು ಜಿಲ್ಲೆಯ ಮೂಲೆ ಮೂಲೆಗಳಿಗೆ ಪ್ರವಾಸ ಕೈಗೊಂಡು 60 ಕ್ಕೂ ಮೇಲ್ಪಟ್ಟ ಸಭೆಗಳನ್ನು ಮಾಡಲಿವೆ. ಇದೇ ರೀತಿ ಬೀದರ್-ಗುಲ್ಬರ್ಗ-ರಾಯಚೂರು ವಿಭಾಗದ ಜಾಥಾ ಅಕ್ಟೋಬರ್ ಕೊನೆಯ ವಾರದಲ್ಲಿ 2 ಉಪ ಜಾಥಾಗಳಾಗಿ ಒಂದು ಸಿಂಧನೂರಿನಿಂದ ಇನ್ನೊಂದು ಬಾಲ್ಕಿ ಯಿಂದ ಹೊರಟು ಈ ಮೂರು ಜಿಲ್ಲೆಗಳ ಎಲ್ಲಾ ತಾಲೂಕುಗಳಲ್ಲೂ ಒಟ್ಟು 20 ದಿನಗಳು ಪ್ರಚಾರ ನಡೆಸಲಿವೆ.

ಬೆಳಗಾಂ, ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗಳ ಲ್ಲಿಯೂ 2 ಉಪ ಜಾಥಾಗಳಾಗಿ ಘಟ್ಟದ ಮೇಲಿನ ಜಿಲ್ಲೆಗಳು ಮತ್ತು ಉತ್ತರ ಕನ್ನಡ ಜಿಲ್ಲೆಯ ಉದ್ದಗಲಕ್ಕೂ ಪ್ರವಾಸ ಕೈಗೊಳ್ಳಲಿವೆ.

ತೋಟದ ವಲಯ ಜಿಲ್ಲೆಗಳಾದ ಕೊಡಗು, ಹಾಸನ ಹಾಗೂ ಚಿಕ್ಕ ಮಗಳೂರು ಜಿಲ್ಲೆಗಳಲ್ಲಿ ನಡೆಯಲಿರುವ ಜಾಥಾ ಮಡಿಕೇರಿ ಯಿಂದ ಹೊರಟು 6 ದಿನಗಳು ಪ್ರವಾಸ ಕೈಗೊಳ್ಳಲಿದೆ. ವಿಶೇಷವಾಗಿ ತೋಟದ ಕಾರ್ಮಿಕರ ಕೂಲಿಯನ್ನು ಪರಿಷ್ಕರಿಸಿ ರಾಜ್ಯದ ಕನಿಷ್ಠ ಕೂಲಿ ಸಲಹಾ ಮಂಡಲಿ ಮಾಡಿದ ಶಿಫಾರಸ್ಸು ಅನುಸರಿಸಿ ರಾಜ್ಯ ಸರ್ಕಾರ ಕನಿಷ್ಟ ಕೂಲಿಯನ್ನು ಪರಿಷ್ಕರಿಸ ಬೇಕೆಂಬ ಉಚ್ಚ ನ್ಯಾಯಲಯದ ತೀರ್ಪನ್ನು ಜಾರಿಗೊಳಿಸಬೇಕೆಂಬ ಒತ್ತಾಯವನ್ನೂ ಈ ಜಾಥಾ ಮಾಡಲಿದೆ.

ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿಯೂ ಜಾಥಾ ಏರ್ಪಾಡಾಗಿದೆ. ಹಾಗೆಯೇ ದ.ಕನ್ನಡದ ಜಿಲ್ಲೆಯ ಜಾಥಾ, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳ ಜಾಥಾ, ಬಿಜಾಪುರ, ಬಾಗಲಕೋಟೆ ಕೊಪ್ಪಳ ಜಿಲ್ಲೆಗಳ ಜಾಥಾ ಹಾಗೂ ಬಳ್ಳಾರಿ ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳ ಜಾಥಾ ಇದೇ ಸಂದರ್ಭದಲ್ಲಿ ನಡೆಯಲಿದೆ.

ಎ.ಐ.ಟಿ.ಯುಸಿ., ಸಿ.ಐ.ಟಿ.ಯು, ಯುಟಿಯುಸಿ (ಲೆನಿನ್ ಸರಣಿ) ಈ ಮೂರು ಕೇಂದ್ರ ಕಾರ್ಮಿಕ ಸಂಘಟನೆ ಗಳು, ಅಲ್ಲದೆ ಸ್ಥಳಿಯವಾಗಿ ಹೆಚ್. ಎಂ.ಎಸ್., ಒಂದೆಡೆ ಐ.ಎನ್.ಟಿ. ಯು.ಸಿ. ಈ ಚಳುವಳಿಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದಾರೆ.

ಹಣಕಾಸು ಸಂಸ್ಥೆಗಳ ನೌಕರರ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ (AIBEA), ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟ (AIBOC), ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ (BEFI), ಅಖಿಲ ಭಾರತ ವಿಮಾ ನೌಕರರ ಸಂಘ (AIIEA), ಎಲ್.ಐ.ಸಿ ಎಂಪ್ಲಾಯಿಸ್ ಯೂನಿಯನ್ (LICEU) ಜನರಲ್ ಇನ್ಶೂರೆನ್ಸ್ ನೌಕರರ ಸಂಘ, ಅಖಿಲ ಭಾರತ ಕಿಸಾನ್ ಸಭಾದ ಎರಡೂ ಸಂಘಟನೆಗಳು, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆ, ಯುವಜನ ಸಂಘಟನೆಗಳಾದ ಡಿ.ವೈ.ಎಫ್.ಐ., ಎಐವೈಎಫ್, ಎಐಡಿವೈಓ ಹಾಗೂ ವಿದ್ಯಾರ್ಥಿ ಸಂಘಟನೆಗಳಾದ ಎಸ್.ಎಫ್.ಐ., ಎ.ಐ.ಎಸ್.ಎಫ್, ಎ.ಎಸ್.ಡಿ.ಎಸ್.ಓ, ಮಹಿಳಾ ಸಂಘಟನೆಗಳಾದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (AIDWA), AIMSS, ಸಾಂಸ್ಕೃತಿಕ ಸಂಘಟನೆಗಳಾದ ಸಮುದಾಯ ಆವಿಷ್ಕಾರ, IPTA ಈ ಸಂಘಟನೆಗಳು ಜಂಟಿಯಾಗಿ ನಡೆಸುವ ಈ ಕಾರ್ಯಕ್ರಮಗಳ ಯಶಸ್ವಿಗಾಗಿ ಪ್ರಜಾಸತ್ತೆಯಲ್ಲಿ ನಂಬಿಕೆ ಇರುವ ಎಲ್ಲರೂ ಮುಂದಾಗಬೇಕಾಗಿದೆ.


'ಬೆಂಗಳೂರು ಚಲೋ'

ನವೆಂಬರ್ 16 ರ ಬೆಂಗಳೂರು ಚಲೋ, ಡಿಸೆಂಬರ್ 11 ರ ಮುಷ್ಕರ, ರಸ್ತಾ ರೋಕೋ ಮತ್ತು ರೈಲ್ ರೋಕೋ ಯಶಸ್ವಿಯಾಗಬೇಕಾದರೆ ಮೇಲಿನ ಸಂಘಟನೆಗಳ ಕಾರ್ಯಕರ್ತರನ್ನು ಚಳುವಳಿಯಲ್ಲಿ ಇಳಿಸುವುದು ಮುಖ್ಯ. ಹೊಸ ಆರ್ಥಿಕ ನೀತಿಯನ್ನು ಮತ್ತು ಕೋಮುವಾದವನ್ನು ವಿರೋಧಿಸುವ ಯಾವುದೇ ಸಾಮೂಹಿಕ ಸಂಘಟನೆಯ ಕಾರ್ಯಕರ್ತರು ಮೇಲಿನ ಸಂಘಟನೆಯ ಕಾರ್ಯಕರ್ತರನ್ನು ಸಕ್ರಿಯ ಗೊಳಿಸುವುದನ್ನು ಕರ್ತವ್ಯವನ್ನಾಗಿ ಸವಾಲನ್ನಾಗಿ ಸ್ವೀಕರಿಸಬೇಕು.

ಪ್ರತಿಯೊಂದು ಕಾರ್ಖಾನೆ, ಕಛೇರಿ, ವಿಮಾಸಂಸ್ಥೆ, ಬ್ಯಾಂಕ್, ಕಾಲೇಜ್, ಶಾಲೆ ಮತ್ತು ಜನ ಸಂಘಟನೆಗಳನ್ನು ಸಂಪರ್ಕಿಸಲು ವಿಶೇಷ ಗಮನ ನೀಡುವ ಮೂಲಕ ಕರ್ನಾಟಕದ ಮೂಲೆ ಮೂಲೆಗಳಲ್ಲಿ ನಡೆಯಬೇಕಾದ ಚಳುವಳಿಯ ಮೂಲಕ ತಮಗಾಗುವ ಮೋಸದ ಬಗ್ಗೆ ತಿಳಿದು ಪ್ರತಿಭಟನೆಯ ಮತ್ತು ಹೋರಾಟದ ಕಾರ್ಯಕ್ರಮದಲ್ಲಿ ಮುಂದಾಗುವ ಮೂಲಕ ಆಳುವ ವರ್ಗದ ಧೋರಣೆಯನ್ನು ಹಿಮ್ಮೆಟ್ಟಿಸಿ, ಬದಲಿ ಧೋರಣೆ ಜಾರಿಗೊಳಿಸಲು, ಜನ ಸಮುದಾಯದ ಕಲ್ಯಾಣವನ್ನು ಗುರಿ ಯಾಗಿಟ್ಟುಕೊಂಡ ಬದಲಿ ರಾಜಕೀಯ ಬೆಳೆಸಲು ಸಾಧ್ಯ. ಇದಾಗದೆ ದೇಶದ ಐಕ್ಯತೆ, ಸಮಗ್ರತೆ, ಸಾರ್ವಭೌಮತ್ವ, ಪ್ರಜಾಪ್ರಭುತ್ವ ವಿಧಾನ ಇವುಗಳನ್ನು ಕಾಪಾಡಲು ಸಾಧ್ಯವಾಗದು. ಪ್ರಜ್ಞಾವಂತ ಕಾರ್ಯಕರ್ತರು ಪ್ರತಿಯೊಬ್ಬರೂ ಪ್ರತಿ ಗಳಿಗೆಯೂ ಈ ಚಳುವಳಿಯ ಬೆಳವಣಿಗೆಗಾಗಿ ಶ್ರಮಿಸುವುದು ಕರ್ತವ್ಯವಾಗಿದೆ. ಇದನ್ನು ಮಾಡುವ ಮೂಲಕ ಚರಿತ್ರೆಯನ್ನೇ ಸೃಷ್ಟಿಸಲು ಸಾಧ್ಯ.

ಒಂಭತ್ತು ಮುಖ್ಯ ಜಾಥಾಗಳು ಸಂಚರಿಸುವ ಜಿಲ್ಲಾವಾರು ಚಿತ್ರ
ಮುಖ್ಯ ಜಾಥಾಗಳು ಉಪ ಜಾಥಾಗಳಾಗಿ ಆಯಾಯ ಜಿಲ್ಲೆಗಳಲ್ಲಿ ಸಂಚರಿಸುತ್ತಿವೆ.

ಜಾಥಾ 1 - ಬೆಂಗಳೂರು, ಕೋಲಾರ ತುಮಕೂರು
ಜಾಥಾ 2 - ಮೈಸೂರು, ಮಂಡ್ಯ ಚಾಮರಾಜನಗರ.
ಜಾಥಾ 3 - ಕೊಡಗು, ಹಾಸನ, ಚಿಕ್ಕಮಗಳೂರು.
ಜಾಥಾ 4 - ದಕ್ಷಿಣ ಕನ್ನಡ.
ಜಾಥಾ 5 - ಉಡುಪಿ ಮತ್ತು ಶಿವಮೊಗ್ಗ
ಜಾಥಾ 6 - ಉತ್ತರ ಕನ್ನಡ, ಧಾರವಾಡ, ಹಾವೇರಿ, ಗದಗ ಬೆಳಗಾಂ.
ಜಾಥಾ 7 - ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ
ಜಾಥಾ 8 - ಬೀದರ್, ಗುಲ್ಬರ್ಗ, ರಾಯಚೂರು
ಜಾಥಾ 9 ಬಿಜಾಪುರ, ಬಾಗಲಕೋಟೆ ಕೊಪ್ಪಳ.



ದೇಶದೊಳಗೆ

ದಿಲ್ಲಿ, ರಾಜಸ್ತಾನ, ಮಧ್ಯಪ್ರದೇಶಗಳಲ್ಲಿ ಚುನಾವಣಾ ಪ್ರಚಾರ ಆರಂಭ

ಸೋಲಿನ ಭಯ ಆವರಿಸಿದ ಬಿಜೆಪಿ ಮುಖಂಡರು

ನವಂಬರ್ 25 ರಂದು ದಿಲ್ಲಿ, ರಾಜಸ್ತಾನ, ಮಧ್ಯಪ್ರದೇಶ ಹಾಗೂ ಮಿಜೋರಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಿಗೆ ಪ್ರಚಾರ ಕಾರ್ಯ ಆರಂಭವಾಗಿದೆ. ಇವುಗಳಲ್ಲಿ ಮೊದಲ ಮೂರು ಬಿಜೆಪಿ ಪ್ರಾಬಲ್ಯದ ರಾಜ್ಯಗಳಾಗಿರುವುದರಿಂದ ಈ ಚುನಾವಣೆಗಳು ಕೇಂದ್ರದ ಬಿಜೆಪಿ ನೇತತ್ವದ ಸರಕಾರದ ವಿಫಲತೆಗಳ ಹಿನ್ನೆಲೆಯಲ್ಲಿ ಇಡೀ ದೇಶದ ಗಮನ ಸೆಳೆದಿವೆ. ಒಂದೆಡೆ ಪ್ರಧಾನಮಂತ್ರಿಗಳು ತಮ್ಮ ಪಕ್ಷದ ಕಾರ್ಯಕರ್ತರಿಗೆ ತಮ್ಮ ಸರಕಾರದ 'ಸಾಧನೆ'ಗಳನ್ನು ಜನರ ನಡುವೆ ಪ್ರಚಾರ ಗೊಳಿಸಲು ಕರೆ ನೀಡಿದರೆ, ಇನ್ನೊಂದೆಡೆ ಪಕ್ಷದ ಪ್ರಧಾನ ಕಾರ್ಯದರ್ಶಿ ವೆಂಕಯ್ಯ ನಾಯ್ಡು ಇದು ತಮ್ಮ ಸರಕಾರದ ನೀತಿಗಳ ಬಗ್ಗೆ ಜನಾಭಿಪ್ರಾಯವನ್ನು ಸೂಚಿಸ ಬಹುದಾದ ಚುನಾವಣೆಗಳಲ್ಲ ಎಂದು ಗಟ್ಟಿಯಾಗಿ ಹೇಳಿದ್ದಾರೆ. ಇದು ಬಿಜೆಪಿ ಮುಖಂಡರಲ್ಲಿ ಉಂಟಾಗಿರುವ ನಡುಕದ ಪ್ರತೀಕ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಡುತ್ತಿದ್ದಾರೆ.

ಸ್ವತಃ ಪ್ರಧಾನ ಮಂತ್ರಿಯವರೇ ತಮ್ಮ ಪಕ್ಷದ ಪರವಾಗಿ ಚುನಾವಣಾ ಪ್ರಚಾರ ಕಾರ್ಯವನ್ನು ಆರಂಭಿಸಿದ್ದಾರೆ. ಅಕ್ಟೋಬರ್ 22 ರಂದು ಶಿಕ್ಷಣ ಮಂತ್ರಿಗಳ ಸಮ್ಮೇಳನದಲ್ಲಿ ಸಭಾತ್ಯಾಗ ನಡೆದಾಗ ಮೂಕರಾಗಿ ನೋಡುತ್ತಿದ್ದ, ನಂತರ ಮಾಡಿದ ತಮ್ಮ ಉದ್ಘಾಟನಾ ಭಾಷಣದಲ್ಲಿ ಈ ಬಗ್ಗೆ ಪ್ರಸ್ತಾಪವನ್ನೂ ಮಾಡದ 'ಧಾರ್ಮಿಕ ಅಸಹಿಷ್ಣುತೆ, ಮತಾಂಧತೆಯಿಂದ ದೇಶದ ಐಕ್ಯತೆ ಸಾಧ್ಯವಿಲ್ಲ' ಎಂಬ ತಮ್ಮ ವಿರೋಧಿಗಳ ಅಭಿಪ್ರಾಯವನ್ನು ಒಪ್ಪಿಕೊಂಡ ಪ್ರಧಾನಮಂತ್ರಿಗಳು ಸಾರ್ವಜನಿಕ ಚುನಾವಣಾ ಭಾಷಣದಲ್ಲಿ ಮಾತ್ರ ಈ ಸಭಾತ್ಯಾಗವನ್ನು ಖಂಡಿಸಿದರು - ತಮ್ಮ ಸರಕಾರದ ವಿಫಲತೆಗಳನ್ನು ಮುಚ್ಚಿಕೊಳ್ಳಲು ಎಂಬುದು ಸ್ಪಷ್ಟ. ಆದರೆ ಇಲ್ಲೂ ಆ ಪಕ್ಷಕ್ಕೆ ಸಮಸ್ಯೆಗಳಿವೆ, ಏಕೆಂದರೆ ಸಭಾತ್ಯಾಗದಲ್ಲಿ ಅದರ ಮಿತ್ರ ಪಕ್ಷಗಳಾದ ಅಕಾಲಿದಳ ಮತ್ತು ತೆಲುಗುದೇಶಂ ಕೂಡಾ ಭಾಗವಹಿಸಿದ್ದವು. ದಿಲ್ಲಿಯಲ್ಲಿ ಅಕಾಲಿದಳದ ಪ್ರಭಾವ ಸಾಕಷ್ಟಿದೆ.

ದೊಡ್ಡ ಉದ್ಯಮಿಗಳ ಶೇರು ಬೆಲೆಗಳನ್ನು ರಕ್ಷಿಸಲು ಧಾವಿಸಿದ ಸರಕಾರ ಜನರು ತತ್ತರಿಸುವಂತೆ ಮಾಡಿದ ಅಗಾಧ ಬೆಲೆಯೇರಿಕೆಯನ್ನು ತಡೆಯಲು ಏನೂ ಕ್ರಮ ಪ್ರಕಟಿಸಿಲ್ಲ. ಮಾರ್ಚ್ ವೇಳೆಗೆ ಇಳಿಯುತ್ತದೆ ಎಂದಷ್ಟೇ ಹೇಳುತ್ತಿದ್ದಾರೆ. ಈ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಎಷ್ಟೇ ಪ್ರಯತ್ನ ಪಟ್ಟರೂ ಬೆಲೆಯೇರಿಕೆ ಪ್ರಮುಖ ಚುನಾವಣಾ ವಿಷಯವಾಗದಂತೆ ತಡೆಯಲು ಅವರಿಗಾಗುತ್ತಿಲ್ಲ ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ:

ಪ್ರಧಾನ ಮಂತ್ರಿ/ಮುಖ್ಯಮಂತ್ರಿಗಳನ್ನು ಚುನಾವಣೆಯ ಮೊದಲೇ ಹೆಸರಿಸಬಲ್ಲ 'ಸಾಮರ್ಥ್ಯ' ತಮ್ಮ ವಿಶೇಷತೆ ಎಂದು ಬೆನ್ನು ತಟ್ಟಿಕೊಳ್ಳುವ ಪಕ್ಷಕ್ಕೆ ಈ ಬಾರಿ ಮಧ್ಯಪ್ರದೇಶದಲ್ಲಿ ಅದನ್ನು ಮಾಡಲಾಗುತ್ತಿಲ್ಲ. ಆಂತರಿಕ ಕಿತ್ತಾಟಗಳೇ ಇದಕ್ಕೆ ಕಾರಣ.

ದಿಲ್ಲಿಯಲ್ಲೊಂದು ಹೊಲಸು ನಾಟಕ

ನಾಲ್ಕು ವಿಧಾನಸಭೆಗಳಿಗೆ ಚುನಾವಣೆಗಳ ಪ್ರಕಟಣೆಯಾದ ಕೂಡಲೇ ದಿಲ್ಲಿಯಲ್ಲಿ ನಡೆದ ಘಟನೆಗಳು ಬಿಜೆಪಿಯೊಳಗಿನ ನಿಜ ಪರಿಸ್ಥಿತಿಯನ್ನು ದೇಶದ ಮುಂದೆ ಬಟ್ಟಬಯಲು ಮಾಡಿದವು. ತನ್ನ ಬಲವಾದ ಕೋಟೆಯೆನಿಸಿಕೊಂಡ ದಿಲ್ಲಿಯ ಜನರಿಗೂ ತಮ್ಮ ಬಗ್ಗೆ ಭ್ರಮನಿರಸನವಾಗಿದೆಯೆಂದು ಭೀತಿಗೊಂಡ ಬಿಜೆಪಿ ಮುಖಂಡರು ಚುನಾವಣೆಗಳಿಗೆ ಕೆಲವೇ ದಿನಗಳಿವೆ ಎನ್ನುವಾಗ ಅಕ್ಟೋಬರ್ 10 ರಂದು ದಿಲ್ಲಿಯ ಮುಖ್ಯಮಂತ್ರಿ ಸ್ಥಾನದಿಂದ ಸಾಹಿಬ್ ಸಿಂಗ್ ವರ್ಮಾರನ್ನು ಇಳಿಸಿ ಕೇಂದ್ರ ಮಂತ್ರಿ ಸುಷ್ಮಾ ಸ್ವರಾಜ್‌ರನ್ನು ನೇಮಿಸಿದರು. ಆದರೆ ವರ್ಮಾ ಮರುದಿನದವರೆಗೆ ತನ್ನ ರಾಜೀನಾಮೆ ಪತ್ರವನ್ನು ಸಲ್ಲಿಸಲಿಲ್ಲ. ಇದರಿಂದಾಗಿ ಹೊಸ ಮುಖ್ಯಮಂತ್ರಿಗಳ ಪ್ರತಿಜ್ಞಾ ಸ್ವೀಕಾರವೂ ಮುಂದೂಡಲ್ಪಟ್ಟಿತು.

ನಂತರ ವರ್ಮಾರವರ ಬೆಂಬಲಿಗರ ಬಂಡಾಯವನ್ನು ತಡೆಗಟ್ಟಲು ಅವರನ್ನು ಕೇಂದ್ರ ಮಂತ್ರಿಮಂಡಲದಲ್ಲಿ ತೆಗೆದುಕೊಳ್ಳುವುದಾಗಿ ಹೇಳಲಾಯಿತು. ಇದಕ್ಕೆ ಇನ್ನೊಬ್ಬ ಬಿಜೆಪಿ ಮಂತ್ರಿ ಹಾಗೂ ದಿಲ್ಲಿಯ ಮಾಜಿ ಮುಖ್ಯಮಂತ್ರಿ ಖುರಾನಾರಿಂದ ಹಾಗೂ ಬಿಜೆಪಿ ಇತರ ಮಿತ್ರಪಕ್ಷಗಳಿಂದ ವಿರೋಧ ಬಂತು.

ಜನಗಳನ್ನು ಮರುಳು ಮಾಡುವ ಈ ನಾಟಕ ಇಲ್ಲಿಗೇ ನಿಲ್ಲಲಿಲ್ಲ. ಅಕ್ಟೋಬರ್ 20 ರಂದು ಈ ನಾಟಕದ ಎರಡನೇ ಹಂತ ಪ್ರದರ್ಶನಗೊಂಡಿತು. ಪ್ರಧಾನಮಂತ್ರಿಗಳ ಕಚೇರಿಯೂ ಈ ಬಾರಿ ಇದರಲ್ಲಿ ಪಾತ್ರ ವಹಿಸಿತು ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ. ಸಾಹಿಬ್ ಸಿಂಗ್ ವರ್ಮಾರನ್ನು ಕೇಂದ್ರ ಸಚಿವ ಸಂಪುಟದಲ್ಲಿ ಸೇರಲು ಪ್ರಧಾನ ಮಂತ್ರಿಗಳು ಆಹ್ವಾನಿಸಿದ್ದಾರೆ, ಮರುದಿನ ಪ್ರತಿಜ್ಞಾ ಸ್ವೀಕಾರ ನಡೆಯುತ್ತದೆ ಎನ್ನುವ ಹೇಳಿಕೆ ಪ್ರಧಾನ ಮಂತ್ರಿ ಕಛೇರಿಯಿಂದ ಬಂತು. ಬಿಜೆಪಿ ಕಚೇರಿಯೂ ಅದನ್ನು ದೃಢಪಡಿಸಿತು. ಈ 'ರೈತ ಮುಖಂಡ'ನಿಗೆ ಗ್ರಾಮೀಣ ಅಭಿವೃದ್ಧಿ ಹಾಗೂ ಕೃಷಿ ವಿಭಾಗವನ್ನು ಕೊಡಲಾಗುತ್ತದೆ ಎಂದೂ ಹೇಳಲಾಯಿತು.

ಅದೇ ದಿನ ಸಂಜೆ ಸಾಹೀಬ್ ಸಿಂಗ್ ವರ್ಮಾ ಒಂದು ಪತ್ರಿಕಾ ಸಮ್ಮೇಳನ ಕರೆದು ದಿಲ್ಲಿಯಲ್ಲಿ ಪಕ್ಷದ ವಿಜಯದ ನಂತರವೇ ಈ ಆಹ್ವಾನವನ್ನು ಸ್ವೀಕರಿಸುವುದಾಗಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುವುದಾಗಿ ಪ್ರಕಟಿಸಿದರು. ಈ ಪತ್ರಿಕಾ ಸಮ್ಮೇಳನದ ಮೊದಲು ಅಪರಾಹ್ನ 3 ಗಂಟೆಗೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಪ್ರಧಾನಿಗಳಿಗೆ ಇದನ್ನು ಹೇಳಿದಾಗ ಅವರ ಕಣ್ಣಲ್ಲಿ ನೀರು ಬಂತು, ತನ್ನನ್ನು ಬಿಗಿದಪ್ಪಿ ಕೊಂಡು ತನ್ನ 'ಪ್ರಾರ್ಥನೆ'ಯನ್ನು ಸ್ವೀಕರಿಸಿದರು ಎಂದು ವರ್ಮಾ ಪತ್ರಕರ್ತರಿಗೆ ತಿಳಿಸಿದರು. ಅಲ್ಲಿದ್ದ ಹೊಸ ಮುಖ್ಯಮಂತ್ರಿ ಸುಷ್ಮಾ ಸ್ವರಾಜ್ ಹಾಗೂ ಬಿಜೆಪಿ ಅಧ್ಯಕ್ಷ ಕುಶಭಾವು ಠಾಕ್ರೆ ಕಣ್ಣಲ್ಲೂ ನೀರು ಚಿಮ್ಮಿತಂತೆ. ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿದ್ದರೆ ಮತ್ತೆ ಪತ್ರ ಬರೆಯುವ ಅವಶ್ಯಕತೆಯೇನು, ಪತ್ರಕರ್ತರಿಗೆ ಅದನ್ನು ಓದಿ ಹೇಳಲು ಮಾತ್ರವೇ ಅಲ್ಲವೇ ಎಂಬ ಬಗ್ಗೆ ಸಂದೇಹ-ಅಷ್ಟೇ ಅಲ್ಲ, ಮುಖ್ಯಮಂತ್ರಿಗಳ ಸ್ಥಾನದಿಂದ ಇಳಿಸಿದಾಗ ಕೋಪಾವಿಷ್ಟರಾಗಿದ್ದ ವ್ಯಕ್ತಿ ಈಗ ಪಕ್ಷದ ಗೆಲುವಿಗಾಗಿ ಶಿಸ್ತಿನ ಕಾರ್ಯಕರ್ತನಾಗಿ ಕೆಲಸ ಮಾಡುತ್ತೇನೆ ಎಂದು ಸಾರಿದ ಹಿನ್ನೆಲೆಯ ಬಗ್ಗೆ ಎಲ್ಲರೂ ಸಂದೇಹ ಪಡುವಂತಾಗಿದೆ. "ನೀನು ಕೊಟ್ಟ ಹಾಗೆ ಮಾಡು, ನಾನು ಬೇಡವೆನ್ನುವ ಹಾಗೆ ಮಾಡುತ್ತೇನೆ" ಎಂಬ ನಾಟಕವದು ಎಂದು ಅರ್ಥವಾಗದಷ್ಟು ದಿಲ್ಲಿಯ ಮತದಾರರು ತಿಳಿಗೇಡಿಗಳಲ್ಲ ಎಂದು ಬಿಜೆಪಿ ಮುಖಂಡರಿಗೆ ತಿಳಿದಿಲ್ಲವೋ ಏನೋ.

ಉತ್ತರ ಪ್ರದೇಶ ಸರಕಾರಕ್ಕೆ ಸುಪ್ರೀಂ ಕೋರ್ಟ್ ತಾಕೀತು

1982 ರಲ್ಲಿ ಮೇರಠ್‌ನಲ್ಲಿ ನಡೆದ ಕೋಮು ಗಲಭೆಗಳ ಕುರಿತ ಪಾರೀಖ್ ಆಯೋಗದ ವರದಿಯ ಸಾರಾಂಶವನ್ನು ಎರಡು ತಿಂಗಳ ಒಳಗೆ ತನಗೆ ಸಲ್ಲಿಸಬೇಕು ಎಂದು ಸರ್ವೋಚ್ಚ ನ್ಯಾಯಾಲಯ ಉತ್ತರ ಪ್ರದೇಶ ಸರಕಾರಕ್ಕೆ ನಿರ್ದೇಶನ ನೀಡಿದೆ. ಈ ಬಗ್ಗೆ ಕ್ರಮ ಕೈಗೊಂಡ ವರದಿ ಹಾಗೂ ಗೃಹ ಕಾರ್ಯದರ್ಶಿಗಳ ಅಫಿಡವಿಟ್ ಕೂಡ ಸಲ್ಲಿಸಬೇಕು ಎಂದೂ ಅದು ಹೇಳಿದೆ.

ಸೆಪ್ಟಂಬರ್ 6 ಹಾಗೂ ಅಕ್ಟೋಬರ್ 20, 1982 ರಲ್ಲಿ ಮೇರಠ್‌ನಲ್ಲಿ ಸಂಭವಿಸಿದ ಕೋಮು ಗಲಭೆಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ಸಾವು-ನೋವು, ನಷ್ಟಗಳು ಸಂಭವಿಸಿದ್ದವು. ಈ ಬಗ್ಗೆ ಆಗಿನ ರಾಜ್ಯ ಸರಕಾರ ಅಲಹಾಬಾದ್ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಸಿ.ಡಿ.ಪಾರೇಖ್ ರವರ ನೇತೃತ್ವದಲ್ಲಿ ಒಂದು ತನಿಖಾ ಆಯೋಗವನ್ನು ನೇಮಿಸಿತ್ತು. ಅದು ನವಂಬರ್ 15, 1984 ರಲ್ಲಿ ತನ್ನ ವರದಿಯನ್ನು ಮಂಡಿಸಿತು. ಈ ಗಲಭೆ ಗಳ ಬಗ್ಗೆ ಮೇರಠ್‌ನ ನಿವಾಸಿ ಫಜಲುರ್ ರಹಮಾನ್ ಮತ್ತಿತರರು ರಿಟ್ ಅರ್ಜಿ ಸಲ್ಲಿಸಿದ್ದರು. ಆದರೆ 14 ವರ್ಷಗಳ ನಂತರವೂ ಈ ಕೇಸು ಇನ್ನೂ ಪ್ರಾಥಮಿಕ ಹಂತದಲ್ಲೇ ಇದೆ ಎಂದು ನ್ಯಾಯಾಲಯ ಗಮನಿಸಿತು.

ಜನವರಿ 24, 1996 ರಂದು ವಿಚಾರಣೆಯ ಸಮಯದಲ್ಲಿ ಮೇರಠ್‌ನ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರು ಆಯೋಗದ ವರದಿಯ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎಂದರು. ಈ ಕ್ರಮಗಳ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಬೇಕು ಎಂದು ಮಾರ್ಚ್ 12, 1996 ರಂದು ಉತ್ತರ ಪ್ರದೇಶ ರಾಜ್ಯ ಸರ್ಕಾರಕ್ಕೆ ಹೇಳಲಾಗಿತ್ತು. ಆದರೆ ಜುಲೈ 11, 1996 ರವರೆಗೂ ಈ ಆದೇಶವನ್ನು ಪಾಲಿಸದಿದ್ದಾಗ ಜಿಲ್ಲಾ ಮ್ಯಾಜಿಸ್ಟ್ರೇಟ್ ಇನ್ನೊಂದು ಅಫಿಡವಿಟ್ ಸಲ್ಲಿಸಿ ಆಯೋಗದ ವರದಿಯ ಮೇಲೆ ಕೈಗೊಂಡ ಕ್ರಮಗಳ ವಿವರಗಳನ್ನು ಪ್ರತ್ಯೇಕವಾಗಿ ಸಲ್ಲಿಸಲಾಗುವುದು ಎಂದರು. ಆದರೆ ಅದನ್ನು ಸಲ್ಲಿಸಲೇ ಇಲ್ಲ. ಇದರಿಂದಾಗಿ ವಿಚಾರಣೆ ಮತ್ತೆ-ಮತ್ತೆ ಮುಂದೂಡಲ್ಪಟ್ಟು ಫೆಬ್ರವರಿ 12, 1998 ರಂದು ನ್ಯಾಯಾಲಯ ಮತ್ತೊಮ್ಮೆ ಈ ಬಗ್ಗೆ ಆದೇಶ ನೀಡಿತು. ಜುಲೈ 21, 1998 ರಂದು ಮತ್ತೆ ಅದನ್ನು ನೆನಪಿಸಿತು. ಆ ನಂತರ ಸೆಪ್ಟೆಂಬರ್ 19, 1998 ರಂದು ಸರಕಾರದ ಜಂಟಿ ಕಾರ್ಯದರ್ಶಿ ಹಾಗೂ ಅಡಿಶನಲ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಎರಡು ಅಫಿಡವಿಟ್‌ಗಳನ್ನು ಸಲ್ಲಿಸಿ ತನಿಖಾ ಆಯೋಗದ ವರದಿ ಇನ್ನೂ ರಾಜ್ಯ ಸಂಪುಟದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದರು.

"ರಾಜ್ಯ ಸರಕಾರ ಈ ವಿಷಯವನ್ನು ಇಷ್ಟೊಂದು ನಿರ್ಲಕ್ಷ್ಯದಿಂದ ಏಕೆ ನೋಡುತ್ತಿದೆ ಎಂದು ನಮಗೆ ಅರ್ಥವಾಗುತ್ತಿಲ್ಲ, ಸರಿಯಾದ ಸ್ಥಿತಿಯನ್ನು ನಮಗೆ ಇದುವರೆಗೆ ಏಕೆ ತಿಳಿಸಲಿಲ್ಲ" ಎಂದು ಪ್ರಶ್ನಿಸಿದ ನ್ಯಾಯಾಲಯ ಆಯೋಗದ ವರದಿ ಹತ್ತು ವರ್ಷಗಳಿಂದ ಧೂಳು ತಿನ್ನುತ್ತಿರುವುದರ ಬಗ್ಗೆ ಖೇದ ವ್ಯಕ್ತಪಡಿಸುತ್ತಾ ಈ ವಿಷಯದಲ್ಲಿ ಎರಡು ತಿಂಗಳ ಒಳಗೆ ಸೂಕ್ತ ಕ್ರಮ ವಹಿಸದಿದ್ದರೆ ನ್ಯಾಯಾಲಯದ ಪ್ರತಿಕೂಲ ಟೀಕೆಗೆ ಒಳಗಾಗಬೇಕಾದೀತಷ್ಟೆ ಅಲ್ಲ, ಗೃಹ ಕಾರ್ಯದರ್ಶಿಗಳು ವೈಯುಕ್ತಿಕವಾಗಿ ನ್ಯಾಯಾಲಯದಲ್ಲಿ ಹಾಜರಾಗಿ ಕಾರಣಗಳನ್ನು ವಿವರಿಸಬೇಕಾದೀತು ಎಂದು ಎಚ್ಚರಿಸಿದೆ.

ವಾಜಪೇಯಿ ಸರಕಾರದ ಬಗ್ಗೆ ಈಗ ಸಿಕ್ಕಿಂ ಮುಖ್ಯಮಂತ್ರಿಗಳಿಗೂ ಮುನಿಸು

ಪ್ರಧಾನ ಮಂತ್ರಿ ವಾಜಪೇಯಿಯವರು ತಮ್ಮ ರಾಜ್ಯದ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಸಿಕ್ಕಿಂ ಮುಖ್ಯಮಂತ್ರಿ ಪವನ್ ಕುಮಾರ್ ಚಾಮ್ಲಿಂಗ್ ದೂರಿದ್ದಾರೆ. ತಾವು ಬಿಜೆಪಿ ನೇತೃತ್ವದ ಸರಕಾರಕ್ಕೆ ಬೇಷರತ್ ಬೆಂಬಲ ನೀಡುತ್ತಿದ್ದರೂ ತಮ್ಮ ಯಾವ ನಿರೀಕ್ಷೆಗಳಿಗೂ ಸ್ಪಂದಿಸುತ್ತಿಲ್ಲ ಎಂಬುದು ಈಗ ಅವರ ಅಳಲು. ತಮ್ಮ ಸಿಕ್ಕಿಂ ಡೆಮಾಕ್ರೆಟಿಕ್ ಫ್ರಂಟ್‌ನ ಒಬ್ಬ ಸಂಸತ್ ಸದಸ್ಯರನ್ನು ಕೇಂದ್ರ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು, ಆಳುವ ಕೂಟದ ಸಂಯೋಜನಾ ಸಮಿತಿ ಸಭೆಗಳಿಗೆ ತಮ್ಮ ಪಕ್ಷವನ್ನ ಕರೆಯಬೇಕು ಎಂಬುದು ಅವರ ಬೇಡಿಕೆಗಳು. ಈಶಾನ್ಯ ಭಾರತದ ಬೇರೆ ರಾಜ್ಯಗಳಿಗೆ ಪ್ರಾತಿನಿಧ್ಯವಿದೆ, ತಮ್ಮ ರಾಜ್ಯಕ್ಕೆ ಮಾತ್ರವೇ ಇಲ್ಲ, ಇದು ಇಂದು ಸಿಕ್ಕಿಂನ ಪ್ರಮುಖ ಸಮಸ್ಯೆ ಎಂದು ಅವರ ಅಭಿಪ್ರಾಯ. ಬಿಜೆಪಿ ನೇತೃತ್ವದ ಸರಕಾರದಿಂದ ಸಕಾರಾತ್ಮಕ ಸ್ಪಂದನ ಪಡೆಯುವ ನಿರೀಕ್ಷೆಗಳನ್ನೆಲ್ಲಾ ತಾನೀಗ ಬಿಟ್ಟಿದ್ದೇನೆ, ಆದರೂ ತಾನು ಒತ್ತಡ ಹಾಕುವುದಿಲ್ಲ ಎಂದು ಅವರು ಕಲ್ಕತ್ತೆಯಲ್ಲಿ ಹೇಳಿದ್ದಾರೆ. ○

ಕರ್ನಾಟಕ ಪ್ರಾಂತ ರೈತ ಸಂಘ ಘಟಕ ಸಮ್ಮೇಳನ

ಹಗರಿ ಬೊಮ್ಮನ ಹಳ್ಳಿ ತಾಲೂಕು. ಅಡವಿ ಆನಂದ ದೇವನಹಳ್ಳಿ ಗ್ರಾಮದಲ್ಲಿ ಪ್ರಾಂತ ರೈತ ಸಂಘದ ಘಟಕ ಸಮ್ಮೇಳನವು ಅಕ್ಟೋಬರ್ 10 ರಂದು ಜರುಗಿತು.

ಸುರಿವ ಮಳೆಯಲ್ಲಿಯೇ ಶುರುವಾದ ಈ ಸಮ್ಮೇಳನವು ಕ್ರಾಂತಿ ಗೀತೆಯನ್ನು ಹಾಡಿದ ನಂತರ ಸ್ವಾಗತವನ್ನು ಎನ್. ರಾಮಣ್ಣ ಮಾಡಿದರು. ಧ್ವಜಾರೋಹಣವನ್ನು ಎ. ಅಡಿವಪ್ಪ ಮಾಡಿದರು. ನೂರಾರು ರೈತರು ಭಾಗವಹಿಸಿದ್ದರು.

ಕೆಂಬಾವುಟದ ಈ ಸಂಘಟನೆಯು ನಮ್ಮ ತಾಲೂಕಿನಲ್ಲಿ 15 ವರ್ಷದಿಂದ ರೈತರ ಕೃಷಿ ಕೂಲಿಕಾರರನ್ನು ಸಂಘಟಿಸಿ ಅವರ ಬೇಡಿಕೆಗಳಿಗೆ ಸ್ಪಂದಿಸಿ ನಿರಂತರ ಹೋರಾಟ ಮಾಡುತ್ತ ಬಂದಿದೆ. ಪ್ರಮುಖವಾಗಿ ತಾಲೂಕಿನ ಜೀವದ ಜೀವಾಳವಾಗಿರುವ ಮಾಲವಿ (ಹ.ಬೊ.ಹಳ್ಳಿ) ಜಲಾಶಯಕ್ಕೆ ಭದ್ರಾ ಮೇಲ್ದಂಡೆಯಿಂದ ನೀರು ಬಂದರೆ ಶಾಶ್ವತವಾಗಿ ನೀರು ಸಿಕ್ಕು ಸಂಪೂರ್ಣವಾಗಿ ನೀರಾವರಿಯಾಗಿ ರೈತರಿಗೆ ಅನುಕೂಲವಾಗಿ ಕೃಷಿ ಕೂಲಿಕಾರರಿಗೆ ಕೂಲಿ ಕೆಲಸ ಸಿಗುತ್ತದೆ. ಇದನ್ನು ಅರಿತ ಕೆಂಬಾವುಟದ ಸಂಘಟನೆ 15 ಹಳ್ಳಿಗಳಿಗೆ ಒಂದು ವಾರಗಳ ಕಾಲ ಪಾದಯಾತ್ರೆ ನಡೆಸಿ ಸುಮಾರು ಸಾವಿರಾರು ರೈತರ, ಮಹಿಳೆಯರ ಸಹಿಸಂಗ್ರಹ ಮಾಡಿಸಿ ಕೇಂದ್ರ ಸರಕಾರಕ್ಕೆ ಒತ್ತಾಯಿಸಿತು.



ಅಂತಹ ಅಭಿವೃದ್ಧಿ ಕೆಲಸಗಳನ್ನು ಮಾಡದೆ ಕೇಂದ್ರ ಬಿಜೆಪಿ ಸರಕಾರ ಹೊಸ ಆರ್ಥಿಕ ನೀತಿ ಹಾಗೂ ಹೊಸ ಕೃಷಿ ನೀತಿಯಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಕಂಡಿದ್ದೇವೆ. ಇಂತಹ ನೀತಿಯನ್ನು ತಡೆಯಲು ಸಂಘ ಕಟ್ಟಿ ಹೋರಾಟ ಮಾಡಬೇಕಿದೆ ಎಂದು ತಾಲೂಕು ಅಧ್ಯಕ್ಷ ಎಸ್. ಜಗನ್ನಾಥ ಮಾತನಾಡಿದರು. ಎಸ್.ಎಫ್.ಐ. ಮುಖಂಡ ರಂಗಪ್ಪ ದಾಸರ ಮಾತನಾಡಿದರು.

ದಿನಾಲು ಬೀಳುವ ಬಾರಿ ಮಳೆಯಿಂದ ಮನೆಗಳು ಬಿದ್ದು ಬೆಳೆಗಳು ಕೈ ಸಿಗದೆ ನಾಶವಾಗಿವೆ. ಕೂಡಲೇ ಪರಿಹಾರ ಸಿಗುವಂತೆ ಆಗಬೇಕು, ರಸ್ತೆ ರಿಪೇರಿ ಆಗಬೇಕು, ಸಂಪೂರ್ಣವಾಗಿ ಬಿದ್ದ ಬಡ ಕುಟುಂಬಗಳ ಮನೆಗಳನ್ನು ಅಧ್ಯಯನ ಮಾಡಿ ಬೇರೆ ಮನೆ ವ್ಯವಸ್ಥೆ ಮಾಡಬೇಕು (ನಿವೇಶನ) ಎಂದು ಸಮ್ಮೇಳನವು ಒತ್ತಾಯಿಸಿತು.

ಹೊಸ ಸಮಿತಿ

ಅಧ್ಯಕ್ಷರು-ಯು. ಸಕ್ರಪ್ಪ, ಉಪಾಧ್ಯಕ್ಷರು-ಯು.ಬಸವರಾಜ, ಹೆಚ್. ಜಗದೀಶ ಪ್ರ.ಕಾರ್ಯದರ್ಶಿ- ಎ. ಅಡಿವಪ್ಪ ಕಾರ್ಯದರ್ಶಿ ಎನ್. ರಾಮಣ್ಣ, ಮಲ್ಲೇಶಿ ಖಜಾಂಚಿ- ಯು.ರಮೇಶ್

ಉಳಿದ 10 ಜನರು ಸಮಿತಿ ಸದಸ್ಯರಾಗಿ ಆಯ್ಕೆಯಾದರು ಯು.ಸಕ್ರಪ್ಪನವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ದಶರಥ ದೇಬ್ ನಿಧನಕ್ಕೆ ಸಂತಾಪ

ರಾಮದುರ್ಗ: ತ್ರಿಪುರಾ ರಾಜ್ಯದ ಮಾಜಿ ಮುಖ್ಯಮಂತ್ರಿ ಕಮ್ಯುನಿಸ್ಟ್ ಪಕ್ಷದ ಮಹಾನ್ ಮುಖಂಡರಾದ ದಶರಥ ದೇಬ್‌ರವರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಳಗಾವಿ ಜಿಲ್ಲಾ ಸಮಿತಿ ತೀವ್ರ ಶೋಕ ವ್ಯಕ್ತಪಡಿಸಿದೆ.

1916 ರಲ್ಲಿ ಪಶ್ಚಿಮ ತ್ರೀಪುರಾ ಜಿಲ್ಲೆಯ ಅಂಪೂರಾ ಎಂಬ ಹಳ್ಳಿಯಲ್ಲಿ ಬುಡಕಟ್ಟು ಜನಾಂಗದ ಬಡ ಕುಟುಂಬದಲ್ಲಿ ಜನಿಸಿದ ದಶರಥ ದೇಬ್ ತಮ್ಮ ಜೀವನವನ್ನು ಆರಂಭದಿಂದಲೂ ಜನ ಸೇವೆಗಾಗಿ ಮೀಸಲಿಟ್ಟವರು. ಇಂತಹ ಒಬ್ಬ ಮಹಾನ್ ಮುಖಂಡನ ನಿಧನದಿಂದ ಎಡ ಚಳುವಳಿಗೆ ತುಂಬಲಾರದ ನಷ್ಟವಾಗಿದೆ ಎಂದು ಸಿಪಿಐ(ಎಂ)ನ ಬೆಳಗಾವಿ ಜಿಲ್ಲಾ ಸಮಿತಿ ಸಂತಾಪ ವ್ಯಕ್ತಪಡಿಸಿದೆ.

ಕಾಮ್ರೇಡ್ ಚಿನ್ನಪ್ಪನವರಿಗೆ ಶ್ರದ್ಧಾಂಜಲಿ

ಬೆಂಗಳೂರು: ಸಿಪಿಐ(ಎಂ) ಪಕ್ಷದ ಶ್ರೀರಾಮಪುರ ಪ್ರದೇಶದ ಜನಪ್ರಿಯ ಮುಖಂಡರಾದ ಕಾಮ್ರೇಡ್ ಚಿನ್ನಪ್ಪ ಅಕ್ಟೋಬರ್ 15 ರಂದು ಹೃದಾಯಾಘಾತದಿಂದ ನಿಧನರಾದರು.

ಶ್ರೀರಾಮಚಂದ್ರ ಪುರದ ರಾಮಚಂದ್ರ ಪುರದಲ್ಲಿ ಚಿನ್ನಪ್ಪನವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಭೆಯಲ್ಲಿ ಮಾತನಾಡಿದ ಗಾಂಧಿನಗರ ಕ್ಷೇತ್ರದ ಶಾಸಕರಾದ ಬಿ.ಮುನಿಯಪ್ಪ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪಿ.ಜಗನ್ನಾಥ್, ಪಿ.ಕೆ.ಸುಬ್ರಮಣಿ, ಸಿ.ಪಿ.ರಾಜಗೋಪಾಲ, ಚಂದ್ರು, ನಗರಪಾಲಿಕೆ ಸದಸ್ಯ ಡಿ.ಜೆ.ಸಿ. ಚಕ್ರವರ್ತಿ, ಡಿಎಂಕೆಯ ಕೆ.ಎಸ್. ಸುಂದರೇಶ್, ಚಿನ್ನಪ್ಪನವರು ಸಿದ್ಧಾಂತದಲ್ಲಿ ನಂಬಿಕೆ ಇಟ್ಟು ಕೊನೆಯವರೆಗೂ ಜನಪರ ಚಳುವಳಿಗಾಗಿ ಹಾಗೂ ಪಕ್ಷಕ್ಕಾಗಿ ದುಡಿದವರು. ಅವರು ನಂಬಿದ ಸಿದ್ಧಾಂತ ಹಾಗೂ ಸಮಾಜಕ್ಕಾಗಿ ನಾವೆಲ್ಲಾ ದುಡಿಯೋಣವೆಂದರು.

ಸಭೆಯ ಅಧ್ಯಕ್ಷತೆಯನ್ನು ಜಿ.ದೇವರಾಜ್ ವಹಿಸಿದ್ದರು. ಗೋಪಾಲ ಕೃಷ್ಣ ಸ್ವಾಗತಿಸಿ, ವೀರಮಣಿ ವಂದನೆ ಸಲ್ಲಿಸಿದರು.

ಮಾಜಿ ಚಿಲಿ ಸರ್ವಾಧಿಕಾರಿ ಪಿನೋಶೇ ಬಂಧನ - ಬ್ರಿಟನ್‌ನಲ್ಲಿ


ಚಿಲಿಯ ಕುಖ್ಯಾತ ಮಾಜಿ ಸರ್ವಾಧಿಕಾರಿ ಜನರಲ್ ಪಿನೋಶೆಯವರನ್ನು ಲಂಡನ್‌ನಲ್ಲಿ ಬ್ರಿಟಿಶ್ ಪೋಲಿಸರು ಬಂಧಿಸಿದ್ದಾರೆ. ಅವರು ಸ್ಪೈನ್‌ನ ಕೋರ್ಟ್ ಒಂದರ ಕೋರಿಕೆ ಮೇಲೆ ಈ ಕ್ರಮ ಕೈಗೊಂಡಿದ್ದಾರೆ. ಜನರಲ್ ಪಿನೋಶೆಯ ಸರ್ವಾಧಿಕಾರದ ಕಾಲದಲ್ಲಿ ಹಲವಾರು ಸ್ಪಾನಿಷ್ ನಾಗರಿಕರು ಚಿಲಿಯಲ್ಲಿ ಕೊಲೆಯಾಗಿದ್ದಾರೆ ಅಥವಾ ಕಾಣೆಯಾಗಿದ್ದಾರೆ ಎಂಬ ಆಪಾದನೆ ಮೇಲೆ ಸ್ಪಾನಿಷ್ ಕೋರ್ಟು ತನಿಖೆ ನಡೆಸುತ್ತಿದೆ. ಈ ಸಂಬಂಧದಲ್ಲಿ ಜನರಲ್ ಪಿನೋಶೆ ವಿರುದ್ಧ ಸಾಕಷ್ಟು ಪುರಾವೆ ಸಿಕ್ಕಿದ್ದು ಈ ಕ್ರಮ ಕೈಗೊಳ್ಳಲಾಗಿದೆ. ಯುರೋಪಿಯನ್ ಒಕ್ಕೂಟದ ದೇಶಗಳ ನಡುವೆ ಈ ರೀತಿಯ ಸಹಕಾರದ ಬಗ್ಗೆ ಒಪ್ಪಂದವಿದೆ.

ಜನರಲ್ ಪಿನೋಶೆ ಸಿಐಎಯ ಕುಮ್ಮಕ್ಕಿನಿಂದ 1973 ರ ಸೆಪ್ಟೆಂಬರ್‌ನಲ್ಲಿ ಅಧ್ಯಕ್ಷ ಸಾಲ್ವಡೋರ್ ಅಲೆಂದೆಯವರ ಜನಪ್ರಿಯ ಎಡಪಂಥೀಯ ಸರ್ಕಾರವನ್ನು ಮಿಲಿಟರಿ ಕ್ಷಿಪ್ರ ಕ್ರಾಂತಿಯಲ್ಲಿ ಉರುಳಿಸಿ, ಅಧಿಕಾರಕ್ಕೆ ಬಂದಿದ್ದ. ಈ ಕ್ಷಿಪ್ರಕ್ರಾಂತಿಯಲ್ಲಿ ಅಧ್ಯಕ್ಷ ಅಲೆಂದೆಯವರನ್ನು ಕೊಲೆ ಮಾಡಲಾಗಿತ್ತು. ಚಿಲಿಯಲ್ಲಿ ರಕ್ತದ ಹೊಳೆ ಹರಿದಿತ್ತು. ಅಧ್ಯಕ್ಷ ಅಲೆಂದೆಯವರ ಸೋಶಿಯಲ್ ಡೆಮಾಕ್ರೆಟಿಕ್ ಪಕ್ಷ, ಕಮ್ಯುನಿಸ್ಟ್ ಪಕ್ಷ ಹಾಗೂ ಇತರ ಹಲವಾರು ಪ್ರಜಾಸತ್ತಾತ್ಮಕ ಪಕ್ಷಗಳ ಸಾವಿರಾರು ಕಾರ್ಯಕರ್ತರ ಕೊಲೆ ಮಾಡಲಾಯಿತು. ಇನ್ನೂ ಸಾವಿರಾರು ಕಾರ್ಯಕರ್ತರನ್ನು ಅಪಹರಿಸಲಾಯಿತು. ಇತ್ತೀಚಿನವರೆಗೆ ಹಲವಾರು ಕಾರ್ಯಕರ್ತರು ಜನರಲ್ ಪಿನೋಶೆಯ ಫ್ಯಾಸಿಸ್ಟ್ ದಬ್ಬಾಳಿಕೆಯಲ್ಲಿ ತತ್ತರಿಸುತ್ತಿದ್ದರು. ಜೈಲಿನಲ್ಲಿ ಕೊಳೆಯುತ್ತಿದ್ದರು. ಚಿಲಿಯನ್ನರಲ್ಲದೆ, ಎಡಪಂಥೀಯ ಒಲವಿನ ಮಾನವ ಹಕ್ಕು ಸಂಘಟನೆಗಳಲ್ಲಿ ಕೆಲಸ ಮಾಡುವ ಹಲವಾರು ವಿದೇಶಿ (ಮುಖ್ಯವಾಗಿ ಬ್ರಿಟಿಶ್, ಸ್ಪಾನಿಷ್) ನಾಗರಿಕರನ್ನು ಪಿನೋಶೆ ಸರ್ವಾಧಿಕಾರಿ ಸರ್ಕಾರ ಮುಗಿಸಿತ್ತು. ಪಿನೋಶೆ ಅಧಿಕಾರಕ್ಕೆ ಬರುತ್ತಿದ್ದಂತೆ ಹಲವಾರು ಚಿಲಿಯುವರು, ವಿದೇಶಿ ನಾಗರಿಕರು ವಿದೇಶಗಳಿಗೆ ವಲಸೆ ಹೋಗಿದ್ದರು. ಇವರಲ್ಲಿ ಹಲವರು ಪಿನೋಶೆಯ ಫ್ಯಾಸಿಸ್ಟ್ ದಮನದ ಪ್ರತ್ಯಕ್ಷ ಸಾಕ್ಷಿಗಳು. ಇಂತಹ ಒಂದು ಗುಂಪು ಸ್ಪಾನಿಷ್ ಕೋರ್ಟ್‌ನಲ್ಲಿ ಪಿನೋಶೆ ವಿರುದ್ಧ ಮೊಕದ್ದಮೆ ಹೂಡಿದೆ.

ಜನರಲ್ ಪಿನೋಶೆಯ ಬಂಧನ ಚಿಲಿ, ಬ್ರಿಟನ್, ಸ್ಪೈನ್ ಈ ಮೂರು ದೇಶಗಳಲ್ಲೂ ವಿವಾದಾಸ್ಪದವಾಗಿದೆ. ಪಿನೋಶೆ-ಪರ ಬಲಪಂಥೀಯ ಶಕ್ತಿಗಳು ಸ್ಪಾನಿಷ್ ಕೋರ್ಟುಗಳಿಗೆ ಚಿಲಿಯ ನಾಗರಿಕನ ಮೇಲೆ ಮೊಕದ್ದಮೆ ಹೂಡಲು ಹಕ್ಕಿಲ್ಲ - ಇದು ಚಿಲಿಯ ಸಾರ್ವಭೌಮತ್ವದ ಉಲ್ಲಂಘನೆ ಎಂದು ವಾದಿಸುತ್ತಿವೆ. ಚಿಲಿಯಲ್ಲಿ ಪಿನೋಶೆ-ಪರ ಬ್ರಿಟಿಶ್ ಕ್ರಮದ ವಿರುದ್ಧ ರ್‍ಯಾಲಿಗಳು ನಡೆದಿವೆ. ಆದರೆ ಈ ಮೂರು ದೇಶಗಳ ಪ್ರಜಾಸತ್ತಾತ್ಮಕ ಪ್ರಗತಿಪರ ಶಕ್ತಿಗಳು ಪಿನೋಶೆಯನ್ನು ಬಂಧಿಸಿದ್ದು ಸರಿ, ಪಿನೋಶೆಗೆ ಶಿಕ್ಷೆಯಾಗಬೇಕು ಎಂದು ಒತ್ತಾಯಿಸುತ್ತಿವೆ. ಚಿಲಿಯಲ್ಲಿ ಪಿನೋಶೆ-ಬಂಧನದ ಪರವಾಗಿಯೂ ಭಾರಿ ರ್‍ಯಾಲಿಗಳು ಆಗಿವೆ. ಬ್ರಿಟನ್‌ನಲ್ಲಿ ಜನರಲ್ ಪಿನೋಶೆಯನ್ನು ಬಂಧನದಲ್ಲಿಟ್ಟಿರುವ ದುಬಾರಿ ಖಾಸಗಿ ಆಸ್ಪತ್ರೆಯ ಹೊರಗೆ ನೂರಾರು ಚಿಲಿಯನ್ ವಲಸೆಗಾರರು, ಪ್ರಗತಿಪರ ವ್ಯಕ್ತಿಗಳು ಧರಣಿ ಹೂಡಿದ್ದಾರೆ. ಪಿನೋಶೆ ಬಿಡುಗಡೆಯನ್ನು ಪ್ರತಿರೋಧಿಸಲು ತಯಾರಾಗಿ ನಿಂತಿದ್ದಾರೆ. ಸ್ಪಾನಿಷ್ ನಾಗರಿಕರ ಮೇಲೆ ಪಿನೋಶೆ ಸರ್ಕಾರ ಮಾಡಿದ ಅತ್ಯಾಚಾರಗಳ ಬಗ್ಗೆ ತನಿಖೆ ನಡೆಸಲು ಹಕ್ಕಿದೆ, ಈ ಕೆಲವು ಅತ್ಯಾಚಾರಗಳು ಚಿಲಿಯಲ್ಲಿ ಮಾತ್ರವಲ್ಲ, ಸ್ಪೈನ್‌ನಲ್ಲೂ ನಡೆದಿವೆ, ಅಲ್ಲದೆ ಪಿನೋಶೆ ಸರ್ಕಾರ ಅಲೆಂದೆ ಸರ್ಕಾರದ ಹಲವಾರು ಸದಸ್ಯರು, ಬೆಂಬಲಿಗರನ್ನು ಬ್ರಿಟನ್, ಸ್ಪೈನ್‌ಗಳಲ್ಲಿ ಅಂತರ್‍ರಾಷ್ಟ್ರೀಯ ಕಾನೂನು ಮತ್ತು ಈ ದೇಶಗಳ ಸಾರ್ವಭೌಮತ್ವ ಉಲ್ಲಂಘಿಸಿ, ಕೊಲೆ ಮಾಡಿತ್ತು, ಅಪಹರಣ ಮಾಡಿತ್ತು ಎಂದು ಪಿನೋಶೆ-ವಿರೋಧಿಗಳು ವಾದಿಸುತ್ತಾರೆ.

ಜನರಲ್ ಪಿನೋಶೆ ಈಗ ಸರ್ಕಾರದಿಂದ ನಿವೃತ್ತರಾಗಿದ್ದು, ಚಿಲಿಯನ್ನು ಕ್ರಿಶ್ಚಿಯನ್ ಡೆಮಾಕ್ರೆಟ್ ಮತ್ತು ಸೋಶಿಯಲ್ ಡೆಮಾಕ್ರೆಟ್ ಪಕ್ಷಗಳ ಒಕ್ಕೂಟ ಆಳುತ್ತಿದೆ. ಚಿಲಿಯನ್ ಸರ್ಕಾರ ಪಿನೋಶೆ-ಪರ ಒಟ್ಟಾರೆ ನೀತಿಯನ್ನು ಅಂಗೀಕರಿಸಿದ್ದರೂ, ಆ ಬಗ್ಗೆ ಸರ್ಕಾರದ ಒಳಗೆ ಭಾರಿ ಮತಭೇದವಿದೆ. ಕ್ರಿಶ್ಚಿಯನ್ ಡೆಮಾಕ್ರಾಟರು ಪಿನೋಶೆ-ಪರ ನೀತಿ ತಳೆದಿದ್ದರೆ, ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷ ಪಿನೋಶೆ-ವಿರೋಧಿ ನೀತಿ ತಳೆದಿದೆ. ಜನರಲ್ ಪಿನೋಶೆ ತನ್ನ ಅಧಿಕಾರ ಬಿಟ್ಟುಕೊಟ್ಟಾಗ, ಅವರ ಸರ್ಕಾರದ ವಿರುದ್ಧ ಕ್ರಿಮಿನಲ್ ತನಿಖೆ ನಡೆಸದಿರುವ ಬಗ್ಗೆ, ಪಿನೋಶೆಗೆ ಕ್ಷಮೆ ನೀಡುವ ಶರತ್ತಿಗೆ ಈ ಪಕ್ಷಗಳು ಒಪ್ಪಿದ್ದವು. ಅಲ್ಲದೆ ಅವರನ್ನು ಸೆನೆಟರ್ ಮಾಡುವ ಮೂಲಕ, ಚಿಲಿಯ ಸಂವಿಧಾನದ ಪ್ರಕಾರ ಕಾನೂನು ಕ್ರಮದಿಂದ ರಿಯಾಯಿತಿ ಇದೆ. ಇದನ್ನು ಪಿನೋಶೆ ಫ್ಯಾಸಿಸ್ಟ್ ದಬ್ಬಾಳಿಕೆಗೆ ಒಳಗಾದ ಕಮ್ಯುನಿಸ್ಟ್ ಪಕ್ಷ ಹಾಗೂ ಇತರ ಪ್ರಗತಿಪರ ಶಕ್ತಿಗಳು ಬಲವಾಗಿ ವಿರೋಧಿಸಿದ್ದವು. ಚಿಲಿಯ ಕಮ್ಯುನಿಸ್ಟ್ ಪಕ್ಷ ಪಿನೋಶೆ ಬಂಧನವನ್ನು ಬೆಂಬಲಿಸಿ ಹೇಳಿಕೆ ನೀಡಿದೆ. ಪಿನೋಶೆಯ ಫ್ಯಾಸಿಸ್ಟ್ ಕೃತ್ಯಗಳಿಗೆ ವಿಚಾರಣೆ, ಶಿಕ್ಷೆ ಆಗಬೇಕು ಎಂಬ ಪಕ್ಷದ ನೀತಿಯನ್ನು ಪುನರುಚ್ಚರಿಸಿದೆ. ಕಮ್ಯುನಿಸ್ಟ್ ಪಕ್ಷದ ಆಗಿನ ಮಹಾಕಾರ್ಯದರ್ಶಿಯನ್ನು ಪಿನೋಶೆ ಸರ್ಕಾರ ಕೊಲೆ ಮಾಡಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಪಿನೋಶೆ ಬಂಧನವನ್ನು ಬೆಂಬಲಿಸುವ 'ಕ್ರಿಮಿನಲ್ ಪಿನೋಶೆ' 'ಕಾಣೆಯಾದ ಬಂಧಿ' ಎಂಬ ಫಲಕಗಳನ್ನು ಹೊತ್ತ ಪ್ರತಿಭಟನಾಕಾರರು



ಶರತ್ ಚಂದ್ರ

ಮೂರು ಲಕ್ಷ ಫ್ರೆಂಚ್ ವಿದ್ಯಾರ್ಥಿಗಳ ಮುಷ್ಕರ

ಫ್ರಾನ್ಸ್‌ನಲ್ಲಿ ಸ್ಕೂಲಲ್ಲಿ ಶಿಕ್ಷಕರನ್ನು ಹೆಚ್ಚಿಸುವ, ಶಿಕ್ಷಣ ಉತ್ತಮ ಪಡಿಸುವ ಬೇಡಿಕೆ ಮೇಲೆ, ದೇಶಾದ್ಯಂತ ಹಲವಾರು ಸಣ್ಣ-ದೊಡ್ಡ ಪಟ್ಟಣಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಮುಷ್ಕರದಲ್ಲಿ ಭಾಗವಹಿಸಿದರು. ಫ್ರಾನ್ಸ್‌ನಾದ್ಯಂತ ಸುಮಾರು ಮೂರು ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದರು ಎನ್ನಲಾಗಿದೆ. ಪ್ಯಾರಿಸಿನಲ್ಲಿ ಭಾರೀ ವಿದ್ಯಾರ್ಥಿಗಳ ಮೆರವಣಿಗೆಯನ್ನು ಪೋಲಿಸರು ತಡೆಯಲು ಪ್ರಯತ್ನಿಸಿದಾಗ ಹಿಂಸಾತ್ಮಕ ಘರ್ಷಣೆ ನಡೆದವು. ಪ್ಯಾರಿಸಿನಲ್ಲಿ ಐದೂವರೆ ಸಾವಿರ ಪೋಲಿಸರನ್ನು ವಿದ್ಯಾರ್ಥಿಗಳ ಮೇಲೆ ಹರಿಯಬಿಡಲಾಗಿದ್ದು, ಈ ಮೆರವಣಿಗೆ ಪಾರ್ಲಿಮೆಂಟ್‌ಗೆ ಹೊರಟಿತ್ತು. ಪಾರ್ಲಿಮೆಂಟಿನಲ್ಲಿ ಶಿಕ್ಷಣದ ಬಜೆಟ್ ಬಗ್ಗೆ ಚರ್ಚೆ ನಡೆಸುವ ದಿನ ಈ ವಿದ್ಯಾರ್ಥಿ ಮುಷ್ಕರ ಸಂಯೋಜಿಸಲಾಗಿತ್ತು.

ನೈಜೀರಿಯಾದಲ್ಲಿ ಸಾಗರ ತೈಲ-ಬಾವಿಗಳ ಪೈಪ್‌ಲೈನ್‌ನಲ್ಲಿ ಸೋರಿಕೆ - ಭಾರೀ ದುರಂತ

ನೈಜೀರಿಯಾದ ಸಾಗರ ತೈಲ-ಬಾವಿಗಳಿಂದ ಕರಾವಳಿಗೆ ಬರುವ ಪೈಪ್‌ಲೈನ್‌ಗಳು ಅಲ್ಲಲ್ಲಿ ಮುರಿದು, ಸೋರಿಕೆಯಿಂದ ಸ್ಫೋಟಗಳು, ಬೆಂಕಿಗಳು ಕಾಣಿಸಿಕೊಂಡಿದ್ದು ಭಾರೀ ದುರಂತಕ್ಕೆ ಕಾರಣವಾಗಿದೆ. ಸೋರಿಹೋದ ತೈಲ ರಾಶಿ ಸಾಗರದಲ್ಲಿ ತೇಲುತ್ತಿದ್ದು ತೀವ್ರ ಪರಿಸರ - ಹಾನಿಗೆ ಕಾರಣವಾಗಿದೆ. ಇದಕ್ಕೆ ಕಾರಣ ದೇಶದ ಮೂರನೇ ಭಾಗ ತೈಲ ಉತ್ಪಾದಿಸುವ ಮೊಬಿಲ್‌ನ ನಿರ್ಲಕ್ಷ್ಯ ಕಾರಣವೆಂಬುದು ಸ್ಪಷ್ಟ. ಮೊಬಿಲ್ ಕಂಪನಿ ಪೈಪ್‌ಲೈನ್ ಮುರಿದು ಹೋಗಿರುವುದು 'ಬುಡಮೇಲು ಕೃತ್ಯ' ಎಂದು ಹೇಳಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ತೈಲ-ಕಂಪನಿಗಳ ಕೈಗೊಂಬೆಯಾದ ಮಿಲಿಟರಿ ಸರ್ಕಾರ ಮೊಬಿಲ್‌ನ ಪಾತ್ರವನ್ನು ಮರೆ ಮಾಚಲು, ಈ ಸುದ್ದಿಯನ್ನೇ ಇಲ್ಲದಂತೆ ಮಾಡಲು ಪ್ರಯತ್ನಿಸುತ್ತಿರುವುದು ಜನರನ್ನು ರೊಚ್ಚಿಗೆಬ್ಬಿಸಿದೆ.

ಈ ದುರಂತದಿಂದ ಕಷ್ಟಕ್ಕೊಳಗಾದ ಹಲವು ಪ್ರದೇಶಗಳಲ್ಲಿ ಮೊಬಿಲ್ ಕಂಪನಿ ವಿರುದ್ಧ ಅತೃಪ್ತಿ ದಂಗೆಯಾಗಿ ಪರಿಣಮಿಸುತ್ತಿದೆ. ಕಂಪನಿ ಮೇಲೆ ಭಾರಿ ನಷ್ಟದ ಮೊಕದ್ದಮೆ ಹೂಡಲಾಗುತ್ತಿದೆ. ಈವರೆಗೆ 30 ಮಿಲಿಯ ಡಾಲರುಗಳಷ್ಟು ಪರಿಹಾರಕ್ಕೆ ಬೇಡಿಕೆ ಬಂದಿದೆ ಎನ್ನಲಾಗಿದೆ.

ಮಾಜಿ ಕಮ್ಯುನಿಸ್ಟ್ ನಾಯಕತ್ವದಲ್ಲಿ ಇಟಲಿಗೆ ಹೊಸ ಸರ್ಕಾರ

ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ವಿಶ್ವಾಸಮತ ಕಳೆದುಕೊಂಡ ಪ್ರೊಡಿಯವರ 'ಒಲಿವ್ ಬ್ರಾಂಚ್' ಒಕ್ಕೂಟದ ಸರ್ಕಾರದ ಪತನದ ನಂತರ, ಮಾಜಿ ಕಮ್ಯುನಿಸ್ಟ್‌ನ ನಾಯಕತ್ವದಲ್ಲಿ ಹೊಸ ಸರ್ಕಾರ ಅಧಿಕಾರ ವಹಿಸಿಕೊಂಡಿದೆ. ಎರಡನೇ ಮಹಾಯುದ್ಧದ ನಂತರ 56ನೇ ಸರ್ಕಾರದ ನಾಯಕತ್ವವನ್ನು ಮಾಜಿ ಕಮ್ಯುನಿಸ್ಟ್ ಡಿಆಲೆಮಾ ವಹಿಸುತ್ತಾರೆ ಎಂಬುದು ವಿಶೇಷವಾಗಿದೆ. ಆದರೆ ಅದೇ ಸಮಯದಲ್ಲಿ ಎಡ-ಮಧ್ಯಮ ಪಂಥೀಯ ಸರ್ಕಾರದ ಬದಲು ಎಡ-ಮಧ್ಯಮ-ಬಲಪಂಥೀಯರ 'ಕಿಚಡಿ' ಸರ್ಕಾರ ರಚಿತವಾಗಿದೆ. ಈ ಸರ್ಕಾರಕ್ಕೆ ಸೋಶಿಯಲ್ ಡೆಮಾಕ್ರಾಟರು, ಕ್ರಿಶ್ಚಿಯನ್ ಡೆಮಾಕ್ರಾಟರು, ಮಾಜಿ ಕಮ್ಯುನಿಸ್ಟ್ ಪಕ್ಷ, ಮಾಜಿ ಕಮ್ಯುನಿಸ್ಟ್ ಪಕ್ಷದಿಂದ ಸಿಡಿದು ಬಂದಿರುವ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷ, ಕ್ಯಾಥೊಲಿಕ್ ಪಕ್ಷ - ಎಲ್ಲದರ ಬೆಂಬಲವಿದೆ. ಆದ್ದರಿಂದ ಸಂಖ್ಯಾಬಲಕ್ಕೆ ತೊಂದರೆಯಾಗದಿದ್ದರೂ, ನೀತಿಬದ್ಧ ನಿಲುವು ಇಲ್ಲದಿರುವ ಸಾಧ್ಯತೆ ಇದೆ.

ಎರಡನೇ ಮಹಾಯುದ್ಧದ ನಂತರದ ವರ್ಷಗಳಲ್ಲಿ ತನ್ನ ಫ್ಯಾಸಿಸ್ಟ್-ವಿರೋಧಿ ಹೋರಾಟದಲ್ಲಿ ಗಳಿಸಿದ ಭಾರಿ ಜನ ಬೆಂಬಲದ ಜತೆ ಪ್ರಮುಖ ರಾಜಕೀಯ ಶಕ್ತಿಯಾಗಿದ್ದ ಹಾಗೂ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷವಾಗಿದ್ದ ಇಟಾಲಿಯನ್ ಕಮ್ಯುನಿಸ್ಟ್ ಪಕ್ಷವನ್ನು ಅಧಿಕಾರದಿಂದ ಹೊರಗಿಡುವುದೇ ಇಟಲಿಯ ಎಲ್ಲಾ ರಾಜಕೀಯ ಮೈತ್ರಿಗಳ ಮೂಲ ಉದ್ದೇಶವಾಗಿತ್ತು. ಕ್ರಿಶ್ಚಿಯನ್ ಡೆಮಾಕ್ರೆಟರು, ಸೋಶಿಯಲ್ ಡೆಮಾಕ್ರೆಟರು ಹಾಗೂ ಇತರ ಸಣ್ಣ ಪಕ್ಷಗಳು ಕಿತ್ತಾಡುತ್ತಾ, ವರ್ಷಕ್ಕೊಮ್ಮೆ ಸರ್ಕಾರ ಬೀಳುತ್ತಾ ಆದರೆ ಕಮ್ಯುನಿಸ್ಟರನ್ನು ಅಧಿಕಾರದಿಂದ ಹೊರಗಿಡುವುದರಲ್ಲಿ ಸಫಲವಾಗುತ್ತಾ - ಹೀಗೆ ನಡೆದಿತ್ತು ಇಟಲಿಯ ರಾಜಕೀಯ. ಮಾಫಿಯಾ ಜತೆ ಈ ಮೈತ್ರಿಕೂಟ ಶಾಮೀಲಾಗಿತ್ತು, ಭ್ರಷ್ಟವಾಗುತ್ತಾ ನಡೆದಿತ್ತು.

90 ರ ದಶಕದ ಆರಂಭದ ಹೊತ್ತಿಗೆ ಇಟಲಿಯ ರಾಜಕೀಯ ವೇಗವಾಗಿ ಬದಲಾಗ ಹತ್ತಿತ್ತು. ಕ್ರಿಶ್ಚಿಯನ್-ಸೋಶಿಯಲ್ ಡೆಮಾಕ್ರಾಟ್ ಮೈತ್ರಿಕೂಟ ತೀರಾ ಜನರ ಕೋಪಕ್ಕೆ ತುತ್ತಾಯಿತು. ಆದರೆ ಅದೇ ಹೊತ್ತಿಗೆ ಇಟಲಿ ಕಮ್ಯುನಿಸ್ಟ್ ಪಕ್ಷ ಪೂರ್ವ ಯೂರೋಪಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದ- ಲೆನಿನ್‌ವಾದ ಬಿಟ್ಟುಕೊಟ್ಟು ಎಡ - ಪ್ರಜಾಸತ್ತಾತ್ಮಕ ಪಕ್ಷವಾಗಿ ರೂಪುಗೊಳ್ಳಲು ಆರಂಭವಾಗಿತ್ತು. ಇದನ್ನು ವಿರೋಧಿಸಿದ (ಸುಮಾರು ಮೂರನೇ ಒಂದು ಭಾಗ ಪ್ರತಿನಿಧಿಗಳು) ಕಮ್ಯುನಿಸ್ಟರು ಹೊಸ ಮಾರ್ಕ್ಸ್‌ವಾದಿ- ಲೆನಿನ್‌ವಾದಿ ಪಕ್ಷವೊಂದನ್ನು ಕಟ್ಟಿದ್ದಾರೆ. ಮಧ್ಯಮ ಪಂಥೀಯ ಹಲವು ಪಕ್ಷಗಳು ಹುಟ್ಟಿಕೊಂಡಿದ್ದು, ಎಡ-ಮಧ್ಯಮ ಪಂಥೀಯ ಮೈತ್ರಿಕೂಟದ ಸಾಧ್ಯತೆಗಳು ಹೆಚ್ಚಿದ್ದು, ಜನ-ಪರ ಆರ್ಥಿಕ ನೀತಿಗಳನ್ನು ಪಾಲಿಸುವ ಸಾಧ್ಯತೆ ಹೆಚ್ಚಿತ್ತು. ಕಳೆದ ಸರ್ಕಾರ ಅಂತಹ ಮೈತ್ರಿಕೂಟವಾಗಿದ್ದರೂ, ಬಜೆಟ್‌ನಲ್ಲಿ ಆ ಬಗ್ಗೆ ಬದ್ಧತೆ ಕಾಣದಿದ್ದ ಇಟಲಿಯ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಕಮ್ಯುನಿಸ್ಟ್ ಪಕ್ಷ ತನ್ನ ಬೆಂಬಲ ಹಿಂತೆಗೆದುಕೊಂಡಿತ್ತು.

ಗಡ್ಡ ಇಲ್ಲದಿದ್ದರೆ ಹಳದಿ ಬಟ್ಟೆ ಇಲ್ಲವೆ ಉಕ್ಕಿನ ಬಳೆ!

ಇದು ಅಮೆರಿಕದ ಬೆಂಬಲಿತ ಅಫಘಾನಿಸ್ತಾನಿನ ತಾಲಿಬಾನ್ ಸರ್ಕಾರದ ಧರ್ಮಾಂಧ ಆಳ್ವಿಕೆಯ ಆಜ್ಞೆ. ತಾಲಿಬಾನ್ ಸರ್ಕಾರದ ಆಜ್ಞೆ ಪ್ರಕಾರ ಮುಸ್ಲಿಂ ಗಂಡಸರೆಲ್ಲ ಗಡ್ಡ ಬಿಡಬೇಕು, ಇಲ್ಲದಿದ್ದರೆ ಕಾನೂನು ಬಾಹಿರ. ಮುಸ್ಲಿಂರಲ್ಲದಿದ್ದರೆ ಅವರು ಅದನ್ನು ಪುರಾವೆ ಸಹಿತ ತೋರಿಸಬೇಕು. ಹಿಂದೂಗಳಾಗಿದ್ದಲ್ಲಿ ಹಳದಿ ಬಟ್ಟೆ ಕಟ್ಟಿಕೊಳ್ಳಬೇಕು. ಸಿಖ್ಖರಾಗಿದ್ದರೆ ಉಕ್ಕಿನ ಬಳೆ ತೊಡಬೇಕು. ಈ ಯಾವ ನಿಶಾನೆಯೂ ಇಲ್ಲದಿದ್ದರೆ ಶಿಕ್ಷೆ. ಎಂತಹ ಧರ್ಮಾಂಧ ಆಡಳಿತ!

ಸಿಐಟಿಯು ದೇವದುರ್ಗ ತಾಲ್ಲೂಕು ಸಮಾವೇಶ

ರೈತ-ಕಾರ್ಮಿಕರು ಒಂದಾಗಿ ಹೋರಾಟ ಮಾಡುವುದು ಅವಶ್ಯ ಇದೆ ಎಂದು ಕ.ಪ್ರಾಂತ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಚಂದ್ರಶೇಖರ ಬಾಳೆ ಯವರು ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಹಳ್ಳಿಯಲ್ಲಿ ರೈತರು ಕಚ್ಚಾ ಪದಾರ್ಥವನ್ನು ತಯಾರು ಮಾಡಿ ಪಟ್ಟಣಗಳಿಗೆ ಕಳಿಸುತ್ತಾರೆ. ಪಟ್ಟಣದಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಅದನ್ನು ಸಿದ್ಧ ವಸ್ತುವನ್ನಾಗಿ ಮಾಡುತ್ತಾರೆ. ಇವರಿಬ್ಬರ ಶ್ರಮದಿಂದ ತಯಾರಾದ ವಸ್ತುವಿನಿಂದ ಮಾಲಕರು ಲಾಭ ಪಡೆಯುತ್ತಾರೆ. ಆದರೆ ರೈತ-ಕಾರ್ಮಿಕರು ತಮ್ಮ ಕನಿಷ್ಠ ಜೀವನ ಸಾಗಿಸುವುದು ಕಷ್ಟವಾಗಿದೆ ಎಂದು ನುಡಿದರು.

ಮುಖ್ಯ ಅತಿಥಿ ಮಲ್ಲಯ್ಯ ಜಾಲಹಳ್ಳಿ ಮಾತನಾಡಿ ಕಾರ್ಮಿಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಈಗ ಸಿಐಟಿಯು ಅಡಿಯಲ್ಲಿ ಸೇರಿ ಕೆಂಪು ಧ್ವಜ ಹಿಡಿದು ತಮ್ಮ ಬೇಡಿಕೆಗಳ ಪರಿಹಾರಕ್ಕಾಗಿ ಹೋರಾಟ ಮಾಡಬೇಕೆಂದರು.

ರೈತ ಸಂಘದ ಬಸವನ ಗೌಡ ದೇಸಾಯಿ, ಎಸ್‌ಎಫ್‌ಐ ನ ಅಪ್ಪಯ್ಯ ನಾಯ್ಕ, ಡಿವೈಎಫ್‌ಐ ನ ಸಿ.ಎಸ್. ನಾಡಗೌಡ ಶುಭಕೋರಿ ಮಾತನಾಡಿದರು.

ಲಾರಿ ಹಮಾಲರ, ಕಟ್ಟಿಗೆ ಕಾರ್ಮಿಕರ, ಅಂಗನವಾಡಿ ನೌಕರರ, ಪಿ.ಹೆಚ್.ಇ. ಕಾರ್ಮಿಕರ , ಕಟ್ಟಡ ಕಾರ್ಮಿಕರ ಮತ್ತು ಡ್ರೈವರ್-ಕ್ಲೀನರ್ ಕಾರ್ಮಿಕರ ಮತ್ತು ಗ್ರಾಮ ಪಂಚಾಯತ್ ನೌಕರರ ಸಂಘಗಳು ಸೇರಿದ್ದ ಈ ಸಭೆಯ ಅಧ್ಯಕ್ಷತೆಯನ್ನು ರಂಗಮ್ಮ ವಹಿಸಿದ್ದರು. ಪ್ರಾಸ್ತವಿಕ ಭಾಷಣವನ್ನು ಸಿಐಟಿಯು ಜಿಲ್ಲಾ ಸಮಿತಿ ಸದಸ್ಯ ಪಿ.ಗಿರಿಯಪ್ಪ ಮಾಡಿದರು.

13 ಜನರ ಸಂಘಟನಾ ಸಮಿತಿಯನ್ನು ಆರಿಸಲಾಯಿತು. ಪ್ರಧಾನ ಸಂಚಾಲಕರಾಗಿ ಪಿ.ಗಿರಿಯಪ್ಪ ಮತ್ತು 5 ಜನ ಸಹ ಸಂಚಾಲಕರಾಗಿ ಆಯ್ಕೆಯಾದರು.

ಕುಂದಾಪುರದಲ್ಲಿ ಮಹಿಳಾ ಸಮಾವೇಶ

ಕುಂದಾಪುರ: ಸೆಪ್ಟೆಂಬರ್ 14: ಮಹಿಳೆಯರಿಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಸಮಾನತೆ ದೊರಕಿಸಿ ಕೊಡುವ ನಿಟ್ಟಿನಲ್ಲಿ ಮೀಸಲಾತಿ ಬೇಕಾಗಿದೆ. ಎಂಬುದಾಗಿ ಖ್ಯಾತ ನ್ಯಾಯವಾದಿ ಶ್ಯಾಮಲಾ ಭಂಡಾರಿ ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಾ ನುಡಿದರು.

ಯಾರೋ ಯಾದವದ್ವಯರು ಮಸೂದೆಯನ್ನು ವಿರೋಧಿಸಿದ್ದಾರೆ ಎನ್ನುವುದಕ್ಕಿಂತಲೂ ಪುರುಷ ಪ್ರಧಾನ ವ್ಯವಸ್ಥೆ ಈ ಮಸೂದೆಯನ್ನು ವಿರೋಧಿಸುತ್ತಿದೆ. ಎಂದು ತಿಳಿಯ ಬೇಕಾಗಿದೆ. ಎನ್ನುತ್ತಾ ಮಹಿಳಾ ಮೀಸಲಾತಿಯ ವಿರೋಧ ಎಂದರೆ ಪುರುಷ ಪ್ರಧಾನ ವ್ಯವಸ್ಥೆಯ ಪುಷ್ಟೀಕರಣ ಎಂದು ತಿಳಿಯಬೇಕಾಗಿದೆ ಎಂದರು. ಜನ ಸಮುದಾಯದ ಐವತ್ತು ಶೇಕಡಾ ಭಾಗ ಮಹಿಳೆಯರೇ ಆಗಿರುವಾಗ, ಪ್ರತಿನಿಧಿತ್ವದ ಮೀಸಲಾತಿ 33 ಶೇಕಡಾಕ್ಕೆ ಯಾಕೆ ಸೀಮಿತವಾಗಬೇಕು; ಅದೂ 50 ಶೇಕಡಾ ಆಗಬೇಕು ಎಂಬುದಾಗಿ ಇನ್ನೋರ್ವ ಅತಿಥಿ ನಿವೃತ್ತ ಪ್ರಿನ್ಸಿಪಾಲರಾದ ಸಿ.ಕೆ. ಐತಾಳ ಒತ್ತಾಯಿಸಿದರು. ಮಹಿಳೆಯರು ನಮ್ಮ ರಾಜಕೀಯ ಪ್ರಕ್ರಿಯೆಯಲ್ಲಿ ಹೆಚ್ಚೆಚ್ಚು ಸೇರಿಕೊಳ್ಳುವುದರಿಂದ, ದೇಶದ ಆರ್ಥಿಕತೆಗೇನೂ ನಷ್ಟವಾಗುವುದಿಲ್ಲ. ಮಹಿಳೆಯರಿಗೆ ಪ್ರತಿನಿಧಿಗಳು ಆಯ್ಕೆಮಾಡುವ ಮತದಾನದ ಹಕ್ಕು ಕೊಡಬಹುದಾದರೆ, ಅವರಿಗೆ ಆಡಳಿತದಲ್ಲಿ ಪ್ರತಿನಿಧಿತ್ವದ ಸ್ಥಾನ ಯಾಕೆ ಕೊಡಬಾರದು ಎಂದು ಅವರು ಪ್ರಶ್ನಿಸಿದರು.

ಸಿ.ಐ.ಟಿ.ಯು. ದ.ಕ ಜಿಲ್ಲಾಸಮಿತಿ ಕಾರ್ಯದರ್ಶಿ ಬಿ. ಮಾಧವ ಅವರು ಮಾತನಾಡುತ್ತಾ, ಸಮಾನತೆಗಾಗಿ ನಡೆಯುವ ಹೋರಾಟದಲ್ಲಿ ಮೀಸಲಾತಿ ಒಂದು ಹೆಜ್ಜೆ ಮಾತ್ರ; ಅದೇ ಅಂತಿಮ ಗುರಿಯಲ್ಲ. 50 ಶೇಕಡಾ ಮೀಸಲಾತಿ ಬಂದರೂ ಸಮಾನತೆ ಬಂದಿತೆಂದು ಅರ್ಥವಲ್ಲ. ಮೀಸಲಾತಿಯಿಂದ ಎಲ್ಲ ಸಮಸ್ಯೆಗಳೂ ಶೋಷಣೆ ದೌರ್ಜನ್ಯಗಳೂ ಅಂತ್ಯವಾಗಲಾರವು. ಶೋಷಣೆ ದೌರ್ಜನ್ಯಗಳಿಗೆ ಕಾರಣವಾದ ಪಾಳೆಯಗಾರೀ ವ್ಯವಸ್ಥೆಯ ವಿರುದ್ಧವಾಗಿ ನಡೆಯುವ ಜನತೆಯ ಹೋರಾಟದ ಒಂದು ಭಾಗವಾಗಿ ಮಹಿಳಾ ಸಮಾನತೆಯ ಚಳುವಳಿಗಳೂ, ಮಹಿಳಾ ಮೀಸಲಾತಿ ಹೋರಾಟಗಳೂ ಇರುತ್ತವೆಯೆಂದರು. ಸಂಪ್ರದಾಯವಾದಿಗಳ ಆಡಳಿತ ಬಂದಲ್ಲಿ ಅದಕ್ಕೆ ಮೊದಲ ಬಲಿ ಆಗುವವಳು ಮಹಿಳೆ ಎಂಬುದಾಗಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜನವಾದಿ ಮಹಿಳಾ ಸಂಘಟನೆ ರಾಜ್ಯ ಅಧ್ಯಕ್ಷೆ ಕೆ.ಎಸ್. ವಿಮಲಾ ನುಡಿದರು. ಅಫ್ಘಾನಿಸ್ತಾನದಲ್ಲಿ ಬಂದಿರುವ ತಾಲಿಬಾನ್ ಆಡಳಿತ, ಪಾಕಿಸ್ಥಾನದಲ್ಲಿ ಜಾರಿಗೆ ಬರಲಿರುವ ಇಸ್ಲಾಮಿಕ್ ಕಾನೂನುಗಳ ಕೆಟ್ಟ ಅನುಭವದ ರುಚಿ ಈಗಾಗಲೇ ಅಲ್ಲಿನ ಮಹಿಳೆಯರಿಗೆ ಆಗುತ್ತಲಿದೆಯೆಂದು ವಿವರಿಸಿದರು.

ಕುಂದಾಪುರ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಉತ್ಪಲಾ ಸ್ವಾಗತಿಸಿದರು. ಕಾರ್ಯದರ್ಶಿ ಗುಣರತ್ನ ವಂದಿಸಿದರು. ತಾಲ್ಲೂಕಿನ ಬೇರೆ ಬೇರೆ ಪ್ರದೇಶಗಳ ಮಹಿಳಾ ಮಂಡಲ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು, ದುಡಿಯುವ ಮಹಿಳೆಯರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

'ಮಹಿಳೆಯರ ಸ್ಥಾನ ಮನೆಯಲ್ಲೇ' ಎಂಬ ಆರ್.ಎಸ್.ಎಸ್. ಕಣ್ಣೋಟಕ್ಕೆ ಮಹಿಳಾ ಸಂಘಟನೆಗಳ ವಿರೋಧ

ಅಕ್ಟೋಬರ್ 22 ರಂದು ನವದೆಹಲಿಯಲ್ಲಿ ಆರಂಭವಾದ ಶಿಕ್ಷಣ ಮಂತ್ರಿಗಳ ಸಮ್ಮೇಳನದ ಆವರಣದಲ್ಲಿ ಐದು ರಾಷ್ಟ್ರೀಯ ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಎಲ್ಲಾ ರಾಜ್ಯಗಳ ಶಿಕ್ಷಣ ಮಂತ್ರಿಗಳನ್ನು ಭೇಟಿ ಮಾಡಿ ಸರಕಾರೀ ಶಾಲೆಗಳಲ್ಲಿ ಪಠ್ಯಕ್ರಮವನ್ನು ಪರಿಷ್ಕರಿಸುವ ಆರ್.ಎಸ್.ಎಸ್. ಅಜೆಂಡಾವನ್ನು ಬಲವಾಗಿ ವಿರೋಧಿಸಬೇಕು ಎಂದು ಆಗ್ರಹ ಪಡಿಸಿದರು. ಕೇಂದ್ರ ಮಾನವ ಸಂಪನ್ಮೂಲಗಳ ಮಂತ್ರಿ ಮುರುಳಿ ಮನೋಹರ ಜೋಷಿಯವರಿಗೂ ಒಂದು ಮನವಿ ಪತ್ರ ಸಲ್ಲಿಸಿ ಅವರ ಸಚಿವಾಲಯ ಮುಂದಿಟ್ಟ ಪ್ರಸ್ತಾವಗಳನ್ನು ಬಲವಾಗಿ ಪ್ರತಿಭಟಿಸಿದರು.

'ಮಕ್ಕಳ ಪಾಲನೆಯಲ್ಲಿ ಆಳವಾದ ಕಾಳಜಿ ವಹಿಸಿರುವ ನಾಗರಿಕರ ಗಮನಕ್ಕೆ ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಹೆಸರಲ್ಲಿ ತರಬಯಸುವ 'ಹಿಂದುತ್ವ' ಅಜೆಂಡಾ ಕಂಡು ಗಾಬರಿಯಾಗಿದೆ' ಎಂದಿರುವ ಈ ಮನವಿ ಪತ್ರ ವೇದ, ಉಪನಿಷತ್ತುಗಳನ್ನು ಕಲಿಸಬೇಕೆನ್ನುವ, ಅಲ್ಪಸಂಖ್ಯಾತರ ಅಧೀನವಿರುವ ಶಿಕ್ಷಣ ಸಂಸ್ಥೆಗಳ ಹಕ್ಕುಗಳ ಗ್ಯಾರಂಟಿ ನೀಡುವ ಸಂವಿಧಾನದ 30ನೇ ಕಲಮನ್ನು ರದ್ದು ಮಾಡಬೇಕೆನ್ನುವ ಶಿಫಾರಸುಗಳಿಗೆ ಆಕ್ಷೇಪ ವ್ಯಕ್ತಪಡಿಸಿದ್ದಲ್ಲದೆ, 'ಲಿಂಗ ಪಕ್ಷಪಾತ'ಕ್ಕೂ ಆಕ್ಷೇಪ ವ್ಯಕ್ತಪಡಿಸಿದೆ.

'ವಿದ್ಯಾರ್ಥಿನಿಯರಿಗೆ ಮನೆ ನೋಡಿಕೊಳ್ಳುವ ಬಗ್ಗೆ ಶಿಕ್ಷಣ ನೀಡಬೇಕು ಎಂಬ ನಿರ್ದಿಷ್ಟ ಶಿಫಾರಸಿನ ಮೂಲಕ ಬಹಿರಂಗವಾಗಿಯೇ ಲಿಂಗ ಪಕ್ಷಪಾತ ವ್ಯಕ್ತಗೊಂಡಿದೆ. ಮಹಿಳೆಯರ ಸ್ಥಾನ ಮನೆಯಲ್ಲಿಯೇ ಎಂಬ ಆರ್.ಎಸ್.ಎಸ್.ನ ತಿಳುವಳಿಕೆಯನ್ನು ಪ್ರಚುರಪಡಿಸಲು ಇದನ್ನು ಸೇರಿಸಿರಬೇಕು" ಎಂದು ಮನವಿ ಟೀಕಿಸಿದೆ.

ಮುಂದುವರೆದು ಈ ಮನವಿ "ಭಾರತಕ್ಕೆ ತನ್ನ ಬಹುರೂಪಿ ಪರಂಪರೆಯ ಬಗ್ಗೆ, ತನ್ನ ಅಸಂಖ್ಯಾತ ಬಹು ಆಯಾಮಗಳ ಸಂಸ್ಕೃತಿಗಳ ಬಗ್ಗೆ ಹೆಮ್ಮೆಯಿದೆ. ಈ ಪರಂಪರೆಗಳನ್ನು ಏಕರೂಪಗೊಳಿಸಬೇಕು ಎಂಬ ಆರ್.ಎಸ್.ಎಸ್. 'ತಜ್ಞ'ರ ಸಲಹೆಗಳು, ಶಾಲೆಗಳಲ್ಲಿ ಇಂತಹ ಸಂಕುಚಿತ ಹಾಗೂ ಕೋಮುವಾದಿ ವಿಚಾರಗಳನ್ನು ಕಲಿಸುವುದು ದೇಶದ ಐಕ್ಯತೆಯ ಭವಿಷ್ಯದ ಮೇಲೆ ಅತ್ಯಂತ ಅಪಾಯಕಾರಿ ಪರಿಣಾಮ ಬೀರಲಿದೆ" ಎಂದಿದೆ.

ಜಾತ್ಯಾತೀತ ಮೌಲ್ಯಗಳ ಆಧಾರದಲ್ಲಿ ಈಗ ಪಠ್ಯ ಪುಸ್ತಕಗಳಲ್ಲಿರುವ ಲಿಂಗ ಪಕ್ಷಪಾತ ಇಲ್ಲದ ಶಿಕ್ಷಣದ ಪಠ್ಯಕ್ರಮವನ್ನು ಪ್ರಜಾಪ್ರಭುತ್ವೀಕರಣಗೊಳಿಸಬೇಕು ಎಂದಿರುವ ಈ ಮಹಿಳಾ ಸಂಘಟನೆಗಳು ಇತಿಹಾಸವನ್ನು ವಿಕೃತಗೊಳಿಸುವ ಹಾಗೂ ಶಿಕ್ಷಣ ಪಠ್ಯ ಕ್ರಮವನ್ನು ಕೋಮುಗ್ರಸ್ತಗೊಳಿಸುವ ಶಿಫಾರಸುಗಳನ್ನು ಹಿಂತೆಗೆದುಕೊಳ್ಳಬೇಕು ಎಂದೂ ಅವು ಒತ್ತಾಯಿಸಿವೆ.

ಮನವಿ ಪತ್ರಕ್ಕೆ ಸಹಿ ಮಾಡಿದ ಮಹಿಳಾ ಸಂಘಟನೆಗಳೆಂದರೆ ಅಖಿಲ ಭಾರತ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ), ಅಖಿಲ ಭಾರತ ಮಹಿಳಾ ಸಮ್ಮೇಳನ (ಎಐಡಬ್ಲ್ಯುಸಿ), ಜಂಟಿ ಮಹಿಳಾ ಕಾರ್ಯಕ್ರಮ (ಜೆಡಬ್ಲ್ಯುಪಿ), ರಾಷ್ಟ್ರೀಯ ಭಾರತೀಯ ಮಹಿಳಾ ಒಕ್ಕೂಟ (ಎನ್‌ಎಫ್‌ಐಡಬ್ಲ್ಯು), ಯಂಗ್ ವಿಮೆನ್ಸ್ ಕ್ರಿಶ್ಚಿಯನ್ ಅಸೋಸಿಯೇಷನ್(ವೈಡಬ್ಲ್ಯುಸಿಎ)

(ಐ.ಎನ್.ಎನ್)

ಆರ್.ಎಸ್.ಪಿ. ಪ್ರಧಾನ ಕಾರ್ಯದರ್ಶಿ ನಿಧನ

ಆರ್.ಎಸ್.ಪಿ. ಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸುಶೀಲ್ ಭಟ್ಟಾಚಾರ್ಯ ಅಕ್ಟೋಬರ್ 14 ರಂದು ದಿಲ್ಲಿಯ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಸಿಪಿಐ(ಎಂ) ಕೇಂದ್ರ ಸಮಿತಿಯ ಪರವಾಗಿ ಪ್ರಕಾಶ್ ಕಾರಟ್ ಹಾಗೂ ಜೋಗೇಂದ್ರ ಶರ್ಮ ಅವರ ಪಾರ್ಥಿವ ಶರೀರದ ಮೇಲೆ ಪುಷ್ಪ ಗುಚ್ಛ ಅರ್ಪಿಸಿದರು.

ಕಾಮ್ರೇಡ್ ದಶರಥ್ ದೇಬ್‌ರವರ ಅಂತಿಮ ಕ್ರಿಯೆಯಲ್ಲಿ ಪಾಲ್ಗೊಳ್ಳಲು ತ್ರಿಪುರಾಕ್ಕೆ ತೆರಳಿದ್ದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ದೆಹಲಿಗೆ ಹಿಂದಿರುಗಿದ ಕೂಡಲೇ ಆರ್.ಎಸ್.ಪಿ.ಯ ಕೇಂದ್ರ ಸಮಿತಿಗೆ ಒಂದು ಪತ್ರ ಬರೆದು ತಮ್ಮ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದರು. "ಕಾಮ್ರೇಡ್ ಸುಶೀಲ್ ಭಟ್ಟಾಚಾರ್ಯ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಸಕ್ರಿಯ ಪಾತ್ರ ವಹಿಸಿದ್ದರು. ದಿಲ್ಲಿಯಲ್ಲಿ ಸುಮಾರು ಐದು ದಶಕಗಳ ಕಾಲ ಅವರು ಕಾರ್ಮಿ... ವರ್ಗದ ಆಂದೋಲನಕ್ಕೆ ಸಲ್ಲಿಸಿದ ಸೇ... ಸದಾ ಸ್ಮರಣೀಯ. ಯು.ಟಿ.ಯು.ಸಿ... ಅಧ್ಯಕ್ಷರಾಗಿ ಅವರು ಸದಾ ಕಾರ್ಮಿ... ವರ್ಗದ ಐಕ್ಯತೆಗಾಗಿ ಶ್ರಮಿಸಿದರು... ಆಳವಾದ ಬದ್ಧತೆ ಹೊಂದಿದ್ದ... ಸ್ವಾರ್ಥತ್ಯಾಗದ ಮನೋಭಾವ... ಮುಖಂಡರಾಗಿದ್ದವರು. ಈಗ... ಸಂದರ್ಭದಲ್ಲಿ ಅವರ ನಿಧ... ಆರ್.ಎಸ್.ಪಿ.ಗೆ ಹಾಗೂ ಎ... ಆಂದೋಲನಕ್ಕೆ ಒಂದು ದೊಡ್ಡ ನಷ್ಟ... ಎಂದು ಬರೆದಿರುವ ಸುರ್ಜಿತ್‌ರವರು ಸಿಪಿಐ(ಎಂ) ಕೇಂದ್ರ ಸಮಿತಿಯ ಪರವಾ... ಅವರ ಎಲ್ಲಾ ಸಹಯೋಗಿಗಳಿಗೆ ಹಾಗು... ಕುಟುಂಬದ ಸದಸ್ಯರಿಗೆ ಹಾರ್ದಿಕ ಸಂತಾ... ವ್ಯಕ್ತಪಡಿಸಿದ್ದಾರೆ.

(ಐಎನ್‌ಎನ್)

"ವಿಮಾ ಖಾಸಗೀಕರಣ ಕ್ರಮ: ಭಾರತವನ್ನು ಹಣಕಾಸು ಜೂಜುಕೋರರ ಮರ್ಜಿಗೆ ಒಳಪಡಿಸುವ ಕ್ರಮ"

ಸಿಪಿಐ(ಎಂ) ಪೊಲಿಟ್‌ಬ್ಯೂರೋ

ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆಯುವ ಉದ್ದೇಶದಿಂದ ವಿಮಾ ಹತೋಟಿ ಪ್ರಾಧಿಕಾರ(IRA) ಮಸೂದೆಯನ್ನು ಸಂಸತ್ತಿನ ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವ ವಾಜಪೇಯಿ ಸರಕಾರದ ಯೋಜನೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ವಿರೋಧಿಸಿದೆ. ವಿಮಾ ಉದ್ದಿಮೆಯನ್ನು ಪ್ರವೇಶಿಸ ಬಯಸುವ ಭಾರತೀಯ ಕಂಪನಿಗಳು 26% ವಿದೇಶಿ ಇಕ್ವಿಟಿ ಹೊಂದಬಹುದು ಎಂದು ಈ ಬಗ್ಗೆ ನೇಮಿಸಿದ 'ಮಂತ್ರಿಗಳ ಗುಂಪು' ಶಿಫಾರಸು ಮಾಡಿದೆಯೆಂದು ವರದಿಯಾಗಿದೆ. ಇದು ವಿಮಾ ವಲಯದಲ್ಲಿ ಬಂಡವಾಳಕ್ಕೆ ಅವಕಾಶ ಕೊಡುವ ಹಿಂಬಾಗಿಲ ವಿಧಾನ ಎಂದು ಸಿಪಿಐ(ಎಂ) ಟೀಕಿಸಿದೆ.

ಈ ಕ್ರಮದ ಮೂಲಕ ಬಿಜೆಪಿ ವಿಮಾ ವಲಯದಲ್ಲಿ ವಿದೇಶಿ ಕಂಪನಿಗಳಿಗೆ ಅವಕಾಶ ನೀಡಬಾರದೆಂಬ ತನ್ನದೇ ನಿಲುವನ್ನು ಕೈಬಿಟ್ಟಿದೆ. 1997 ರಲ್ಲಿ ಇದೇ ಮಸೂದೆಯನ್ನು ತರುವುದನ್ನು ಬಿಜೆಪಿ ವಿರೋಧಿಸಿದ್ದನ್ನು ನೆನಪಿಸಿರುವ ಸಿಪಿಐ(ಎಂ) ವಿಮಾವಲಯದ ಖಾಸಗೀಕರಣವನ್ನು ತಾನು ಸಂಪೂರ್ಣವಾಗಿ ವಿರೋಧಿಸುವುದಾಗಿ ಹೇಳಿದೆ. ಹಣಕಾಸು ವಲಯವನ್ನು ಇನ್ನಷ್ಟು ಉದಾರೀಕರಿಸಿದರೆ ಅದು ದೇಶಕ್ಕೆ ವಿನಾಶಕಾರಿ. ದಕ್ಷಿಣ-ಪೂರ್ವ ಏಶ್ಯಾದ ದೇಶಗಳ ಅನಾಹುತಗಳ ಅನುಭವದ ನಂತರವೂ ಬಿಜೆಪಿ ನೇತೃತ್ವದ ಸರಕಾರ ಇದೇ ದಾರಿಯಲ್ಲಿ ಮುಂದುವರೆಯುತ್ತಿರುವುದು ಆಶ್ಚರ್ಯಕರ. ಹಣಕಾಸು ವಲಯವನ್ನು ಇನ್ನಷ್ಟು ಉದಾರೀಕರಿಸುವುದು ಸಲ್ಲ. ಏಕೆಂದರೆ ಹಾಗೆ ಮಾಡಿದರೆ ಭಾರತ ಹಣಕಾಸು ಜೂಜುಕೋರರ ಮರ್ಜಿಗೆ ಒಳಪಡುತ್ತದೆ ಎಂದು ಎಚ್ಚರಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು ಹಾಗೂ ಈ ಕುರಿತು ಕಾಳಜಿಯಿರುವ ಎಲ್ಲಾ ನಾಗರೀಕರು ಭಾರತದ ಸ್ವಾವಲಂಬೀ ಅಭಿವೃದ್ಧಿಯ ಆಧಾರವನ್ನೇ ಹಾಳುಗೆಡಹುವ ಈ ಕ್ರಮವನ್ನು ಪ್ರತಿಭಟಿಸಬೇಕು ಎಂದು ಕರೆ ನೀಡಿದೆ.

(ಐಎನ್‌ಎನ್)

ಶಿರಾದಲ್ಲಿ ರೈತರ ಪ್ರಾಣದ ಜೊತೆ ಚೆಲ್ಲಾಟ


ಪುಟ 1 ರಿಂದ

ಯಿಂದ ವೇಗವಾಗಿ ತರುತ್ತಿರುವ ಪಕ್ಷಗಳು ಅವೇ ನೀತಿಗಳ ಫಲವಾಗಿ ರೊಚ್ಚಿಗೆದ್ದ ರೈತರಿಗೆ ನಾಯಕತ್ವ ನೀಡಿ ಅವರ ಸಿಟ್ಟನ್ನು ತಪ್ಪುದಾರಿಗೆ ಎಳೆದಿದ್ದಾರೆ. ಹೊಸ ಆರ್ಥಿಕ ನೀತಿಗಳ ಪರಿಣಾಮಗಳಿಂದ ಸಂಕಟಕ್ಕೊಳಗಾದ ರೈತರು ಚಳುವಳಿಗಿಳಿದರೆ ಅವರನ್ನು ಸಮಾಧಾನ ಮಾಡುವ, ಅವರ ಬೇಡಿಕೆಗಳಿಗೆ ಕಿವಿಗೊಡುವ ಬದಲು ಅವರನ್ನು ದಮನ ಮಾಡುವ ರಾಜ್ಯ ಸರ್ಕಾರದ ಪೋಲೀಸು ನೀತಿ ಈ ಘೋರ ಹತ್ಯೆಗೆ ಕಾರಣವಾಗಿದೆ.

ರೈತರ ಹೋರಾಟ ಯಾವುದಕ್ಕಾಗಿ?

ಆದರೆ ರೈತರು ಈ ಶಕ್ತಿಗಳ ಮೋಸಕ್ಕೆ ಬಲಿ ಬೀಳಬಾರದು. ಹೊಸ ಆರ್ಥಿಕ ನೀತಿ, ಆದರ ಆಮದು ನೀತಿ ವಿರುದ್ಧ, ಲಾಭಕರ ಬೆಲೆಗಳಿಗಾಗಿ ಹೋರಾಟ ನಡೆಸಬೇಕು. ಈ ಬೆಲೆಗಳನ್ನು ಖಾತರಿಗೊಳಿಸುವ ಕೊಳ್ಳುವ ವ್ಯವಸ್ಥೆಗಾಗಿ ಹೋರಾಟ ನಡೆಸಬೇಕು. ಮುಖ್ಯವಾಗಿ ಬೆಲೆ ಕುಸಿದಾಗ ಕೃಷಿಕರ ಬೆಂಬಲಕ್ಕೆ ಧಾವಿಸುವ ಕೃಷಿ ಬೆಲೆ ಸಂರಕ್ಷಣೆಗಾಗಿ ಒಂದು ವಿಶೇಷ ನಿಧಿ ರಾಷ್ಟ್ರಮಟ್ಟದಲ್ಲಿ ಆಗಬೇಕು ಎಂದು ಹೋರಾಡಬೇಕು. ಯಾವ ಸರ್ಕಾರ ರೈತರ ಹಾಗೂ ಜನರ ಜೀವನದ ಜೊತೆ ಜೂಜಾಟವಾಡುತ್ತಿದೆಯೋ ಅದೇ ಕೇಂದ್ರ ಸರ್ಕಾರ ಅವರ ಸಹಾಯಕ್ಕೆ ಬೇಕಾಗುವ ಬೆಲೆ ತೆರಲು ಒತ್ತಾಯಿಸಬೇಕು. ಅದೇ ಸಮಯದಲ್ಲಿ ಚಳುವಳಿಯನ್ನು ಮರ್ದನ ಮಾಡುವ ರಾಜ್ಯ ಸರ್ಕಾರದ ಪೋಲಿಸ್ ನೀತಿಯ ವಿರುದ್ಧ ಪ್ರತಿಭಟಿಸಬೇಕು.

ವಾರದ ವ್ಯಂಗ್ಯ ಚಿತ್ರ



ಇನ್ನೊಂದು ಮೈಲಿಗಲ್ಲು

ಪುಟ 4 ರಿಂದ

ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸಂಘಟನೆಯ ದೌರ್ಬಲ್ಯಗಳನ್ನು ನಿವಾರಿಸಲು

ಪಕ್ಷದ ಮಹಾಧಿವೇಶನದ ಕಾರ್ಯಕ್ರಮದ ಪಟ್ಟಿಯಲ್ಲಿದ್ದ ಎರಡನೇ ಮಹತ್ವದ ವಿಷಯವೆಂದರೆ ರಾಜಕೀಯ-ಸಂಘಟನಾತ್ಮಕ ವರದಿ. ಈ ವರದಿಯ ರಾಜಕೀಯ ಭಾಗ ರಾಜಕೀಯ ನಿರ್ಣಯದಲ್ಲಿದ್ದ ವಿಷಯಗಳ ವಿವರಣೆಯಾಗಿತ್ತು. ರಾಜಕೀಯ ನಿರ್ಣಯದಲ್ಲಿ ಸಂಘಟನಾ ವಿಷಯಗಳ ಕುರಿತ ಭಾಗವನ್ನು ವರದಿಯಲ್ಲಿ ವಿವರವಾಗಿ ಪರಿಶೀಲಿಸಲಾಗಿತ್ತು. ವಿವಿಧ ಸ್ತರಗಳಲ್ಲಿ, ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಕೆಲಸಗಳಲ್ಲಿ ಪಕ್ಷದ ಹಲವು ನ್ಯೂನ್ಯತೆಗಳು, ದೌರ್ಬಲ್ಯಗಳನ್ನು ವಿವರವಾಗಿ ಈ ವರದಿ ಪರಿಶೀಲಿಸಿತ್ತು. ಈ ವರದಿಯ ಮೇಲಿನ ಚರ್ಚೆಗಳಲ್ಲಿ ಉದಾರೀಕರಣ ನೀತಿಗಳ ವಿರುದ್ಧ ಹೋರಾಟದೊಂದಿಗೇ ಬೂರ್ಜ್ವಾ ಭೂಮಾಲಕ ಸಿದ್ಧಾಂತಗಳ ವಿರುದ್ಧ ಸೈದ್ಧಾಂತಿಕ ಹೋರಾಟವೂ ಬಹಳ ಮಹತ್ವದ್ದು ಎಂಬ ವಿಚಾರ ಮೂಡಿಬಂತು. ಎರಡನೆಯದಾಗಿ, ಪಕ್ಷದ ಸದಸ್ಯರ ಸೈದ್ಧಾಂತಿಕ ಮಟ್ಟವನ್ನು ಮತ್ತು ಪ್ರಜ್ಞೆಯನ್ನು ಎತ್ತರಿಸಲು ಹೆಚ್ಚಿನ ಒತ್ತು ನೀಡಬೇಕು. ಈ ಪ್ರಶ್ನೆಯ ಮೇಲೆ ಪಕ್ಷದ ಮುಖಂಡತ್ವದ ಮೇಲೆ ತೀಕ್ಷ್ಣವಾದ ಟೀಕೆಗಳು ಬಂದವು. ಈಗಿನ ಕ್ಲಿಷ್ಟ ಸನ್ನಿವೇಶದಲ್ಲಿ ಪಕ್ಷ ತನ್ನ ಜವಾಬ್ದಾರಿ ನಿರ್ವಹಿಸಬೇಕಾದರೆ ಈ ಸೈದ್ಧಾಂತಿಕ ದೌರ್ಬಲ್ಯವನ್ನು ನಿವಾರಿಸುವುದು ಅಗತ್ಯ ಎಂದು ಪ್ರತಿನಿಧಿಗಳು ಹೇಳಿದರು. ಇಂದಿನ ಸಮಾಜದಲ್ಲಿ ಹೆಚ್ಚುತ್ತಿರುವ ಅವನತಿ ಹಾಗೂ ಗ್ರಾಹಕ ಮೌಲ್ಯಗಳ ಎದುರು ಪಕ್ಷದ ಸದಸ್ಯರ ಸೈದ್ಧಾಂತಿಕ ಮಟ್ಟವನ್ನು ಎತ್ತರಿಸದಿದ್ದರೆ ಭ್ರಷ್ಟಾಚಾರ, ಅನ್ಯ ಜೀವನ ಶೈಲಿಯಂತಹ ಬೂರ್ಜ್ವಾ ದುರ್ಗುಣಗಳು ಪಕ್ಷವನ್ನು ಹೆಚ್ಚೆಚ್ಚು ತಟ್ಟಲಾರಂಭಿಸುತ್ತವೆ. ಸೈದ್ಧಾಂತಿಕ ಪ್ರಶ್ನೆಗಳ ಕುರಿತಂತೆ ಪಕ್ಷದ ಶಿಕ್ಷಣದಲ್ಲಿ ಭಾರತೀಯ ಇತಿಹಾಸ ಮತ್ತು ತತ್ವಶಾಸ್ತ್ರದ ಮೇಲೆ ಹೆಚ್ಚಿನ ಒತ್ತು ನೀಡಬೇಕು, ಪಕ್ಷದ ಶಿಕ್ಷಣದ ಒಂದು ನಿರ್ದಿಷ್ಟ ಯೋಜನೆಯಿರಬೇಕು ಎಂದು ಸೂಚಿಸಲಾಯಿತು. ಸಂಘಟನೆ ಕುರಿತಂತೆ ಒಂದು ವಿಶೇಷ ಪ್ಲೀನಂ ನಡೆಸುವ ಸಲಹೆಗಳು ಬಂದವು.

ಪಕ್ಷದ ಕಾರ್ಯಕ್ರಮವನ್ನು ಸಮಯಬದ್ಧಗೊಳಿಸುವ ಪ್ರಶ್ನೆಯನ್ನು ಹಲವಾರು ಪ್ರತಿನಿಧಿಗಳು ಎತ್ತಿದರು ಹಲವು ಕಾರಣಗಳಿಂದಾಗಿ ಪಕ್ಷದ ಮುಖಂಡತ್ವಕ್ಕೆ ಈ ಜವಾಬ್ದಾರಿ ನಿರ್ವಹಿಸಲು ಸಾಧ್ಯವಾಗಲಿಲ್ಲ. 1964 ರಲ್ಲಿ ಅಂಗೀಕರಿಸಿದ ಕಾರ್ಯಕ್ರಮದಲ್ಲಿ ಪ್ರಭುತ್ವ, ನಮ್ಮ ರಣನೀತಿ, ಕಾರ್ಯತಂತ್ರ, ವರ್ಗ ಮೈ... ಕುರಿತಾದ ಮೂಲಭೂತ ನಿಲುವುಗಳ... ಸ್ಥೂಲವಾಗಿ ಈಗಲೂ ಸರಿಯಾಗಿರು... ವುದರಿಂದ ಕಾರ್ಯತಂತ್ರವನ್ನು ಅದ... ಆಧಾರದಲ್ಲೇ ರೂಪಿಸಬಹುದು ಎಂ... ವಿಚಾರದಿಂದ ನಾವು ಕೆಲಸ ಮಾಡುತ್ತಿದ್ದೆವು... ಆದರೆ ಇದು ಸಾಕಷ್ಟು ವಿವರಣ... ನೀಡುವುದಿಲ್ಲ ಎಂಬುದು ಪ್ರತಿನಿಧಿಗಳ... ಭಾವನೆಯಾಗಿತ್ತು. ಆದ್ದರಿಂದ ಈಗಾಗಲೆ... ಸಿದ್ಧವಾಗಿರುವ ಸಮಯಬದ್ಧಗೊಂಡ ಪಕ್ಷದ... ಕಾರ್ಯಕ್ರಮದ ಕರಡನ್ನು ಕೇಂದ್ರ... ಸಮಿತಿಯಲ್ಲಿ ಚರ್ಚಿಸಿ, ನಂತರ ಕೆಳಗಿನ... ಶಾಖೆಗಳ ಮಟ್ಟಗಳಲ್ಲೂ ಅದನ್ನು ಚರ್ಚಿಸಿ... ಅಂತಿಮಗೊಳಿಸಲಾಗುವುದು. ಮುಂದಿನ... ವರ್ಷದ ಅಂತ್ಯದೊಳಗೆ ಅದನ್ನು ಅಂತಿಮ... ಗೊಳಿಸಲಾಗುವುದು ಎಂದು ಕೇಂದ್ರ ಸಮಿ... ಭರವಸೆ ನೀಡಿತು.

ಹೊಸ ವಿಶ್ವಾಸ

ಹದಿನಾರನೇ ಮಹಾಧಿವೇಶನದ... ಮೊದಲು ಪಕ್ಷದೊಳಗೆ ದೊಡ್ಡ... ವಿಭಜನೆಗಳಿವೆ ಎಂಬ ಬಗ್ಗೆ ಬಹಳಷ್ಟು... ಊಹಾಪೋಹಗಳಿದ್ದವು. ಆದರೆ ವಾಸ್ತವ... ಸಂಗತಿ ತದ್ವಿರುದ್ಧವಾದದ್ದು ಎಂದು ಈಗ... ಸಿದ್ಧವಾಗಿದೆ. ಸಾಮ್ರಾಜ್ಯಶಾಹಿ ಮತ್ತು... ಬಂಡವಾಳಶಾಹಿ ಭೂಮಾಲಕ ವರ್ಗ... ಶಕ್ತಿಗಳು ಒಡ್ಡಿರುವ ಗಂಭೀರ... ಸವಾಲುಗಳನ್ನು ಎದುರಿಸಲು ಪಕ್ಷದಲ್ಲಿ... ಐಕ್ಯತೆ ಬೇಕೆಂಬ ಜನಗಳ ಮನದಲ್ಲಿನ... ಆಕಾಂಕ್ಷೆ ಮಹಾಧಿವೇಶನದಲ್ಲಿ ಪ್ರತಿಬಿಂಬಿತ... ಗೊಂಡಿತು. ಈ ಆಕಾಂಕ್ಷೆಯಿಂದಾಗಿಯೇ... ವರದಿಯನ್ನು ಸರ್ವಾನುಮತದಿಂದ... ಅಂಗೀಕರಿಸಲಾಯಿತು. ಸಂಗಾತಿಗಳ... ಮನದಲ್ಲಿ ಹೊಸ ವಿಶ್ವಾಸವನ್ನು ಈ... ಮಹಾಧಿವೇಶನ ಮೂಡಿಸಿತು. ಪಕ್ಷ... ಮುಂಬರುವ ದಿನಗಳಲ್ಲಿ ಇನ್ನೂ ದೊಡ್ಡ... ಪ್ರಮಾಣದ ಹೋರಾಟಗಳಿಗೆ ನೇತೃತ್ವ... ನೀಡಬೇಕಾಗಿದೆ ಎಂಬ ಸಂದೇಶದೊಂದಿಗೆ... ಪ್ರತಿನಿಧಿಗಳು ಹಿಂದಿರುಗಿದರು.

ಹದಿನಾರನೇ ಮಹಾಧಿವೇಶನದ... ಯಶಸ್ವೀ ಸಮಾರೋಪದ ನಂತರ ಕೆಲವು... ಬೂರ್ಜ್ವಾ ಪತ್ರಿಕೆಗಳು ಗೊಂದಲ ಸೃಷ್ಟಿಸುವ... ಪ್ರಯತ್ನ ನಡೆಸಿವೆ. ಮುಖ್ಯವಾಗಿ... ಪೊಲಿಟ್‌ಬ್ಯೂರೋ ಚುನಾವಣೆಯ... ಮುಂದೂಡಿಕೆಗೆ ಮತ್ತು ಕೇಂದ್ರ... ಸಮಿತಿಯಲ್ಲಿ ಮಹಿಳಾ ಪ್ರಾತಿನಿಧ್ಯ... ಕಡಿತಗೊಂಡಿವೆ ಎಂದು ಹೇಳಲಾದ... ವಿಷಯಗಳ ಮೇಲೆ. ಆದರೆ ಅದರ... ತಂತ್ರಗಳು ಯಶಸ್ವಿಯಾಗುವುದಿಲ್ಲ. ಹದಿನಾರನೇ ಮಹಾಧಿವೇಶನ ದೇಶದ... ಕಮ್ಯುನಿಸ್ಟ್ ಆಂದೋಲನದ ಇತಿಹಾಸದಲ್ಲಿ... ಇನ್ನೊಂದು ಮೈಲಿಗಲ್ಲು ಎಂದು... ಸಾಬೀತಾಗುತ್ತದೆ.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ